ಜನಶಕ್ತಿ



ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 37
ಸೆಪ್ಟೆಂಬರ್ 09, 2012

ಪುಟ 16

ರೂ. 5/-









ಕೋಮು ಉದ್ವಿಗ್ನತೆ ಸೃಷ್ಟಿಸುವ ಸಂಚುಗಳು

ಕರ್ನಾಟಕದಲ್ಲಿ ಅಪೌಷ್ಠಿಕತೆ : ಆಳುವವರು ಮನಗಾಣದ ಭೀಕರ ಮುಖ





ಮಂಗಳೂರು : ಬಿಜೆಪಿ ಮಹಾನಗರ ಪಾಲಿಕೆ ವೈಫಲ್ಯಗಳ ವಿರುದ್ಧ ಮಹಾಧರಣಿ

ಬೆಳವಣಕಿ ಪಂಚಾಯ್ತಿ : ವಲಸೆ ತಡೆದ 'ಉದ್ಯೋಗಖಾತ್ರಿ'





ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಬಳಲುತ್ತಿರುವ ಯುವಜನ

ವಿಕಿಲೀಕ್ಸ್ ಹೀರೋ ಜೂಲಿಯನ್ ಅಸ್ಸಾಂಜ್ ಬಂಧನಕ್ಕೆ ಅಮೇರಿಕಾ ಮತ್ತು ಇಂಗ್ಲೆಂಡ್ ಹೆಣಗಾಟ

ಜಯ



ಲಂಡನ್ ಪೊಲೀಸರ ನಾಚಿಕೇಗೇಡಿನ ಹೆಜ್ಜೆ:

ಲಂಡನ್‌ನಲ್ಲಿರುವ ಈಕ್ವೆಡಾರ್ ದೇಶದ ರಾಯಭಾರಿ ಕಛೇರಿ ಸುತ್ತಲೂ ಇಂಗ್ಲೆಂಡ್ ಪೊಲೀಸರು ಹೊಂಚು ಹಾಕಿ ಕಾಯುತ್ತಿದ್ದಾರೆ. ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜ್ ಈಕ್ವೆಡಾರ್ ದೇಶದ ರಾಯಭಾರಿ ಕಛೇರಿಯೊಳಗೆ ಅಡಗಿ ಕುಳಿತು ಎರಡು ತಿಂಗಳೇ ಕಳೆದಿವೆ. ಅಸ್ಸಾಂಜ್‌ನ್ನು ಏನಾದರಾಗಲೀ ಬಂಧಿಸಿಯೇ ತೀರಬೇಕೆಂಬ ಅಮೇರಿಕಾದ ಮಹದಾಸೆಗೆ ಇಂಗ್ಲೆಂಡ್ ಇಂಬು ಕೊಡುತ್ತಿರುವ ಮತ್ತೊಂದು ಹಂತವಿದು. ಈ ಮೊದಲಿಗೆ ಲಂಡನ್‌ನಲ್ಲಿ ಗೃಹಬಂಧನದಲ್ಲಿದ್ದು ನಂತರ ಅಸ್ಸಾಂಜ್ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಅವರಿಗೆ ಇಂಗ್ಲೆಂಡಿನ ಸರ್ವೋಚ್ಚ ನ್ಯಾಯಾಲಯ ಜಾಮೀನು ನೀಡದೆ ತಳ್ಳಿಹಾಕಿದ್ದರಿಂದ ಲಂಡನ್ ಪೊಲೀಸರು ತನ್ನನ್ನು ಹಿಡಿದೇ ತೀರುತ್ತಾರೆಂದು, ನಂತರ ಸ್ವೀಡನ್ ದೇಶಕ್ಕೆ ಒಪ್ಪಿಸುತ್ತಾರೆಂದು ಖಾತರಿಯಾಗಿತ್ತು. ಒಮ್ಮೆ ಅವರೇನಾದರೂ ಸ್ವೀಡನ್ ಪೊಲೀಸರಿಗೆ ಸಿಕ್ಕಲ್ಲಿ ಅವರ ಮೇಲೆ ಅಮೇರಿಕಾ ಸರ್ಕಾರದ ಚಿತಾವಣೆಯಿಂದಾಗಿ ಅತ್ಯಾಚಾರ, ಲೈಂಗಿಕ ಕಿರುಕುಳದ ಆರೋಪ ಹೊರಿಸಿರುವ ಸ್ವೀಡನ್ ಪೊಲೀಸರು ಏನು ಮಾಡುತ್ತಾರೆಂದು ಅಸ್ಸಾಂಜ್‌ಗೆ ಗೊತ್ತಿತ್ತು.

ಈ ಹಿನ್ನೆಲೆಯಲ್ಲಿ ಈಕ್ವೆಡಾರ್ ಸರ್ಕಾರ ತಾನು ಆಶ್ರಯ ನೀಡುವುದಾಗಿ ಭರವಸೆ ನೀಡಿದ ಮೇಲೆ ಲಂಡನ್ ಪೊಲೀಸರ ಕಣ್ಣುತಪ್ಪಿಸಿ ಅಲ್ಲಿಯ ರಾಯಭಾರಿ ಕಛೇರಿಯೊಳಗೆ ಅಸ್ಸಾಂಜ್ ಅಡಗಿ ಕುಳಿತುಕೊಂಡಿದ್ದಾರೆ. ಈಕ್ವೆಡಾರ್‌ನ ರಾಯಭಾರ ಕಛೇರಿಯೊಳಗೆ ಲಂಡನ್ ಪೊಲೀಸರು ಪ್ರವೇಶಿಸಲು ಅಂತರಾಷ್ಟ್ರೀಯ ಒಪ್ಪಂದದಂತೆ ಅವಕಾಶವಿಲ್ಲ. ಆದರೂ ರಾಯಭಾರ ಕಛೇರಿಗೆ ನೀಡಲಾಗಿರುವ ರಿಯಾಯಿತಿಯನ್ನು ರದ್ದುಗೊಳಿಸಿ ಅಸ್ಸಾಂಜ್ ಅವರನ್ನು ಬಂಧಿಸಲೇಬೇಕೆಂದು ತನ್ನ ಪೊಲೀಸರಿಗೆ ಲಂಡನ್ ಆಡಳಿತಾಧಿಕಾರಿಗಳು ನೀಡಿರುವ ಲಿಖಿತ ಸಂದೇಶ ಮಾಧ್ಯಮಕ್ಕೆ ಸಿಕ್ಕಿದೆ. ಹೀಗೆ ಶತಾಯಗತಾಯ ರಾಯಭಾರ ನೀತಿ ಸಂಹಿತೆಯನ್ನು ಧಿಕ್ಕರಿಸಿಯೂ ಬಂಧಿಸುವುದಾಗಿ ಬೆದರಿಕೆ ಹಾಕುತ್ತಿರುವ ಲಂಡನ್‌ನ್ನು ಈಕ್ವೆಡಾರ್ ಟೀಕಿಸುವ ಮೂಲಕ ರಾಜತಾಂತ್ರಿಕ ಸಂಘರ್ಷ ಉಂಟಾಗಿದೆ. ಇತ್ತ 34 ಸದಸ್ಯ ರಾಷ್ಟ್ರಗಳ ಪ್ರಾದೇಶಿಕ ಸಂಘಟನೆ ಈಕ್ವೆಡಾರ್‌ಗೆ ಬೆಂಬಲ ನೀಡಿವೆ. ಈ ಬೆಂಬಲ ಕಂಡು ಬ್ರಿಟನ್ ತಾನು ಆ ರೀತಿಯ ಬೆದರಿಕೆಯ ಸಂದೇಶವನ್ನು ಕಳುಹಿಸಿಯೇ ಇಲ್ಲವೆಂದು ನುಣುಚಿಕೊಳ್ಳುತ್ತಿದೆ. ಈಕ್ವೆಡಾರ್ ಕರ್ನಾಟಕ ರಾಜ್ಯದ ಒಂದೂವರೆ ಪಟ್ಟು ವಿಸ್ತೀರ್ಣವಿದ್ದು, ದಕ್ಷಿಣ ಅಮೇರಿಕಾ ಖಂಡದ ಸಣ್ಣ ರಾಷ್ಟ್ರಗಳಲ್ಲೊಂದಾಗಿದೆ. ಅಮೇರಿಕಾ, ಬ್ರಿಟನ್, ಸ್ವೀಡನ್, ಕೆನಡಾದಂತಹ ಬಲಾಢ್ಯ ರಾಷ್ಟ್ರಗಳು ಅಸಾಂಜ್‌ನ್ನು ಬಂಧಿಸಿ ಉಗ್ರಶಿಕ್ಷೆಗೆ ಗುರಿಪಡಿಸಬೇಕೆಂದು ಹೊರಟಿರುವಾಗ ಅವಕ್ಕೆದುರಾಗಿ ಈಕ್ವೆಡಾರ್ ನಿಂತಿರುವುದು ಎದೆಗಾರಿಕೆಯೇ ಸರಿ.

ವಿಕಿಲೀಕ್ಸ್ – ಶೋಧನಾ ಮಾಧ್ಯಮಲೋಕಕ್ಕೆ ಹೊಸ ಆಯಾಮ:

ಜೂಲಿಯನ್ ಅಸ್ಸಾಂಜ್, ಮೂಲತ: ಆಸ್ಟ್ರೇಲಿಯಾ ಮೂಲದ ಕಂಪ್ಯೂಟರ್ ತಂತ್ರಜ್ಞ ನಂತರ ಶೋಧನಾ ಪತ್ರಿಕಾರಂಗದ ಮೂಲಕ ಮಾಧ್ಯಮ ಲೋಕಕ್ಕೆ ಒಂದು ಹೊಸ ಆಯಾಮ ನೀಡಿದ ಮಾಂತ್ರಿಕ. ಮಾಹಿತಿ ತಂತ್ರಜ್ಞಾನವನ್ನು ಅಂತರ್ಜಾಲ ಮತ್ತು ಪ್ರಜಾಪ್ರಭುತ್ವದ ಒಳಿತಿಗಾಗಿ ಬಳಸುವ ಮೂಲಕ ತಂತ್ರಜ್ಞರನ್ನು ಬೆರಗುಗೊಳಿಸಿದವ. ಅಮೇರಿಕಾ ಒಳಗೊಂಡಂತೆ ಹಲವು ದೇಶದ ಆಳುವವರ್ಗಗಳ ಜನ–ವಿರೋಧಿ ರಹಸ್ಯ ಸಂಭಾಷಣೆಗಳನ್ನು ಭೇದಿಸಿ, ಹೊರಹಾಕಿ ಬೆತ್ತಲು ಮಾಡಿದವ, ಸರ್ಕಾರಗಳು ಮತ್ತು ಅವುಗಳ ಆಡಳಿತ ಜನತೆಗೆ ಅಡಿಯಾಳಾಗಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಹೊಂದಿರಬೇಕೆಂಬ ಜಾಗತಿಕ ಕೂಗಿಗೆ ಅಸ್ಸಾಂಜ್ ಒಂದು ಸ್ಫೂರ್ತಿಯುತ ಪ್ರತಿಮೆ. ಅಸ್ಸಾಂಜ್‌ಗಿರುವ ಜನಪ್ರಿಯತೆಯ ನಡುವೆ ಅವರ ಮೇಲಿರುವ ವಿವಾದ ಮತ್ತು ಆರೋಪಗಳೇನೂ ಕಡಿಮೆಯಿಲ್ಲ. ಆದರೆ ಬಹುತೇಕವು ಅವರ ವಿರುದ್ಧದ ಷಡ್ಯಂತ್ರಗಳೂ ಹೌದು. ಅಸ್ಸಾಂಜ್ ಮತ್ತು ವಿಕಿಲೀಕ್ಸ್ ತಂಡದ ಸಾಹಸಮಯ ಹಾದಿ ಜಗತ್ತಿನಾದ್ಯಂತ ಲಕ್ಷಾಂತರ ಯುವ ತಂತ್ರಜ್ಞರಲ್ಲಿ ಸ್ಫೂರ್ತಿಯ ಕಿಡಿ ಹೊತ್ತಿಸಿ ಹಲವು ಸರ್ಕಾರಿ ವೆಬ್‌ಸೈಟ್‌ಗಳನ್ನು ಪ್ರತಿಭಟನೆಯೆಂಬಂತೆ ಹ್ಯಾಕ್ ಮಾಡಲು ಪ್ರೇರೇಪಿಸಿದೆ!

ಆಳುವ ವರ್ಗಗಳ ಮಾಹಿತಿ ಬಹಿರಂಗ - ವಿಕಿಲೀಕ್ಸ್ ಮೇಲೆ ಅಮೇರಿಕಾ ಧಾಳಿ:

ವಿಕಿಲೀಕ್ಸ್ ವೆಬ್‌ಸೈಟ್ ಮೂಲಕ ಪ್ರಪಂಚದಾದ್ಯಂತ ಸರ್ಕಾರ ಅಥವಾ ಯಾವುದೇ ಸಂಸ್ಥೆಗಳಲ್ಲಿ ನಡೆಯುವ ಅಕ್ರಮಗಳ ಮಾಹಿತಿಗಳನ್ನು ಹೊರಹಾಕುವವರಿಗೆ ವೇದಿಕೆ ಒದಗಿಸಿದರು. 2010ರಲ್ಲಿ ಈ ವೆಬ್‌ಸೈಟ್ ಅಂತರಾಷ್ಟ್ರೀಯ ಖ್ಯಾತಿಗೆ ಬಂದದ್ದು ಅಮೇರಿಕಾದ ಮಿಲಿಟರಿ ಮತ್ತು ರಾಯಭಾರದ ರಹಸ್ಯ ಸಂಭಾಷಣೆಗಳು ಮತ್ತು ದಾಖಲಾತಿಗಳನ್ನು ಹೊರಗೆಡಹುವ ಮೂಲಕ. ಬ್ರಾಡ್ಲಿ ಮ್ಯಾನಿಂಗ್ ಎಂಬ ಅಮೇರಿಕಾದ ಸೈನಿಕನೊಬ್ಬ ಮೇ 2010ರಲ್ಲಿ ಅಮೇರಿಕಾದ ರಹಸ್ಯ ಮಿಲಿಟರಿ ಮಾಹಿತಿ ಸಂಗ್ರಹಗಾರದಿಂದ ಲಕ್ಷಾಂತರ ರಾಯಭಾರದ ಕೇಬಲ್ ದಾಖಲೆಗಳನ್ನೆಲ್ಲ ವಿಕಿಲೀಕ್ಸ್‌ಗೆ ರವಾನಿಸಿ, ಪ್ರಕಾಶನ ಮಾಡಿದ್ದಾನೆಂದು ಬಂಧಿಸಲ್ಪಟ್ಟ. ಅವನೇ ಲೀಕ್ ಮಾಡಿದ್ದಾನೋ ಇಲ್ಲವೋ ಇನ್ನೂ ತೀರ್ಮಾನ ಆಗುವ ಮುಂಚೆಯೇ ಅತೀವ ಚಿತ್ರಹಿಂಸೆಗೆ ಅವನನ್ನು ಪೊಲೀಸರು ಗುರಿಮಾಡಿದ್ದಾರೆ: ಅವನ ಬಿಡುಗಡೆಗಾಗಿ 300ಕ್ಕೂ ಹೆಚ್ಚು ನೊಬೆಲ್ ಪುರಸ್ಕೃತರಿಂದ ಹಿಡಿದ ಅತ್ಯುನ್ನತ ಸಾಹಿತಿಗಳು ಮತ್ತು ಬುದ್ಧಿಜೀವಿಗಳು ಒತ್ತಾಯಿಸಿದರೂ ಅಮೇರಿಕಾ ಸರ್ಕಾರ ಮಾತ್ರ ಅವನನ್ನು ಮತ್ತಷ್ಟು ಚಿತ್ರಹಿಂಸೆಗೆ ಗುರಿ ಮಾಡಿದೆಯೇ ಹೊರತು ಇನ್ನೂ ಬಿಡುಗಡೆ ಮಾಡಿಲ್ಲ.



ಈಕ್ವೆಡಾರ್ ದೇಶದ ರಾಯಬಾರ ಕಛೇರಿ : ಲಂಡನ್

ಜಗತ್ತಿನಾದ್ಯಂತ ಜನತೆಗೆ ತಮ್ಮನ್ನು ಆಳುವ ಸರ್ಕಾರಗಳ ರಹಸ್ಯ ರಾಯಭಾರಿ ಸಂಭಾಷಣೆಗಳು ವಿಕಿಲೀಕ್ಸ್ ವೆಬ್‌ಸೈಟ್ ಮೂಲಕ ತಲುಪಿಬಿಟ್ಟವು. ಹೀಗೆ ಇದೊಂದು ವಿಶ್ವದಲ್ಲೇ ಅಪಾಯಕಾರಿ ವೆಬ್‌ಸೈಟ್ ಆ... ಅಮೇರಿಕಾದ ಸರ್ಕಾರದೆದುರು ಜನಪ್ರಿಯತೆ ಗಳಿಸಿತು. ಅಸ್ಸಾಂಜ್ ಮತ್ತು ಬ್ರಾಡ್ಲಿ ಮ್ಯಾನಿಂಗ್ ಜಗತ್ತಿನಾದ್ಯಂತ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸರ್ಕಾರಗಳ ಪಾರದರ್ಶಕತೆಗಾಗಿ ಒತ್ತಾಯಿಸುವ ಹೀರೋಗಳಾದರು. ಅದೇ ವೇಳೆಯಲ್ಲಿ ಅಮೇರಿಕಾ ಸರ್ಕಾರ ವಿಕಿಲೀಕ್ಸ್ ನ್ನು ನಿರ್ನಾಮ ಮಾಡಲು ಎಲ್ಲ ರೀತಿಯ ಧಾಳಿ ನಡೆಸಲಾರಂಭಿಸಿತು. ಆ ವೆಬ್‌ಸೈಟ್‌ನ್ನು ನಿಷ್ಕ್ರಿಯಗೊಳಿಸಲಾಯಿತು. ಆದರೆ ನಿಷ್ಕ್ರಿಯಗೊಳಿಸಿದ ಒಂದೇ ವಾರದಲ್ಲಿ ಹಲವೆಡೆ ಮಿರರ್ ರೂಪದಲ್ಲಿ ವೆಬ್‌ಸೈಟ್ ಮೂಡಿಬಂದದ್ದು ಆ ತಂಡದ ತಾಂತ್ರಿಕ ಕೌಶಲ್ಯಕ್ಕೆ ಸಾಕ್ಷಿ. ವಿಕಿಲೀಕ್ಸ್‌ಗೆ ರವಾನೆಯಾಗುತ್ತಿದ್ದ ಆರ್ಥಿಕ ಸಹಾಯವನ್ನು ಬಂದ್ ಮಾಡಲು ಮಾಸ್ಟರ್ ಕಾರ್ಡ್, ಪೇಪಾಲ್, ಇತ್ಯಾದಿಯಂತಹ ಬ್ಯಾಂಕಿಂಗ್ ಹಾದಿಗಳನ್ನು ಬಂದ್ ಮಾಡಿ ಎಲ್ಲ ಆರ್ಥಿಕ ಮಾರ್ಗಗಳನ್ನು ನಿಲ್ಲಿಸಲಾಯಿತು. ಆದರೂ ಪರ್ಯಾಯ ಹಾದಿಗಳನ್ನು ಹುಡುಕಿಕೊಂಡು ತಲೆಎತ್ತಲು ಅದು ಯತ್ನಿಸುತ್ತಿದೆ.

ಅಮೇರಿಕಾದ ಆಳುವ ವರ್ಗಗಳು ಮತ್ತು ಸರ್ಕಾರ ವಿವಿಧ ದೇಶಗಳಲ್ಲಿ ನಡೆಸಿರುವ ಸಂಚು. ವಿವಿಧ ದೇಶಗಳಲ್ಲಿರುವ ಅಮೇರಿಕಾದ ರಾಯಭಾರ ಕಛೇರಿಗಳು ವಾಸ್ತವವಾಗಿ ರಾಯಭಾರಿ ಕೆಲಸಕ್ಕಿಂತ ಬೇಹುಗಾರಿಕೆ ಕೆಲಸ ಮಾಡುತ್ತಿರುವುದು, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಾಯಕರು ಅಮೇರಿಕಾ... ಕೈಗೊಂಬೆಯಂತೆ ಅಥವಾ ಅದರ ನಿರ್ದೇಶಾನುಸಾರ ತೀರ್ಮಾನ ಕೈಗೊಳ್ಳುವುದು. ಇರಾಕ್‌ನಲ್ಲಿ ಸಮೂಹ ನಾಶ ಶಸ್ತ್ರಾಸ್ತ್ರಗಳು ಇಲ್ಲದೇ ಇದ್ದರೂ ತಾನು ಯುದ್ಧ ಘೋಷಿಸಿದ್ದಾಗಿ ಅಮೇರಿಕಾ ರಾಯಭಾರಿ ಕಛೇರಿಗಳ ಸಂಭಾಷಣೆ, ಇತ್ಯಾದಿಗಳಂತಹ ರಹಸ್ಯ–ಕೇಬಲ್‌ಗಳು ವಿಕಿಲೀಕ್ಸ್ ವೆಬ್‌ಸೈಟ್‌ನಲ್ಲಿ ಹೊರಬಿದ್ದು ಜನತೆಯಲ್ಲಿ ಸಂಚಲನ ಸೃಷ್ಟಿಸಿದರೆ ಅಮೇರಿಕಾದ ಸರ್ಕಾರಕ್ಕೆ ಮುಜುಗರ ಮತ್ತು ತಲೆನೋವು ತಂದವು. ಭಾರತದಲ್ಲಿಯೂ ಸಹ ವಿವಿಧ ಕಾಂಗ್ರೆಸ್, ಬಿಜೆಪಿ, ಮತ್ತು ಇತರ ಪ್ರಾದೇಶಿಕ ಪಕ್ಷಗಳು ಅಮೇರಿಕಾದ ರಾಯಭಾರಿಗಳ ಜೊತೆ ತಮ್ಮ ಆಂತರ್ಯ ಬಿಚ್ಚಿ ಮಾತನಾಡಿರುವ ಸಂಭಾಷಣೆಗಳು ವಿಕಿಲೀಕ್ಸ್‌ಗೆ ದೊರೆತಿವೆ. ಇವುಗಳನ್ನು ರಾಯಭಾರಿ ಕಚೇರಿಗಳ ಮೂಲಕ ಅಮೇರಿಕಾಗೆ ತಲುಪಿಸಿರುವ ಕೇಬಲ್‌ಗಳನ್ನು ವಿಕಿಲೀಕ್ಸ್ 'ದಿ ಹಿಂದೂ' ಪತ್ರಿಕೆ ಜೊತೆಗೆ ಪ್ರಕಟಿಸಿದ್ದು, ಇದು ಇಲ್ಲಿಯ ಆಳುವ ವರ್ಗಗಳ ಆಂತರ್ಯವನ್ನು ಜನತೆ ಎದುರು ಬೆತ್ತಲು ಮಾಡಿತ್ತು.

ಅಮೇರಿಕನ್ ಕಂಪನಿಗಳ ಅಪಾಯಕಾರಿ ಕೃತ್ಯಗಳ ಬಹಿರಂಗ:

ಉದಾಹರಣೆಗೆ, ವಿಕಿಲೀಕ್ಸ್ ಇತ್ತೀಚೆಗೆ ಸ್ಟ್ರಾಟ್‌ಫಾರ್ ಎಂಬ ಖಾಸಗಿ ಬೇಹುಗಾರಿಕೆ ಕಂಪನಿಯ 50ಲಕ್ಷ ಇ–ಮೇಲ್‌ಗಳನ್ನು ಸಾರ್ವಜನಿಕರ ಮುಂದೆ ಬಿಚ್ಚಿಡುವ ಕೆಲಸಕ್ಕೆ ಕೈಹಾಕಿದೆ. ಈ ಕಂಪನಿ ಅಮೇರಿಕಾದ ಸಿಐಎ ಮತ್ತು ಇಸ್ರೇಲ್‌ನ ಮೊಸಾದ್ ಎಂಬ ಸರ್ಕಾರಿ ಬೇಹುಗಾರಿಕೆ ಸಂಸ್ಥೆಗಳೊಂದಿಗೆ ನಡೆಸುತ್ತಿದ್ದ...

ಪುಟ 12 ಕ...

ಸಂಪಾದಕೀಯ

ಫ್ಯಾಸಿಸ್ಟ್ ಶಕ್ತಿಗಳ ಕುರಿತು ಕಟ್ಟೆಚ್ಚರ ಅಗತ್ಯ

ಎರಡು ಕೋಮುಗಳ ಇಬ್ಬರ ಯುವಕರನ್ನು ಬಲಿತೆಗೆದುಕೊಂಡ ಕೋಮು ಗಲಭೆಯಿಂದ ನಲುಗಿದ ಬೆಳಗಾವಿ ನಗರ ನಿಧಾನವಾಗಿ ಸಹಜ ಸ್ಥಿತಿಗೆ ಮರಳುತ್ತಿದೆ ಎಂಬ ವರ್ತಮಾನ ಸಮಾಧಾನಕರವಾಗಿದೆ. ಆದರೆ ರಾಜ್ಯದಲ್ಲಿ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಮತ್ತೆ ಅಧಿಕಾರಕ್ಕೆ ಬರಲು ಹವಣಿಸುತ್ತಿರುವ ಫ್ಯಾಸಿಸ್ಟ್ ಶಕ್ತಿಗಳು ಇಷ್ಟಕ್ಕೆ ಸುಮ್ಮನಾಗಲಾರವು. ದೇಶವು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಇಲ್ಲಿ ಇರುವ ಅಲ್ಪ ಸಂಖ್ಯಾತರೇ ಕಾರಣ ಎಂದು ಬಿಂಬಿಸುತ್ತಾ, ಅವರಿಂದ ಹಿಂದುಗಳಿಗೆ, ಹಿಂದು ನಂಬಿಕೆಗಳಿಗೆ ಅಪಾಯ ಬಂದೊದಗಿದೆ ಎಂಬ ಆತಂಕವನ್ನು ಸೃಷ್ಟಿ ಮಾಡುತ್ತಾ, ಅಲ್ಪ ಸಂಖ್ಯಾತರ ಮೇಲೆ, ಅವರ ಪ್ರಾರ್ಥನಾಲಯಗಳ ಮೇಲೆ ದಾಳಿ ಮಾಡಲು ಪ್ರಚೋದಿಸುವುದು, ಹಿಂದುತ್ವ ಸಂಘಟನೆಗಳು ಅನುಸರಿಸುತ್ತಿರುವ ಫ್ಯಾಸಿಸ್ಟ್ ಕಾರ್ಯವೈಖರಿ. ಮಂಗಳೂರಿನ ಹೋಂ ಸ್ಟೇ ದಾಳಿಯೊಂದಿಗೆ ಹಿಂದು ಓಟುಗಳ ಕ್ರೋಡೀಕರಣಕ್ಕೆ ಮುನ್ನುಡಿ ಬರೆದ ಈ ಶಕ್ತಿಗಳು ಆಸ್ಸಾಂ ಗಲಭೆಯ ವೃತ್ತಾಂತವನ್ನು ಬಂಡವಾಳ ಮಾಡಿಕೊಂಡು ಈಶಾನ್ಯ ರಾಜ್ಯಗಳ ಜನರಿಗೆ ರಾಜ್ಯದಲ್ಲಿ ಮುಸಲ್ಮಾನರಿಂದ ಅಪಾಯವಿದೆ ಎಂಬ ಸುಳ್ಳು ಸುದ್ದಿ ಹಬ್ಬಿಸಿ ಈಶಾನ್ಯ ಭಾರತದ ಜನಗಳ ಆತಂಕದ ಲಾಭ ಪಡೆಯಲು ಯತ್ನಿಸಿದ ಕ್ರೂರಿಗಳು ಇವರು. ಬೆಂಗಳೂರಿನಲ್ಲಿ 'ಆಸ್ಸಾಂ ರಕ್ಷಣಾ ವೇದಿಕೆ' ಹೆಸರಿನಲ್ಲಿ ಪ್ರತಿಭಟನೆಯನ್ನು ಏರ್ಪಡಿಸಿ, ಆರ್.ಎಸ್.ಎಸ್. ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಮಾಡಿದ ಪ್ರಚೋದನಾಕಾರಿ ಭಾಷಣ ಇದನ್ನೇ ಸಾಬೀತು ಪಡಿಸುತ್ತದೆ.

ಭ್ರಷ್ಟಾಚಾರ ಅಧಿಕಾರಕ್ಕಾಗಿನ ಆಂತರಿಕ ಕಿತ್ತಾಟದಿಂದ ಬಿಜೆಪಿಯ ವರ್ಚಸ್ಸು ಪಾತಾಳಕ್ಕೆ ಕುಸಿದಿರುವುದು ಸಂಘ ಪರಿವಾರಕ್ಕೆ ನುಂಗಲಾರದ ತುತ್ತು. ಕಳೆದು ಹೋದ ಮಾನ ಮರ್ಯಾದೆಯನ್ನಂತೂ ಮರಳಿ ಗಿಟ್ಟಿಸಿಕೊಳ್ಳಲು ಸಾಧ್ಯವಿಲ್ಲ. ಸಜ್ಜನ ಹಿಂದುಗಳಿಗೆ ಬಿಜೆಪಿಯೊಂದಿಗೆ ಗುರುತಿಸಿಕೊಳ್ಳುವುದು ಬೇಸರ ತರುವ ವಿಷಯವಾಗಿದೆ. ಪರಿಸ್ಥಿತಿ ಹೀಗಿರುವಾಗ ಮುಂದಿನ ಚುನಾವಣೆಯಲ್ಲಿ ಸಂಘ ಪರಿವಾರಕ್ಕೆ ಲಾಭವಾಗಬೇಕಾದರೆ ಬಹುಸಂಖ್ಯಾತ ಹಿಂದು ಮತಗಳ ಕ್ರೋಡೀಕರಣವೊಂದನ್ನೇ ಅವಲಂಭಿಸಬೇಕಾಗಿದೆ. ಲಿಂಗಾಯಿತರ ಮತಗಳ ಮೇಲಿನ ನಂಬಿಕೆಯೂ ಅವರಿಗೆ ಉಳಿದಿಲ್ಲ. ಜೈಲಿಗೆ ಹೋಗಿ ಬಂದಿರುವ ಯಡಿಯೂರಪ್ಪ ಲಿಂಗಾಯಿತರ ಮತಗಳನ್ನು ಸೆಳೆಯಬಹುದೆಂಬ ವಿಶ್ವಾಸ ಇಲ್ಲದಾಗಿದೆ. ಹೀಗಾಗಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಹಬ್ಬಿಸಿ ರಾಜ್ಯದೆಲ್ಲೆಡೆ ಗಲಭೆಗಳನ್ನು ಉಂಟುಮಾಡಿ ಆ ಮೂಲಕ ಹಿಂದುಗಳ ಓಟುಗಳನ್ನು ಬುಟ್ಟಿಗೆ ಹಾಕಿಕೊಳ್ಳುವುದೊಂದೇ ಅವರ ಕಾರ್ಯತಂತ್ರ, ಇಂತಹ ದುಷ್ಟ ಗುರಿ ಸಾಧನೆಗಾಗಿ ಮಾನವ ರಕ್ತ ಹರಿಸಲು ಫ್ಯಾಸಿಸ್ಟ್ ಶಕ್ತಿಗಳು ಹಿಂದೇಟು ಹಾಕುವುದಿಲ್ಲ. ಹಿಂದೆ ಚುನಾವಣೆಗಳು ನಡೆದಾಗ ಇದೇ ರೀತಿ ಗಲಭೆಗಳನ್ನು ಮಾಡಿ ಲಾಭ ಪಡೆದಿದ್ದಾರೆ. ಈಗ ಚುನಾವಣೆಗಳು ಬರುತ್ತಿದ್ದಂತೆ ಕಾರ್ಯರಂಭ ಮಾಡಿದ್ದಾರೆ.

ರಾಜ್ಯದಲ್ಲಿ ಶಾಂತಿ, ಹಾಗೂ ನೈಜ ಅಭಿವೃದ್ಧಿ ಬಯಸುವ ಜನ ಫ್ಯಾಸಿಸ್ಟ್ ಶಕ್ತಿಗಳ ಇಂತಹ ದುಷ್ಟ ಹುನ್ನಾರಗಳನ್ನು ಗಮನಿಸುವುದು, ಸರಿಯಾಗಿ ಗುರುತಿಸುವುದು ಆಗಬೇಕಾಗಿದೆ. ನಮಗ್ಯಾಕೆ ಬೇಕು ಅದರ ತಲೆನೋವು ಎಂದು ನಿರ್ಲಕ್ಷಿಸುವುದು ಸರಿಯಲ್ಲ. ಜನರ ನೆಮ್ಮದಿಯನ್ನು ಹಾಳು ಮಾಡಲು ಹೇಸದಿರುವ ಈ ಶಕ್ತಿಗಳ ಬಗ್ಗೆ ಯಾರೂ ಯಾವ ಭ್ರಮೆಯನ್ನು ಇಟ್ಟುಕೊಳ್ಳಬಾರದು. ಅಂತಹ ಶಕ್ತಿಗಳಿಗೆ ಯಾವ ಕಾರಣಕ್ಕೂ ಬೆಂಬಲ, ನೆರವು ನೀಡಬಾರದು. ಅವರು ನಡೆಸುವ ಪಿತೂರಿಗಳು, ಅವರ ಗುಪ್ತ ಕಾರ್ಯಚರಣೆ, ಗಲಭೆ ನಡೆಸುವ ಅವರು ರೂಪಿಸುವ ಯೋಜನೆಗಳ ಕುರಿತ ಸಿಗಬಹುದಾದ ಮಾಹಿತಿಗಳನ್ನು ಬಚ್ಚಿಟ್ಟುಕೊಳ್ಳಬಾರದು. ಅವರ ಸಂಶಯಾಸ್ಪದ ಚಲನ ವಲನಗಳ ಬಗ್ಗೆ ಕಟ್ಟೆಚ್ಚರ ವಹಿಸುವುದು, ಅಮಾಯಕರು ಅವರ ಬಲೆಯೊಳಗೆ ಸಿಕ್ಕಿ ಹಾಕಿಕೊಳ್ಳುವುದನ್ನು ತಪ್ಪಿಸಲು ನಮಗೆ ಸಾಧ್ಯವಾದುದೆಲ್ಲವನ್ನೂ ಮಾಡಬೇಕು. ಇದುವೇ ಇಂದು ನಾವು ನಮ್ಮ ದೇಶಕ್ಕಾಗಿ ದೇಶಭಾಂದವರಿಗಾಗಿ ಮಾಡಬಹುದಾದ, ಮಾಡಲೇಬೇಕಾದ ಕರ್ತವ್ಯ.

ಸೆಪ್ಟೆಂಬರ್ 12 ರಾಷ್ಟ್ರವ್ಯಾಪಿ ಆಹಾರ ದಿನಾಚರಣೆಗೆ ಎಡಪಕ್ಷಗಳ ಕರೆ

ಆಹಾರ ಭದ್ರತೆಗಾಗಿನ ಚಳವಳಿಗೆ ಉತ್ತಮ ಪ್ರತಿಕ್ರಿಯೆ

ಸಿಪಿಐ(ಎಂ) ಮತ್ತು ಎಡಪಕ್ಷಗಳು ಕರೆ ನೀಡಿದ ಆಹಾರದ ಹಕ್ಕಿಗಾಗಿ ಚಳವಳಿಗೆ ದೇಶಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಜುಲೈ 30ರಿಂದ ಆಗಸ್ಟ್ 3ರವರೆಗೆ ನಡೆದ ಚಳವಳಿಯಲ್ಲಿ ಲಕ್ಷಾಂತರ ಮಂದಿ ಕೈಜೋಡಿಸಿದ್ದಾರೆ.

ಕುಟುಂಬವೊಂದಕ್ಕೆ ಕೆ.ಜಿ.ವೊಂದಕ್ಕೆ 2 ರೂಪಾಯಿ ವೆಚ್ಚದಲ್ಲಿ 35 ಕಿ.ಲೋ. ಆಹಾರ ಧಾನ್ಯಗಳನ್ನು ಪೂರೈಸಬೇಕು, ಎಪಿಎಲ್ ಮತ್ತು ಬಿಪಿಎಲ್ ಎಂಬ ತಾರತಮ್ಯವನ್ನು ತೆಗೆದುಹಾಕಬೇಕು, ನಗದು ಪಾವತಿಯ ಷರತ್ತನ್ನು ತೆಗೆದುಹಾಕಬೇಕೆಂಬ ಬೇಡಿಕೆಯನ್ನು ಆಧರಿಸಿ ವಿಶಾಲ ತಳಹದಿಯ ಹೋರಾಟವನ್ನು ಎಡಪಕ್ಷಗಳು ಕೈಗೆತ್ತಿಕೊಂಡಿದ್ದವು.

ನವದೆಹಲಿಯಲ್ಲಿ ಐದು ದಿನಗಳ ಧರಣಿಯ ಕೊನೆ ದಿನ ಆಹಾರದ ಭದ್ರತೆಗಾಗಿ ಈಗಿರುವ ಕಾನೂನಿಗೆ ತಿದ್ದುಪಡಿಯನ್ನು ತರಬೇಕು ಎಂದು ಒತ್ತಾಯಿಸಿ ನಾಲ್ಕು ಎಡಪಕ್ಷಗಳ ನಾಯಕರು ಪ್ರಧಾನ ಡಾ. ಮನಮೋಹನ್ ಸಿಂಗ್‌ಗೆ ಲಿಖಿತ ಮನವಿ ಅರ್ಪಿಸಿದರು.


ಸಿಪಿಐ(ಎಂ)ನ ಪ್ರಕಾಶ್ ಕಾರಟ್, ಸಿಪಿಐನ ಎಸ್. ಸುಧಾಕರ ರೆಡ್ಡಿ, ಫಾರ್ವರ್ಡ್ ಬ್ಲಾಕ್‌ನ ದೇಬಬ್ರತ ಬಿಸ್ವಾಸ್, ಆರ್‌ಎಸ್‌ಪಿಯ ಅಬನಿ ರಾಯ್ ಅವರು ಈ ಮನವಿ ಅರ್ಪಿಸಿ ದೇಶಾದ್ಯಂತ ನಡೆಸಿದ ಹೋರಾಟಕ್ಕೆ ದನಿಯಾಗಿ ಪ್ರಧಾನಿಗೆ ಆಗ್ರಹಪತ್ರವನ್ನು ಸಲ್ಲಿಸಿದರು.

ಇದೇ ವೇಳೆ, ಸೆಪ್ಟೆಂಬರ್ 12ರಂದು ಆಹಾರದ ಭದ್ರತಾ ದಿನವನ್ನಾಗಿ ಚಳವಳಿಯಲ್ಲಿ ಪಾಲ್ಗೊಳ್ಳಲು ನಾಲ್ಕು ಎಡ ಪಕ್ಷಗಳು ಕರೆ ನೀಡಿವೆ.

ಆ ದಿನ ಆಹಾರ ನಿಗಮದ ಎಲ್ಲ ಗೋಡಾನ್‌ಗಳ ಮುಂದೆ ಧರಣಿ ಮಾಡಿ ಪಿಕೆಟಿಂಗ್ ನಡೆಸುವಂತೆ ನಾಲ್ಕು ಎಡಪಕ್ಷಗಳ ನಾಯಕರು ಕರೆ ನೀಡಿದ್ದಾರೆ.

ಜುಲೈ 30ರಿಂದ ನಡೆದ ಐದು ದಿನಗಳ ಮಹಾ ಹೋರಾಟದ ಅಂತಿಮ ದಿನ ದೆಹಲಿ, ಹರ್ಯಾಣ ಮತ್ತು ರಾಜಸ್ಥಾನಗಳ ಸಹಸ್ರಾರು ಸಂಖ್ಯೆಯಲ್ಲಿ ಜನತೆ ಭಾಗವಹಿಸಿದ್ದರು. ಸಿಪಿಐನ ಎ.ಬಿ. ಬರ್ಧನ್, ಸಿಪಿಐ(ಎಂ)ನ ಬೃಂದಾ ಕಾರಟ್, ಫಾರ್ವರ್ಡ್ ಬ್ಲಾಕ್‌ನ ದೇವಬ್ರತ ಬಿಸ್ವಾಸ್, ಆರ್‌ಎಸ್‌ಪಿಯ ಅಬನಿ ರಾಯ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಪ್ರಕಾಶ್ ಕಾರಟ್, ಸುಧಾಕರ ರೆಡ್ಡಿ ಸಹಿತ ಎಡಪಕ್ಷಗಳ ಹಲವು ಪ್ರಮುಖ ನಾಯಕರು ಈ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಕಾರ್ಟೂನ್ ಕಾರ್ನರ್



ಜನಶಕ್ತಿ
ಕನ್ನಡ ವಾರಪತ್ರಿಕೆ

ಜನರಿಕ್ ಔಷಧಿ ಹೆಸರಿನಲ್ಲಿ ಕಳಪೆ ಔಷಧಿ ಮಾರುಕಟ್ಟೆಗೆ ಬರುವ ಅಪಾಯವಿಲ್ಲವೇ?

ಡಾ|| ಪ್ರಕಾಶ್ ಸಿ.ರಾವ್

ಭಾಗ–2

ಯಾವುದೇ ಬ್ರಾಂಡ್‌ಗಳಿಲ್ಲದ ಜನೆರಿಕ್ ಔಷಧಗಳ ಅಗತ್ಯದ ಬಗೆಗೆ ಬಹಳ ಚರ್ಚೆ ನಡೆದಿದೆ. ಆದರೆ ಈ ಹೆಸರಿನಲ್ಲಿ ಕಳಪೆ ಔಷಧಗಳು ಮಾರುಕಟ್ಟೆಗೆ ಬರುವುದಿಲ್ಲವೇ ಅಂಬ ಆತಂಕ ಹಲವರಲ್ಲಿದೆ. ಉತ್ತರ ಏನು ಓದಿ.

ಔಷಧದ ಬಾಟಲಿ ಅಥವಾ ಕವರಿನ ಮೇಲೆ ರಾಸಾಯನಿಕ ಘಟಕಗಳ ಪ್ರಮಾಣ, ಸೂಚನೆಗಳು ಮತ್ತು ತಯಾರಕರ ಹೆಸರು ಹಾಗು ವಿಳಾಸ ವಿವರಗಳನ್ನು ಮುದ್ರಿಸಲೇ ಬೇಕಾಗುತ್ತದೆ.

ವಿಶ್ವ ಆರೋಗ್ಯ ಸಂಸ್ಥೆ ಹಿಂದೊಮ್ಮೆ ಭಾರತದಲ್ಲಿ ದೊರಕುವ 35% ಔಷಧಿಗಳು ಕಳಪೆ ಔಷಧಿಗಳೆಂದು ಹೇಳಿತ್ತು, ಆದರೆ ಅದು ಆಧಾರ ರಹಿತ ಹೇಳಿಕೆ

ಭಾರತದ ಜಾಗತಿಕ ಮುಂದಾಳತ್ವ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಅಪಪ್ರಚಾರ

ಭಾರತ ಜನೆರಿಕ್ ಔಷಧಿಗಳನ್ನು ಹಲವಾರು ದಶಕಗಳಿಂದ ತಯಾರಿಸುತ್ತ ಬಂದಿದ್ದು, ಅದನ್ನು 80 ಬಡದೇಶಗಳಿಗೆ ರಫ್ತುಮಾಡಿ, ಆ ದೇಶಗಳ ಜನರ ಆರೋಗ್ಯ ಕಾಪಾಡಲು ಸಹಾಯ ಮಾಡಿದೆ. ಭಾರತದ ಪೇಟೆಂಟ್ ಕಾನೂನು ಭಾರತ ಜನೆರಿಕ್ ಔಷಧಿಗಳನ್ನು ತಯಾರಿಸಲು ಪ್ರೋತ್ಸಾಹಿಸಿದೆ. ಜನಾರೋಗ್ಯ ಕಾಪಾಡುವ ಈ ಹೆಜ್ಜೆ ಶ್ಲಾಘನೀಯ. ಬಹುರಾಷ್ಟ್ರೀಯ ಕಂಪನಿಗಳು ಈ ಹೆಜ್ಜೆಯನ್ನು ಸಹಿಸಲಾರದೆ, ಜನೆರಿಕ್ ಔಷಧಿಗಳನ್ನು ಕಳಪೆ ಔಷಧಿಯೆಂದು ಕರೆದಿವೆ!


ಭಾರತದಲ್ಲಿ 'ಸಿಪ್ಲ' ಕಂಪನಿ ಆಫ್ರಿಕಾದ ಏಡ್ಸ್ ಹತೋಟಿಗೆ ಕಡಿಮೆ ಬೆಲೆಯ ಜನೆರಿಕ್‌ಗಳನ್ನು ತಯಾರಿಸಿ ನೀಡಿದೆ. ಇದು ಬಹುರಾಷ್ಟ್ರೀಯ ಕಂಪನಿಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಸಿಪ್ಲ ಕಂಪನಿಯ ಸಾಧನೆ ಭಾರತ ಜನೆರಿಕ್ ಔಷಧಿಗಳ ಮುಂದಾಳು ಎಂದು ತೋರಿಸಿಕೊಟ್ಟಿದೆ. ಇಂದು ಇಡೀ ಜಗತ್ತು ಜನೆರಿಕ್ ಔಷಧಿಗಳ ಮೇಲೆ ಅವಲಂಬಿತವಾಗಿದೆ. ಏಡ್ಸ್, ಔಷಧಿಗೆ ಕ್ಷಯರೋಗ, ಹಾಗೂ ಕ್ಯಾನ್ಸರ್ ರೋಗಕ್ಕೆ ಜನೆರಿಕ್ ಔಷಧಿಗಳು ವರವಾಗಿವೆ. ಜನೆರಿಕ್ ಔಷಧಿಗಳು ಭವಿಷ್ಯದ ಔಷಧಿಗಳೆಂದರೆ ತಪ್ಪಾಗಲಾರದು.

ಜನೆರಿಕ್ ಔಷಧಿ ತಯಾರಿಸಲು ಹಲವಾರು ಕಂಪನಿಗಳ ಮಧ್ಯೆ ಪೈಪೋಟಿ ಇರುತ್ತವೆ. ಕೆಲವು ಕಂಪನಿಗಳು ಆಕ್ರಮಣಕಾರಿ ವರ್ತನೆ ತೋರಿಸುತ್ತವೆ. ಇದು ಜನೆರಿಕ್ ಔಷಧಿ ಕಂಪನಿಗಳಿಗೆ ಆತಂಕ ಹುಟ್ಟಿಸಲು ಸಾಧ್ಯ. ಅನೇಕ ಬಾರಿ ಪೇಟೆಂಟ್ ಪಡೆದ ಕಂಪನಿಯೇ, ಪೇಟೆಂಟ್ ಅವಧಿ ಮುಗಿದ ನಂತರ, ಜನೆರಿಕ್ ಔಷಧಿ ತಯಾರಿಸಿ, ತಮ್ಮದೇ ಆದ ಬ್ರಾಂಡ್ ಹೆಸರು ನೀಡುತ್ತವೆ. ಇದಕ್ಕೆ ಸದಾ ಹಸಿರಾಗಿರಿಸುವುದು (Evergreening) ಎನ್ನುತ್ತಾರೆ. ಇದೊಂದು ಲಾಭಮಾಡುವ ತಂತ್ರ. ಆದರೆ ಅದೇ ಔಷಧಿಯನ್ನು ಇತರರೂ ತಯಾರಿಸಲು ಸಾಧ್ಯ!

ಪೇಟೆಂಟ್ ಹಾಗೂ ಜನೆರಿಕ್ ಔಷಧಿಗಳು

ಜನಾರೋಗ್ಯ ಸಾಧಿಸಲು ಜನೆರಿಕ್ ಔಷಧಿಗಳು ಅತ್ಯಗತ್ಯ. ಭಾರತೀಯ ಪೇಟೆಂಟ್ ಕಾನೂನು 70, ಭಾರತ ಜನೆರಿಕ್ ಔಷಧಿಗಳನ್ನು ತಯಾರಿಸಲು ಪ್ರೋತ್ಸಾಹಿಸಿತು. ಭಾರತದಲ್ಲಿ ಏಡ್ಸ್ ಚಿಕಿತ್ಸೆಗೆ ಜನೆರಿಕ್ ಔಷಧಿಗಳು ಇರಲಿಲ್ಲ. ಆಗ 1–2% ಜನರು ಮಾತ್ರ ಏಡ್ಸ್ ಔಷಧಿಗಳನ್ನು ವಿದೇಶದಿಂದ ಆಮದು ಮಾಡಿಕೊಂಡು ಉಪಯೋಗಿಸುತ್ತಿದ್ದರು. ಆದರೆ ಈಗ 60 – 70% ಜನರು ಜನೆರಿಕ್ ಔಷಧಿಗಳನ್ನು ಉಪಯೋಗಿಸುತ್ತಿದ್ದಾರೆ! ಈಗ ನೋವಾರ್ಟಿಸ್ ಕಂಪನಿ ರಕ್ತದ ಕ್ಯಾನ್ಸರ್ ಚಿಕಿತ್ಸೆಗೆ ಉಪಯೋಗಿಸುವ ಔಷಧಿ ಗ್ಲೀವ್ಯಾಕ್‌ಗೆ ಭಾರತದಲ್ಲಿ ಪೇಟೆಂಟ್ ಪಡೆದುಕೊಳ್ಳಲು ಆರು ವರ್ಷಗಳಿಂದ ಪ್ರಯತ್ನಿಸುತ್ತಿದೆ. ನೋವಾರ್ಟಿಸ್‌ನ ಗ್ಲೀವ್ಯಾಕ್ ಹಳೆಯ (ಹೊಸದಾಗಿ ಆವಿಷ್ಕಾರಗೊಳ್ಳದ) ಔಷಧಿಯೆಂದು ಭಾರತದ ಪೇಟೆಂಟ್ ಕಛೇರಿ ಆ ಔಷಧಿಯನ್ನು ತಿರಸ್ಕರಿಸಿದೆ. ಪೇಟೆಂಟ್ ಕಛೇರಿಯ ತೀರ್ಮಾನ ಸರಿಯಾಗಿದೆ. ಜನಪರವಾಗಿದೆ ಹಾಗೂ ಭಾರತದ ಕಾನೂನಿಗನುಗುಣವಾಗಿದೆ. ಈ ಔಷಧಿಗೆ ಪೇಟೆಂಟ್ ದೊರಕಿದ್ದರೆ ಭಾರತದ ಜನೆರಿಕ್ ಔಷಧಿಗಳಿಗೆ ಧಕ್ಕೆಯಾಗುತ್ತಿತ್ತು. ಕಾರಣ ಭಾರತ ಅನೇಕ ತರಹದ ಜನೆರಿಕ್ ಔಷಧಿಗಳನ್ನು ತಯಾರಿಸುತ್ತಿದೆ.

ಹಳೇ ಔಷಧಿಯನ್ನು ರಾಸಾಯನಿಕವಾಗಿ ಸ್ವಲ್ಪ ಬದಲಾಯಿಸಿ, ಹೊಸ ಔಷಧಿಯೆಂದು ಹೇಳಿ, ಅದಕ್ಕೆ ಪೇಟೆಂಟ್ ಪಡೆಯುವ ವಿಧಾನಕ್ಕೆ ಎವರ್‌ಗ್ರೀನಿಂಗ್ (ಇತಜಡಿಥಿರಡಿಜಜಟುಟಿರ) ಎನ್ನುವರು. ಹಾಗೂ ಬಹುರಾಷ್ಟ್ರೀಯ ಕಂಪನಿಗಳು ಈ ವಿಧಾನವನ್ನು ಉಪಯೋಗಿಸಿ ಭಾರತದ ಮಾರುಕಟ್ಟೆ ಪ್ರವೇಶಿಸಲು ಸಜ್ಜಾಗಿವೆ. ಭಾರತ ಇತ್ತೀಚೆಗೆ ಒಂದು ಭಾರತೀಯ ಔಷಧಿ ಕಂಪನಿಗೆ (ನಾಟ್ಕೋ) ಬಹುರಾಷ್ಟ್ರೀಯ ಕಂಪನಿಯಾದ ಬಾಯರ್ ತಯಾರಿಸುತ್ತಿರುವ ಕ್ಯಾನ್ಸರ್ ಔಷಧಿ ತಯಾರಿಸಲು ಕಡ್ಡಾಯ ಪರವಾನಗಿ (Compulsory Licence) ನೀಡಿದೆ., ಕಾರಣ ಆ ಔಷಧಿ ದುಬಾರಿ. ಜನಾರೋಗ್ಯದ ದೃಷ್ಟಿಯಿಂದ ಈ ಹೆಜ್ಜೆ



ನಿರ್ಣಾಯಕ ಹಾಗೂ ಕಾನೂನುಬಾಹಿರವಲ್ಲ. ಜನಾರೋಗ್ಯದ ದೃಷ್ಟಿಯಿಂದ ಕಡ್ಡಾಯ ಪರವಾನಗಿ ಅಗತ್ಯವಾಗುತ್ತದೆ.

ಭಾರತದಲ್ಲಿ ಅನಕ್ಷರತೆ, ಬಡತನ ವ್ಯಾಪಕವಾಗಿದೆ. ಜನರಿಗೆ ಜನೆರಿಕ್ ಔಷಧಿಗಳು ಅತ್ಯಗತ್ಯ. ಆದರೂ ವೈದ್ಯರು ಜನೆರಿಕ್ ಔಷಧಿಗಳನ್ನು ಬರೆದುಕೊಡುವುದಿಲ್ಲ. ಈ ಜನೆರಿಕ್ ಔಷಧಿಗಳು ಪರಿಣಾಮಕಾರಿಯಲ್ಲ ಎಂದು ಕೆಲವರು ಭಾವಿಸುತ್ತಾರೆ. ಇನ್ನು ಕೆಲವರಿಗೆ ಜನೆರಿಕ್ ಔಷಧಿಗಳ ಬಗ್ಗೆ ಮಾಹಿತಿಯೇ ಇಲ್ಲ.

ಜನೆರಿಕ್ ಔಷಧಿಗಳನ್ನು ಈಗಲೂ ಹಲವಾರು ಕುಟುಂಬ ವೈದ್ಯರು ಉಪಯೋಗಿಸುತ್ತಾರೆ. ಅಂದರೆ ತಮ್ಮ ಕ್ಲಿನಿಕ್‌ನಲ್ಲಿಯೇ ಈ ಔಷಧಿಗಳನ್ನು ರೋಗಿಗೆ ನೀಡುತ್ತಾರೆ. ಕೆಲವು ಬಾರಿ ಉಚಿತವಾಗಿ! ಅವರು ಈ ಔಷಧಿಗಳು ಪರಿಣಾಮಕಾರಿಯೆಂದು ಕಂಡುಕೊಂಡಿದ್ದಾರೆ.

ಸರಕಾರಿ ಆಸ್ಪತ್ರೆಗಳಲ್ಲೂ (ಆರೋಗ್ಯ ಕೇಂದ್ರ) ಈ ಔಷಧಿಗಳನ್ನು ನೀಡುತ್ತಾರೆ. ಆದರೆ ಎಷ್ಟೋ ಜನರು ಈ ಔಷಧಿಗಳನ್ನು ನಕಲಿ(ಡ್ಯೂಪ್ಲಿಕೇಟ್) ಎಂದು ಭಾವಿಸಿ, ಬಿಸಾಕುತ್ತಾರೆ.

ಔಷಧಿ ಹಾಗೂ ವೈದ್ಯಕೀಯ ಪಠ್ಯಪುಸ್ತಕಗಳಲ್ಲಿ ಜನೆರಿಕ್ ಔಷಧಿ ಉಪಯೋಗದ ಬಗ್ಗೆ ಮಾಹಿತಿ ಇದೆ. ಆದರೆ ಬ್ರಾಂಡ್ ಔಷಧಿಗಳ ಬಗ್ಗೆ ಮಾಹಿತಿ ಇಲ್ಲ. ವೈದ್ಯಕೀಯ ಶಿಕ್ಷಣದಲ್ಲಿ ಜನೆರಿಕ್ ಔಷಧಿ ಉಪಯೋಗಕ್ಕೆ ಮಹತ್ವವಿದೆ. ಆದರೆ ವೈದ್ಯನಿಗೆ ಔಷಧಿ ಕಂಪನಿಗಳು ತಮ್ಮ ಬ್ರಾಂಡ್‌ಗಳನ್ನು ಪರಿಚಯಿಸುತ್ತ, ಬ್ರಾಂಡ್ ಔಷಧಿಗಳೇ ವೈದ್ಯರ ಮನದಲ್ಲಿ ಪ್ರಾಮುಖ್ಯತೆ ಪಡೆಯುತ್ತವೆ!

ಭಾರತ ದೇಶದಲ್ಲಿ ಆರೋಗ್ಯಕ್ಕೆ ಒಟ್ಟಾರೆ ಆಗುತ್ತಿರುವ ವೆಚ್ಚದಲ್ಲಿ ಸರ್ಕಾರ ಖರ್ಚು ಮಾಡುತ್ತಿರುವುದು ಕೇವಲ ಶೇ. 22%ರಷ್ಟು ಹಣ ಮಾತ್ರ. ಉಳಿದ 78%ರಷ್ಟು ಹಣವನ್ನು ಜನರೇ ಖರ್ಚುಮಾಡಿ ಆರೋಗ್ಯ ಸೌಲಭ್ಯ ಪಡೆಯುತ್ತಿದ್ದಾರೆ. ಜನಾರೋಗ್ಯ ಸರಕಾರದ ಜವಾಬ್ದಾರಿ. ಈ ನಿಟ್ಟಿನಲ್ಲಿ ಸರ್ಕಾರ 2012 ಅಕ್ಟೋಬರ್‌ನಿಂದ ಎಲ್ಲರಿಗೂ ಉಚಿತ ಔಷಧಿ ದೊರಕಿಸಿಕೊಡಲು ಪ್ರಯತ್ನಿಸುವುದಾಗಿ ಹೇಳಿರುವುದು ಜಾರಿಯಾದರೆ ಸ್ವಾಗತಾರ್ಹ. 2017ರ ಹೊತ್ತಿಗೆ ಸರ್ಕಾರವು ಒಟ್ಟು ಆರೋಗ್ಯ ವ್ಯವಸ್ಥೆಯ ವೆಚ್ಚದ ಸುಮಾರು 52%ರಷ್ಟು ಹಣವನ್ನು ಖರ್ಚು ಮಾಡಲಿದೆ ಎಂಬುದು ನಿಜವಾದರೆ ಅದನ್ನು ಸ್ವಾಗತಿಸೋಣ.

ಸರ್ಕಾರ ಉದ್ದ ಉದ್ದನೆ ಹೇಳಿಕೆ ಕೊಟ್ಟರೂ, ಅದು ಅಷ್ಟು ಸುಲಭವಾಗಿ ಜಾರಿಯಾಗದು. ನಾಗರಿಕ ಸಮಾಜ ಈ ವಿಷಯವಾಗಿ ಸರ್ಕಾರದ ಮೇಲೆ ಒತ್ತಡ ತರಬೇಕು. ●

ಆಶ್ವಾಸನೆ

ಅಂಬಾನಿ ಅಂತವರ ಒಡಲೆಂಬ ಕಡಲು
ತುಂಬಿಸಲು ಹೆಣಗುವೆವು ಆದಷ್ಟು ಮೊದಲು
ಅದುವರೆಗೆ ಮಾತ್ರವೇ ಬಡ ಜನರು ಗಾಳಿ
ನುಂಗುವುದು ಆಮೇಲೆ ದಿನಕ್ಕೊಂದು ಕೋಳಿ

■ ವಿಡಂಬಾರಿ

dyfi 9 ಅಖಿಲ ಭಾರತ ಸಮ್ಮೇಳನ 11-15 ಸೆಪ್ಟೆಂಬರ್, 2012

ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಬಳಲುತ್ತಿರುವ ದಲಿತ ಯುವಜನ

ಯುವಜನ ಎಂದರೆ ಉತ್ಸಾಹ, ಚೈತನ್ಯ, ಚಿಮ್ಮುವ ಪ್ರತಿಭೆ. ದಲಿತ ಯುವಜನರು ಯಾರಿಗೇನು ಕಮ್ಮಿಯಲ್ಲ. ಆದರೆ ಆ ಅದಮ್ಯ ಚೈತನ್ಯವನ್ನು ಸಮರ್ಥವಾಗಿ ಸಮಾಜದ ಅಭಿವೃದ್ದಿಗೆ ಅದರ ಭಾಗವಾಗಿ ದಲಿತ ಸಮುದಾಯದ ಅಭಿವೃದ್ದಿಗೆ ಬಳಸಿಕೊಳ್ಳುವ ಪ್ರಬುದ್ದತೆ ನಮ್ಮ ಸಮಾಜಿಕ -ರಾಜಕೀಯ ವ್ಯವಸ್ಥೆಗೆ ಇಲ್ಲ ಎಂಬುದು ನಿಜಕ್ಕೂ ಒಂದು ದುರಂತ.

ಬಿ.ರಾಜಶೇಖರಮೂರ್ತಿ

ಬೆಂಗಳೂರು ನಾಗಲೋಟದಂತೆ ಬೆಳೆಯುತ್ತಿದೆ. ವಿಶ್ವದ 10 ನಗರಗಳಲ್ಲಿ ಬೆಂಗಳೂರು ಒಂದಾಗಿ ಬೆಳೆಯುತ್ತಿದೆ. ಖಾಸಗಿ ಐಟಿ, ಬಿಟಿ ಕಂಪನಿಗಳು. ಖಾಸಗಿ ಶಿಕ್ಷಣ ಸಂಸ್ಥೆಗಳು, ಖಾಸಗಿ ಆಸ್ಪತ್ರೆಗಳು, ಬೃಹತ್ ಪ್ರಮಾಣದ ಐಶಾರಾಮಿ ಹೋಟೆಲ್‌ಗಳು, ಖಾಸಗಿ ಸಾರಿಗೆ ಉದ್ಯಮಗಳು ದೊಡ್ಡ ದೊಡ್ಡಹೈಟೆಕ್ 'ದೇವಪ್ರತಿಮೆ'ಗಳೆಂಬ ಉದ್ಯಮಗಳು. ಬೃಹತ್ ಕಾರ್ಪೋರೇಟ್ ಕಂಪನಿಗಳೇ ಆರಂಭಿಸುತ್ತಿರುವ ದೊಡ್ಡ ದೊಡ್ಡ ಮಾಲ್‌ಗಳು, ರೆಸಾರ್ಟ್ಸ್‌ಗಳು, ಹಾದಿ ಬೀದಿ ಮತ್ತು ಉದ್ಯಾನವನಗಳನ್ನು ಆವರಿಸಿಕೊಂಡು ಮೇಲೇಳುತ್ತಿರುವ ದೇವಸ್ಥಾನಗಳೆಂಬ ವಾಣಿಜ್ಯ ಕೇಂದ್ರಗಳು-ಅಂದರೆ ದೇವಸ್ಥಾನದ ಹೆಸರಿನ-ಅಸಲಿಗೆ ದೇವರ ಹೆಸರು ಹೇಳಿಕೊಂಡು 'ಬದುಕುವ' ಪರಾವಲಂಬಿ ವರ್ಗಗಳ 'ಶ್ರದ್ಧಾ ಕೇಂದ್ರ'ಗಳು, ನಾಯಿಕೊಡೆಗಳಂತೆ ವ್ಯಾಪಕವಾಗಿ ಹಬ್ಬುತ್ತಿರುವ ಸಣ್ಣ ಸಣ್ಣ ಪ್ರಮಾಣದ 'ಯೋಗಭ್ಯಾಸ'ದ ಕೇಂದ್ರ-ಮತ್ತು 'ಆಧ್ಯಾತ್ಮದ ಸಗಟು' ವ್ಯಾಪಾರಿ ಮಳಿಗೆಗಳು. ಬಡವರ ಸೇವೆ ಹೆಸರಿನ ಸರ್ಕಾರೇತರ ಸಂಸ್ಥೆಗಳು ಇವೆಲ್ಲವೂ ಬಹುತೇಕ ಬಲಾಡ್ಯ ಮೇಲ್ಜಾತಿ ಜನರ, ಮೇಲ್ ವರ್ಗದ ಜನರ ಕೈಯಲ್ಲಿವೆ. ಹೀಗಾಗಿ ಇಂತಹ ಸಂಘ ಸಂಸ್ಥೆಗಳಲ್ಲಿ ಉದ್ಯೋಗ ದೊರಕಿಸಿ ಕೊಂಡಿರುವವರೂ ಕೂಡ ಬಹುತೇಕ ಮೇಲ್ಜಾತಿಯವರೇ ಆಗಿದ್ದಾರೆ.

ದಲಿತ ಯುವಜನರ ಬದುಕು ಬವಣೆ

ದಲಿತ ಯುವಜನರು ಸೆಕ್ಯೂರಿಟಿ, ಡ್ರೈವರ್‌ಗಳು, ಕಟ್ಟಡ ಕಾರ್ಮಿಕರು, ಸಫಾಯಿ ಕರ್ಮಿಗಳು, ಕೂಲಿಗಳು ಹೌಸ್ ಕೀಪಿಂಗ್, ಮುಂತಾದವುಗಳಿಗೆ ಸಂಬಂಧಿ ಕೆಲಸಗಳು ಹೀಗೆ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವವರು ಮತ್ತು ಉಳ್ಳವರ ಆಸ್ತಿಗಳನ್ನು ರಕ್ಷಿಸುವ ಆಯುಧಗಳಾಗಿದ್ದಾರೆ. ಈ ದಲಿತರಲ್ಲಿ ಬೆಂಗಳೂರಿನವರು ಇದ್ದಾರೆ ಮತ್ತು ಹೊರಗಿನಿಂದ ಈಗ ಬಂದು ಸೇರಿಕೊಂಡವರೂ ಇದ್ದಾರೆ. ಜೊತೆಗೆ ಅತಿ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿಗೆ ಬೇರೆ ಬೇರೆ ಊರುಗಳಿಂದ ಮತ್ತು ರಾಜ್ಯಗಳಿಂದ ಬಂದು ನೆಲೆಸಿರುವವರಲ್ಲಿ ಅಸಂಘಟಿತ ದಲಿತ ಕಾರ್ಮಿಕರೇ ಹೆಚ್ಚಿದ್ದಾರೆ.

ಇನ್ನೂ ಮೀಸಲಾತಿ ಸೌಲಭ್ಯಗಳಿಂದ ಅತ್ಯಲ್ಪ ಅನುಕೂಲಸ್ಥರಾಗಿದ್ದಾರೆ, ಇವರಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ, ಮುಖ್ಯವಾಗಿ ಡಿ.ದರ್ಜೆಯ ನೌಕರರು, ಹೆಚ್ಚೆಂದರೆ ಪೋಲಿಸರಾಗಿ ಮತ್ತು ಬಡ ಮೇಷ್ಟ್ರುಗಳಾಗಿದ್ದಾರೆ. ಇನ್ನುಳಿದಂತೆ ಅಲ್ಲೊಬ್ಬರು ಇಲ್ಲೊಬ್ಬರು ಮಾತ್ರ ಉನ್ನತ ಹುದ್ದೆಯಲ್ಲಿರುವವರು. ಒಟ್ಟಾರೆ ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲಿ ನಗರದಲ್ಲಿ ವಾಸಿಸುತ್ತಿದ್ದಾರೆ. ಇವರಿಗೆ ಗ್ರಾಮೀಣ ಭಾರತದ ದಲಿತರು ಅನುಭವಿಸುವಂತಹ ರೀತಿಯಲ್ಲಿ ಅಸ್ಪೃಶ್ಯತೆ ಆಚರಣೆ ಹೇರಲು ಸಾಧ್ಯವಿಲ್ಲವೆಂಬುದು ನಿಜ. ಆಧುನಿಕವಾದ ಸಾರ್ವಜನಿಕ ಪ್ರದೇಶಗಳು, ಹೋಟೆಲ್‌ಗಳು, ಶಾಲಾ-ಕಾಲೇಜುಗಳು, ಸಂಘಟಿತ ಮತ್ತು ಅಸಂಘಟಿತ ಉದ್ಯಮಗಳು ಹೀಗೆ ಅನೇಕ ಅವಶ್ಯಕವಾದ ಜನ ಸಂಪರ್ಕದ ನಗರ ಪ್ರದೇಶಗಳಲ್ಲಿ ಸಾಕಷ್ಟು ಅಸ್ಪೃಶ್ಯತೆ ಆಚರಣೆ ಸಡಿಲಗೊಳ್ಳುತ್ತಿದೆ. ಜಾತಿ ಜಾತಿಗಳ ಮೂಲದಲ್ಲಿ ಬದುಕುತ್ತಿದ್ದರೂ ಜಾತಿ ಮೀರಿದ ಸಂಬಂಧಗಳೂ ಬೆಳೆಯುತ್ತಿವೆ. ನಗರ ನಿಬಿಡ ಪ್ರದೇಶಗಳಲ್ಲಿ ನೆರೆ ಹೊರೆಯವರ ಅನಿವಾರ್ಯ ಮಾನವ ಸಂಬಂಧಗಳು. ಒಂದೇ ಬಸ್ಸಿನಲ್ಲಿ ಪ್ರಯಾಣ. ಒಂದೇ ಕಡೆ ಕೆಲಸಗಳು. ಶಾಲಾ-ಕಾಲೇಜುಗಳಲ್ಲಿ ಅನಿವಾರ್ಯತೆಯಿಂದ ಪರಸ್ಪರ ಬೆರೆಯುವಿಕೆ. ಹೀಗೆ ಸಂಬಂಧಗಳು ಬೆಸೆಯಲ್ಪಡುತ್ತವೆ. ಹೀಗಾಗಿ ಬುದ್ಧಿವಂತಿಕೆ-ಅಲೋಚನಾ ಶಕ್ತಿ ನಮ್ಮಲ್ಲೂ ಇದ್ದಾವೆಂದು ದಲಿತರಲ್ಲಿ ಹೆಮ್ಮೆ ಮತ್ತು ಆತ್ಮ ವಿಶ್ವಾಸ



ಮೂಡುತ್ತಿದೆ. ಇದರಿಂದ ಉದಾರ ಭಾವನೆ ಕೆಲವರ ಮಟ್ಟಿಗಾದರೂ ಬೆಳೆಯುತ್ತದೆ. ಜೊತೆಗೆ ಮಹಾ ನಗರದ ಸಾಂಸ್ಕೃತಿಕ-ಸಾಹಿತ್ಯ ಮತ್ತು ವಿಜ್ಞಾನ- ತಂತ್ರಜ್ಞಾನದ ಬೆಳವಣಿಗೆಗಳು ಉದಾರವಾದಿಯಾಗಿ ಯೋಚನೆ ಮಾಡಲು ಮತ್ತು ಪ್ರಭಾವಗಳನ್ನು ಬೀರುತ್ತವೆ. ಉದಾ. ದೇವನೂರರ ಮತ್ತು ಸಿದ್ಧಲಿಂಗಯ್ಯ ಇನ್ನಿತರ ದಲಿತರ ಸಾಹಿತ್ಯಗಳನ್ನು ದಲಿತರೇ ಓದದೆ ಬೇರೆ ಜನಾಂಗದ ಜನತೆಯೂ ಬಹಳ ಆಸಕ್ತಿದಾಯಕವಾಗಿ ಓದುವುದು ಮತ್ತು ಗೌರವಿಸುವುದನ್ನು ನಾವೂ ಕಾಣುವುದು. ಇದು ಒಳ್ಳೆಯ ಬೆಳವಣಿಗೆಯಾಗಿದ್ದರೂ, ಇಷ್ಟಕ್ಕೆ ಸೀಮಿತವಾಗಿದೆ ಎಲ್ಲಾರ ಚಿಂತನೆಯೂ (ದಲಿತ ಮತ್ತು ದಲಿತೇತರರು) ಜಾತಿ ಮೀರಿದ ಅಮೂಲಾಗ್ರ ಬದಲಾವಣೆಯ ಚಿಂತನೆಯನ್ನು ಸಾಕ್ಷಾತ್ಕಾರಗೊಳಿಸಲು ಆಗಿಲ್ಲ. ಇದಕ್ಕೆ ಮುಖ್ಯ ಕಾರಣ, ನಮ್ಮ ರಾಜಕೀಯ-ಸಾಮಾಜಿಕ ಮತ್ತು ಆರ್ಥಿಕ ನೀತಿಗಳಿಂದ ಜಾತಿ ವ್ಯವಸ್ಥೆ ಸಡಿಲಗೊಳ್ಳದೆ ಇನ್ನಷ್ಟು ಜಾತಿವಾದ ಗಟ್ಟಿಗೊಳ್ಳುತ್ತಾ ಬೆಳೆಯುತ್ತಿದೆ.

ದಲಿತ ವಿರೋಧಿ-ಮೀಸಲಾತಿ ವಿರೋಧಿ ಅವಹೇಳನಗಳು

ಆಳುವ ಸರ್ಕಾರಗಳ ಜನ ವಿರೋಧಿ ನೀತಿಗಳಿಂದ ಬದುಕಲು ಎಲ್ಲಾರೂ ಸೆಣಸಾಡುವ ಪರಿಸ್ಥಿತಿ ಇರುವುದರಿಂದ ನಗರಗಳಲ್ಲಿ ಎಲ್ಲಾರೂ ಸ್ಪರ್ಧೆ ಮಾಡಬೇಕಿದೆ. ಇದು ಸಾಹಿತ್ಯ ಮತ್ತು ಸಾಂಸ್ಕೃತಿಕವಾಗಿಯೂ ಉದಾರವಾದ ಚಿಂತನೆಯನ್ನು ತಡೆಗಟ್ಟುತ್ತದೆ. ಉದಾ: ದಲಿತರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿನ ಮೀಸಲಾತಿ ಸೌಲಭ್ಯಗಳನ್ನು ಸಾರಸಗಟಾಗಿ ವಿರೋಧಿಸುವುದು. ಕನಿಷ್ಟ ಜೀವನದ ಭದ್ರತೆ ಇಲ್ಲದೆ ದಿನಂಪತ್ರಿ ಜೀವನ ಮತ್ತು ಕುಟುಂಬಗಳನ್ನು ಸಲಹಲು ಹೆಣಗಾಡುತ್ತಿರುವಾಗ ಈ ದಲಿತರಿಗೇಕೆ ಮೀಸಲಾತಿ. ಇವರಿಂದಲೇ ನಮಗೆ ಈ ಸ್ಥಿತಿ ಬಂದಿದೆ ಎಂಬ ಭ್ರಮೆಗೆ ಒಳಗಾಗಿ ದಲಿತ ಸಮುದಾಯವನ್ನು ವಿರೋಧಿಸುವ ಮನೋಭಾವನೆಯನ್ನು ಉಚ್ಚ ಜಾತಿಯವರು ಬೆಳೆಸಿಕೊಳ್ಳುವಂತೆ ಮಾಡಲಾಗಿದೆ. ಇಂತಹ ದುಸ್ಥಿತಿಯಿಂದಲೇ ಜಾತಿ ವ್ಯವಸ್ಥೆಗೆ ಬದ್ಧವಾದ ಸ್ಪರ್ಧೆಗಳನ್ನು ಎದುರಿಸುವಂತಾಗಿದೆ. ಇದು ನಾಗರೀಕ ಸಮಾಜದಲ್ಲಿ ಅತ್ಯಂತ ವಿಷಮವಾದ ಸ್ಪರ್ಧೆಯಾಗಿದೆ. ಒಬ್ಬರನ್ನು ಒಬ್ಬರು ತುಳಿದು ಬದುಕುವುದು. ಜಾತಿ ಆಧಾರದಲ್ಲಿ ದ್ವೇಷವನ್ನು ಹೆಚ್ಚಿಸುವುದು. ಮುಖ್ಯವಾಗಿ ಮೇಲ್ಜಾತಿಗಳು ಕೆಳ ಜಾತಿಗಳನ್ನು ತುಳಿದು ಬದುಕುವುದು. ಇದರಿಂದಾಗಿ ಪರಸ್ಪರ ಸಹ ಸ್ಪಂದನೆಗೆ ಬದಲು ಅಹಿತಕರ ಘಟನೆಗಳು ನಡೆಯುತ್ತಿವೆ. ಎಲ್ಲರಿಗೂ ಎಲ್ಲವೂ ಸಿಗುವಂತಹ ಅವಕಾಶವನ್ನು ವಂಚಿಸಿ ಉದ್ದೇಶ ಪೂರ್ವಕವಾಗಿ ಸ್ಪರ್ಧೆಯನ್ನು ಏರ್ಪಡಿಸ ಲಾಗಿದೆ. ಇದರಿಂದಾಗಿ ಉಚ್ಚಜಾತಿಯವರು ದಲಿತರ ಮೀಸಲಾತಿಯಿಂದಲೇ ನಮಗೆ ಶಿಕ್ಷಣ ಮತ್ತು ಉದ್ಯೋಗ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಅವಕಾಶ ಸಿಗುತ್ತಿಲ್ಲವೆಂಬ ತಪ್ಪು ಗ್ರಹಿಕೆಯಲ್ಲಿ ದಲಿತರೆಂದಾಕ್ಷಣ ದ್ವೇಷ ಕಾರುವುದು ನಡೆಯುತ್ತಿದೆ. ಇದಕ್ಕೊಂದು ಸಣ್ಣ ಉದಾ: ದಲಿತ ವಿದ್ಯಾರ್ಥಿಗಳನ್ನು...ಗೌರ್ಮೆಂಟ್ ಬ್ರಾಹ್ಮಣರು....ಸರ್ಕಾರದ ಮಕ್ಕಳು...ಇತ್ಯಾದಿ ಮಾತುಗಳಿಂದ ಅವಮಾನಿಸುವಂತಹ ಮಾತುಗಳನ್ನು ಯತೇಚ್ಛವಾಗಿ ತೇಲಿ ಬಿಡಲಾಗುತ್ತಿದೆ. ಇದು ಮುಂದುವರೆದು ನಗರದಲ್ಲಿ ಸಸ್ಯಾಹಾರಿಗಳಿಗೆ ಮಾತ್ರ ಬಾಡಿಗೆ ಮನೆಗಳು. ಜೊತೆಗೆ ತಮ್ಮದೇ ಜಾತಿಯವರಾಗಿದ್ದರೆ ಇನ್ನೂ ಕ್ಷೇಮವೆಂಬ ಅಭಿಪ್ರಾಯವನ್ನು ಮನೆ ಮಾಲಿಕರು ಏಜೆಂಟರುಗಳಿಗೆ ತಿಳಿಸುತ್ತಾರೆ. ಹೀಗಾಗಿ ಎಲ್ಲ ಕಡೆಗಳಲ್ಲಿಯೂ ಎಲ್ಲಾ ರೀತಿಯ ಜಾತಿವಾದಿ ಸಂಘಟನೆಗಳು ಬೆಳೆದಿವೆ. ಶಾಲಾ-ಕಾಲೇಜುಗಳಲ್ಲಿ ದಲಿತ ವಿದ್ಯಾರ್ಥಿಗಳು ಅವಮಾನ ಅನುಭವಿಸುವುದು. ಉದ್ಯೋಗ ಸ್ಥಳದಲ್ಲಿ ತಾರತಮ್ಯ ಹೀಗೆ ಎಲ್ಲಾ ವಿಧದಿಂದಲೂ ಕಡೆಗಣಿಸುತ್ತಾ ಬರಲಾಗಿದೆ. ಹೀಗಾಗಿ ಹಳ್ಳಿಗಳಲ್ಲಿ ದಲಿತ ಕೇರಿಗಳಿದ್ದಂತೆ ನಗರಗಳಲ್ಲಿ ಸ್ಲಂಗಳು ದಲಿತ ಕೇರಿಗಳಾಗಿವೆ.

ಮನೋಸ್ಥೈರ್ಯ ಕುಂದಿಸುವ ವಾತಾವರಣ

ಇನ್ನು ವಿದ್ಯಾವಂತ ದಲಿತ ಯುವಜನರು ಉದ್ಯೋಗ ಇಲ್ಲದ ಪರಿಸ್ಥಿತಿಯಿಂದ ಹೊರಬರಲು ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಇತ್ತ ಸರ್ಕಾರಗಳೂ ಗಂಭೀರ ಪ್ರಯತ್ನ ಮಾಡುತ್ತಿಲ್ಲ. ಇದರಿಂದಾಗಿ ದಲಿತ ಯುವಜನರು ಆರ್ಥಿಕವಾಗಿ ಮತ್ತು

ಪುಟ 12 ಕ್ಕೆ

ಪಾಲಿಕೆ ಎದುರು ಮಂಗಳೂರು ಮಹಾಜನತೆಯ ಮಹಾಧರಣಿ

ಕಡಲತಡಿ

ವರದಿ : ವಾ.ಉ.

ಮಂಗಳೂರು ಮಹಾ ನಗರ ಪಾಲಿಕೆಯ ಜನ ವಿರೋಧಿ ನೀತಿಗಳ ವಿರುದ್ಧ ಹಾಗೂ ಬಡವರಿಗೆ ಮೂಲ ಸೌಕರ್ಯ ನೀಡುವಂತೆ ಒತ್ತಾಯಿಸಿ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ಆಗಸ್ಟ್ 27 ರಂದು ಪಾಲಿಕೆ ಕಚೇರಿ ಎದುರು ಮಂಗಳೂರು ಮಹಾಜನತೆ ಮಹಾಧರಣಿ ನಡೆಸಿದರು.

ಕುಡಿಯುವ ನೀರಿನ ಖಾಸಗೀಕರಣ, ಸ್ವಯಂ ಘೋಷಿತ ಆಸ್ತಿ ತೆರಿಗೆ, ಬಡವರಿಗೆ ಲಭ್ಯವಾಗದ ಮನೆ ನಿವೇಶನ, ಸಿಡಿಪಿ ಯೋಜನೆ, ಭ್ರಷ್ಟಾಚಾರ, ದಲಿತರಿಗೆ ವಂಚನೆ, ವಿಲೇವಾರಿಯಾಗದ ತ್ಯಾಜ್ಯ, ಕೊರತೆ ಯಿರುವ ರಿಕ್ಷಾ ಪಾರ್ಕುಗಳು, ಕಸಾಯಿ ಖಾನೆ ಮೊದಲಾದ ವಿಷಯಗಳನ್ನು ಮುಂದಿಟ್ಟುಕೊಂಡು ಧರಣಿ ನಡೆಯಿತು. ಏಕ ಕಾಲದಲ್ಲಿ ಕಂಕನಾಡಿ, ಸ್ಟೇಟ್‌ಬ್ಯಾಂಕ್, ನಂತೂರು, ಯೆಯ್ಯಾಡಿ ಮತ್ತು ಉರ್ವಸ್ಟೋರ್‌ಗಳಿಂದ 5 ಪ್ರತಿಭಟನಾ ಮೆರವಣಿಗೆ ಹೊರಟು ಮಂಗಳೂರು ಪಾಲಿಕೆ ಎದುರು ಜಮೆಗೊಂಡಿತು. ಪಾಲಿಕೆ ವಿರುದ್ಧ ಮೆರವಣಿಗೆಕಾರರ ಧಿಕ್ಕಾರ, ಭೀಮಾರಿಗಳಿಗೆ ಸುರಿಯುವ ಮಳೆ ಒಂದು ಗೊಡವೆಯೇ ಆಗಲಿಲ್ಲ.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ಮಹಾಧರಣಿಯನ್ನು ಉದ್ಘಾಟಿಸಿ ಮಾತನಾಡಿದರು. ದಕ್ಷ, ಸ್ವಚ್ಛ, ಸಮರ್ಥ ಆಡಳಿತ ನೀಡುತ್ತೇವೆ ಎಂದು ಭರವಸೆ ನೀಡಿ ಅಧಿಕಾರಕ್ಕೇರಿದ ಬಿಜೆಪಿ ಕಳೆದ ನಾಲ್ಕೂವರೆ ವರ್ಷದಲ್ಲಿ ಜನರ ಸಮಸ್ಯೆಗೆ ಸ್ಪಂದಿಸಲಿಲ್ಲ. ಬದಲಾಗಿ ಕುಡಿಯುವ ನೀರಿನ ಖಾಸಗೀಕರಣ, ಸ್ವಯಂಘೋಷಿತ ಆಸ್ತಿತೆರಿಗೆ, ಅವೈಜ್ಞಾನಿಕ ಸಿಡಿಪಿ ಯೋಜನೆ ಇತ್ಯಾದಿ ಜನವಿರೋಧಿ ನೀತಿಗಳನ್ನು ಜಾರಿಗೊಳಿಸಿದೆ ಎಂದು ಟೀಕಿಸಿದರು.

ಕುಡಿಯುವ ನೀರಿನ ದರ ಏರಿಕೆ, ವ್ಯಾಪಕ ಪ್ರತಿಭಟನೆ, ಲಾಠಿ ಚಾರ್ಜ್:

ಆಡಳಿತಕ್ಕೆ ಬಂದ ಹೊಸದರಲ್ಲೇ ಕುಡಿಯುವ ನೀರಿನ ದರವನ್ನು ಏಕಾಏಕಿ ವಿಪರೀತ ಏರಿಸಿ ಸಾರ್ವಜನಿಕ ನಳ್ಳಿಯನ್ನು ಕಿತ್ತು ಹಾಕಿದಾಗ, ಇದರ ವಿರುದ್ಧ ಧ್ವನಿ ಎತ್ತಿ ಸಿಪಿಐ(ಎಂ) ಮತ್ತು ಡಿವೈಎಫ್ಐ 2008ರ ಆಗಸ್ಟ್ 4 ರಂದು ಪಾಲಿಕೆ ಎದುರು ಪ್ರತಿಭಟನೆ ನಡೆಸಿದಾಗ ಬಿಜೆಪಿ ನಗರಾಡಳಿತ ಪೋಲೀಸರಿಂದ ಲಾಠಿ ಪ್ರಹಾರ ಮಾಡಿಸಿ ಜೈಲಿಗೆ ಅಟ್ಟಿ ಕೇಸು ಹಾಕಿ ದಮನಿಸುವ ಪ್ರಯತ್ನ ನಡೆಸಿದೆ. ನ್ಯಾಯಾಲಯದಲ್ಲಿ ಪ್ರಕರಣ ಇನ್ನೂ ಇತ್ಯರ್ಥಗೊಂಡಿಲ್ಲ. ಆದರೂ ಸ್ವಲ್ಪ ದಿನಗಳಲ್ಲೇ ಕುಡಿಯುವ ನೀರಿನ ದರ ಸ್ವಲ್ಪ ಇಳಿಸಲಾಗಿದೆ. ಹೋರಾಟಕ್ಕೆ ಮೊದಲ ಗೆಲುವು ಲಭಿಸಿತು.

ಕುಡಿಯುವ ನೀರಿನ ಖಾಸಗೀಕರಣದ ಪ್ರಸ್ತಾಪ ಕೈಬಿಟ್ಟ ಪಾಲಿಕೆ:

ವರ್ಷದ ಎಲ್ಲಾ ದಿನಗಳಲ್ಲೂ ತಡೆಯಿಲ್ಲದೆ ಕುಡಿಯುವ ನೀರನ್ನು ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ) ಹೆಸರಿನಲ್ಲಿ ಖಾಸಗಿ ಸಂಸ್ಥೆಗಳಿಗೆ ನೀಡಲು ಮಹಾನಗರ ಪಾಲಿಕೆ ಸರ್ವಸಿದ್ಧತೆ ನಡೆಸಿತ್ತು. ಆದರೆ ಕಳೆದ ಎರಡು ತಿಂಗಳಿಂದ ಮಹಾಧರಣಿಯ ಪ್ರಚಾರ ಸಾಗುತ್ತಿದ್ದಂತೆ ಜನತೆಯ ಪ್ರತಿರೋಧವನ್ನು ಗ್ರಹಿಸಿದ ಪಾಲಿಕೆ ಪರಿಷತ್, ಮಹಾಧರಣಿ ನಡೆಯುತ್ತಿರುವ ವೇಳೆ ಸಭೆ ನಡೆಸಿ, ಉದ್ದೇಶಿಸಿರುವ ನಿತ್ಯ ನಿರಂತರ ನೀರು ವಿತರಣಾ ವ್ಯವಸ್ಥೆಯನ್ನು ಪಾಲಿಕೆಯ ವತಿಯಿಂದ ನಿರ್ವಹಿಸಲು ನಿರ್ಣಯ ಕೈಗೊಂಡಿರುವುದು, ಮಹಾಧರಣಿಯ ಪ್ರಥಮ ವಿಜಯವಾಗಿದೆ.

ಸ್ವಯಂಘೋಷಿತ ಆಸ್ತಿ ತೆರಿಗೆ ಎಂಬ ಅವೈಜ್ಞಾನಿಕ ಪದ್ಧತಿ:

ಆಸ್ತಿ ತೆರಿಗೆಯನ್ನು 200% ಕ್ಕೂ ಹೆಚ್ಚಿಸಿರುವ ಸ್ವಯಂಘೋಷಿತ ಆಸ್ತಿ ತೆರಿಗೆ ಪ್ರಸ್ತಾವ ಈ ಹಿಂದೆ ಪಾಲಿಕೆಯ ಕಾಂಗ್ರೆಸ್ ಆಡಳಿತದ್ದು, ಕಾಂಗ್ರೆಸ್ ತುಳಸಿ ಕಟ್ಟೆಗೂ ತೆರಿಗೆ ಹಾಕಲಿದೆ ಎಂಬ ಪ್ರಚಾರದೊಂದಿಗೆ ಭೀತಿ ಹುಟ್ಟಿಸಿ ಆಡಳಿತಕ್ಕೆ ಬಂದ ಬಿಜೆಪಿ ಮೊದಲು ಜಾರಿ ಮಾಡಿದ್ದು ಸ್ವಯಂಘೋಷಿತ ಆಸ್ತಿ ತೆರಿಗೆಯನ್ನು. ಇದಕ್ಕೆ ಈಗ ವಿರೋಧ ಪಕ್ಷದಲ್ಲಿರುವ ಕಾಂಗ್ರೆಸ್ಸಿನ ಮೂಕ ಸಮ್ಮತಿ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಈ ಅವೈಜ್ಞಾನಿಕ ಪದ್ಧತಿಯನ್ನು ಪರಿಚಯಿಸಿದ್ದು ಕಾಂಗ್ರೆಸ್ ಸರ್ಕಾರ. ಜಾಗತೀಕರಣದ ನೀತಿಯ ಭಾಗವಾಗಿ ವರ್ಲ್ಡ್ ಬ್ಯಾಂಕ್, ಐಎಂಎಫ್, ಏಶ್ಯಾನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ನಗರಾಡಳಿತಗಳಿಗೆ ನೀಡುವ ಅಭಿವೃದ್ಧಿ ಸಾಲಗಳನ್ನು ಪಡೆಯಲು ಅವು ವಿಧಿಸುವ ಶರ್ತಗಳೇನೆಂದರೆ – ಎಲ್ಲ ಅಭಿವೃದ್ಧಿ ಕೆಲಸಗಳನ್ನು ಖಾಸಗಿಯವರಿಗೆ ನಿರ್ವಹಣೆಗೆ ಕೊಡುವುದು ಮತ್ತು ಜನತೆಯಿಂದ ಹೇರಳ ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡುವುದು. ಈ ನೀತಿಯ ಭಾಗವಾಗಿಯೇ ಸ್ವಯಂ ಘೋಷಿತ ಆಸ್ತಿ ತೆರಿಗೆ ಜಾರಿ ಮಾಡಲಾಗಿದೆ, ನೀರಿನ ದರಗಳನ್ನು ಹೆಚ್ಚಿಸಲಾಗಿದೆ, ನೀರಿನ ನಿರ್ವಹಣೆಯನ್ನು ಹಾಗೂ ತ್ಯಾಜ್ಯಗಳ ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಲಾಗುತ್ತಿದೆ, ನಗರ ನಿರ್ಮಾಣ ಕಾಮಗಾರಿಗಳನ್ನು ಬಿಲ್ಡರ್ ಬಲಾಢ್ಯರಿಗೆ ಒಪ್ಪಿಸಲಾಗಿದೆ.

ಬಡವರಿಗೆ ಇನ್ನೂ ನೀಡದ ಮನೆ ನಿವೇಶನ:

ಭೂಮಿಗೆ ವಿಪರೀತ ದರ ಏರಿಸಿ ಮಂಗಳೂರು ಮಹಾನಗರವನ್ನೇ ಭೂದಂಧೆಯ ವ್ಯವಹಾರ ಸ್ಥಳವಾಗಿ ಮಾರ್ಪಡಿಸಲಾಗಿದೆ. ಮಂತ್ರಿ, ಶಾಸಕರು ಇದರ ಪ್ರಮುಖ ಸೂತ್ರದಾರರು. ಇದರಿಂದ ಸಾಮಾನ್ಯ ಜನ, ಮಧ್ಯಮವರ್ಗದ ಜನತೆ ವಸತಿರಹಿತರಾಗಿ ಅಲೆಯುವಂತಾಗಿದೆ. ನಿವೇಶನಕ್ಕಾಗಿ ವಸತಿರಹಿತರು ಅರ್ಜಿಕೊಟ್ಟು ಕಾಯುತ್ತಿದ್ದಾರೆ. ಕಳೆದ 15 ವರ್ಷಗಳಿಂದಲೂ ಪಾಲಿಕೆ ವ್ಯಾಪ್ತಿಯಲ್ಲಿ ಒಂದು ತುಂಡು ಭೂಮಿಯನ್ನೂ ವಿತರಿಸದೆ ಜನತೆಯನ್ನು ವಂಚಿಸಲಾಗಿದೆ. ಸರಕಾರಿ ಭೂಮಿ ಲಭ್ಯವಿಲ್ಲದಿದ್ದರೆ ಖಾಸಗಿಯವರ ಹೆಚ್ಚುವರಿ ಭೂಮಿಯನ್ನು ಖರೀದಿಸುವ ಪ್ರಸ್ತಾಪವನ್ನು ಈ ಎರಡೂ ರಾಜ್ಯ ಸರ್ಕಾರಕ್ಕೆ ಸಲ್ಲಿಸದ ಬೇಜವಾಬ್ದಾರಿ ಆಡಳಿತ ಮಂಗಳೂರು ಪಾಲಿಕೆಯದು.



ಕಸದ ತೊಟ್ಟಿಯಲ್ಲಿ ನಿವೇಶನ ರಹಿತರ ಅರ್ಜಿಗಳು:

ಮನೆ ನಿವೇಶನಕ್ಕಾಗಿ ನಗರಪಾಲಿಕೆ ವ್ಯಾಪ್ತಿಯಲ್ಲಿ ಏಳೂವರೆ ಸಾವಿರ ಮಂದಿ ಪಾಲಿಕೆಗೆ ಅರ್ಜಿ ಸಲ್ಲಿಸಿದ್ದಾರೆ. ಡಿವೈಎಫ್ಐ ನೇತೃತ್ವದಲ್ಲಿ ನಿವೇಶನ ರಹಿತರ ಹೋರಾಟ ಸಮಿತಿಗಳೂ ಅರ್ಜಿಗಳನ್ನು ಕೊಟ್ಟಿವೆ. ಆದರೆ ಪ್ರತಿಕ್ರಿಯೆ ಶೂನ್ಯ. ನಿಗದಿತ ನಮೂನೆಗಳಲ್ಲಿ ಅರ್ಜಿದಾರರ ಭಾವಚಿತ್ರ ಸಹಿತ ಪಾಲಿಕೆಗೆ ಸಲ್ಲಿಕೆಯಾದ ಅರ್ಜಿಗಳೂ ಕಸದ ಬುಟ್ಟಿ ಸೇರಿವೆ. ಈಚೆಗೆ ನಗರದ ಕಸದ ತೊಟ್ಟಿಯೊಂದರಲ್ಲಿ ಲಭ್ಯವಾದ ನಿವೇಶನದ ಅರ್ಜಿಗಳ ಕಟ್ಟೊಂದನ್ನು ಮಹಾಧರಣಿಯಲ್ಲಿ ತಮ್ಮ ಭಾಷಣದ ಮಧ್ಯ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಪ್ರದರ್ಶಿಸಿದರು. ಜನದ್ರೋಹಿಯಾದ ಹೀನ ಕೆಲಸವೊಂದನ್ನು ಬಿಜೆಪಿ ಪಾಲಿಕೆ ಮಾಡಿದೆ ಎಂದು ಟೀಕಿಸಿದರು.

ಬಡವರನ್ನು ಹೊಡೆದೋಡಿಸುವ ಮಾರಕ ಸಿಡಿಪಿ ಯೋಜನೆ:

ಮಂಗಳೂರು ಮಹಾನಗರ ಪಾಲಿಕೆ ಬಿಲ್ಡರುಗಳು, ರಿಯಲ್ ಎಸ್ಟೇಟ್ ಮಾಫಿಯಾ ಮತ್ತು ಮರಳು ಮಾಫಿಯಾದ ಆಡುಂಬೊಲವಾಗಿದೆ. ದಂದೆಗಾರರ ಪ್ರಮುಖರಲ್ಲಿ ಒಬ್ಬರು ಮಾಜಿ ಉಸ್ತುವಾರಿ ಮಂತ್ರಿ ಕೃಷ್ಣ ಜೆ.ಪಾಲೆಮಾರ್. ಮನಪಾ. ಮೂಡಾ (ನಗರಾಭಿವೃದ್ಧಿ ಪ್ರಾಧಿಕಾರ) ಹಾಗೂ ಜಿಲ್ಲಾಡಳಿತವನ್ನು ತನ್ನ ತೆಕ್ಕೆಯೊಳಗೆ ಇರಿಸಿ ತಮಗೆ ಬೇಕಾದಂತೆ ನಗರ ಪುನರ್ ನಿರ್ಮಾಣ ನಿಯಮಾವಳಿಗಳನ್ನು ರೂಪಿಸಿ ಅಗಾಧ ಪ್ರಮಾಣದ ಸಾರ್ವಜನಿಕ ಹಣವನ್ನು ಮತ್ತು ಭೂಮಿಯನ್ನು ಈ ಮಾಫಿಯಾಗಳು ಲಪಟಾಯಿಸುತ್ತಿವೆ. ಪ್ರಾಕೃತಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುತ್ತಿವೆ. ಪರಿಸರವನ್ನು ನಾಶಗೊಳಿಸಿ ಕಾಂಕ್ರೀಟು ಬಹುಮಹಡಿ ಕಟ್ಟಡಗಳು ಕ್ರಮವಾಗಿ ತಲೆ ಎತ್ತುತ್ತಿವೆ. ಇಂಥಲ್ಲಿ ಸರಿಯಾದ ಪಾರ್ಕಿಂಗ್ ವ್ಯವಸ್ಥೆಗಳೇ ಇರುವುದಿಲ್ಲ. ರಸ್ತೆ ಬದಿಗಳಲ್ಲಿ ಪೇ-ಪಾರ್ಕಿಂಗ್ ವ್ಯವಸ್ಥೆ ಮಾಡುವ ಮೂಲಕ ಮತ್ತೆ ಜನರನ್ನೇ ಸುಲಿಗೆ ಮಾಡುತ್ತಿವೆ.

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ನಾಗರಿಕರ ಜಮೀನು 5 ಸೆಂಟ್ಸ್‌ಗಿಂತ ಕಡಿಮೆ ಇದ್ದಲ್ಲಿ ಮನೆ ನಿರ್ಮಾಣಕ್ಕೆ ಅನುಮತಿ ಕೊಡುತ್ತಿಲ್ಲ. ಮೂರ್‍ನಾಲ್ಕು ಸೆಂಟ್ಸ್ ಜಾಗ ಇದ್ದವರು ಇಂತಹ ಜಾಗಗಳನ್ನು ಬಿಲ್ಡರುಗಳಿಗೆ ಬಿಟ್ಟುಕೊಡಲೇ ಬೇಕಾದಂತಹ ದುರಂತವನ್ನು ಬಿಜೆಪಿ ಆಡಳಿತದ ಯೋಜನೆ ಉಂಟು ಮಾಡಿದೆ. ಇವರು ಒಂದೋ ನಗರ ಬಿಟ್ಟು ಹೋಗಬೇಕಾಗಿದೆ ಇಲ್ಲವೇ ಬೇರೆಡೆ ಬಾಡಿಗೆ ಮನೆಯಲ್ಲಿ ವಾಸಿಸಬೇಕಾಗಿದೆ.

ವಿವಿಧ ಯೋಜನೆಗಳಲ್ಲಿ ವಿಧವಿಧ ಭ್ರಷ್ಟಾಚಾರಗಳು:

ಮುಖ್ಯ ರಸ್ತೆಗಳಿಗೆ ನಗರ ಸುಂದರೀಕರಣದ ನೆಪದಲ್ಲಿ ಕಾಂಕ್ರೀಟೀಕರಣಕ್ಕಾಗಿ ಎಡಿಬಿ

⇨

ಏಕೈಕ ನಿಜವಾದ ಪ್ರತಿಪಕ್ಷವಾಗಿ ಸಿಪಿಐ(ಎಂ)

ಜಯಂತಿ ಬಿ.ಶೆಟ್ಟಿಯವರು ಬಜಾಲು ವಾರ್ಡಿನ ಪ್ರತಿನಿಧಿ. ಸಿಪಿಐ(ಎಂ) ಪಕ್ಷದ ಏಕೈಕ ಕಾರ್ಪರೇಟರ್. ಅನುದಾನದ ಹಂಚಿಕೆಯಲ್ಲಿ ಬಜಾಲು ವಾರ್ಡಿಗೆ ನಗರಾಡಳಿತವು ವಂಚನೆ ಮಾಡುತ್ತಿದ್ದರೂ ಪಾಲಿಕೆಯ ಒಳಗೂ ಅವರು ಈ ಬಗ್ಗೆ ಹೋರಾಡುತ್ತಿದ್ದಾರೆ. ಕ್ಷೇತ್ರದಲ್ಲಿ ನಿತ್ಯ ಜನರಿಗೆ ಲಭ್ಯವಿದ್ದು, ಜನರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದಾರೆ.

ಹೋರಾಟದ ರಣಕಹಳೆ ಮೊಳಗಿತು

ಕೆಂಬಾವುಟ ಮೆರವಣಿಗೆಯುದ್ದಕ್ಕೂ ಕಂಗೊಳಿಸಿತು. ಘೋಷಣೆಗಳು ಮೇರೆ ಹರಿದವು. ಪಾಲಿಕೆ ಹಾಗೂ ರಾಜ್ಯದ ಬಿಜೆಪಿ ಆಡಳಿತಕ್ಕೆ ಧಿಕ್ಕರ ಜೋರು ದನಿಯಲ್ಲಿ ಕೇಳಿ ಬಂದವು. ನಗರದ ಜನ ಅಪೂರ್ವವಾದ ಮೆರವಣಿಗೆಯನ್ನು ದಂಗಾಗಿ ವೀಕ್ಷಿಸಿದರು.

ಮಹಾಧರಣಿಯ ಕರೆಯನ್ನು ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕೊಟ್ಟಿದ್ದು ಜೂನ್ ತಿಂಗಳಲ್ಲಿ. ಮಂಗಳೂರು ಮಹಾನಗರ ಪಾಲಿಕೆಯ ದುರಾಡಳಿತ ಹಾಗೂ ಜನವಿರೋಧಿ ನೀತಿಗಳನ್ನು ನಗರದ ಸಕಲ ನಾಗರಿಕರಿಗೂ ಮನವರಿಕೆ ಮಾಡುವ ವಿಸ್ತೃತ ಅಭಿಯಾನವೊಂದನ್ನು ಕೈಗೊಂಡು ಅವರನ್ನು ಅಂತಿಮವಾಗಿ ಆಗಸ್ಟ್ 27ರ ಮಹಾಧರಣಿ ಅಣಿನೆರೆಸಬೇಕೆಂಬ ಕಾರ್ಯಕ್ರಮ ಕೈಗೊಳ್ಳಲಾಯಿತು. ಸರ್ವ ಮಾಹಿತಿಯ ನ್ನೊಳಗೊಂಡ ಕರಪತ್ರವನ್ನು ನಗರದಲ್ಲಿರುವ ಪಕ್ಷದ ಎಲ್ಲಾ ಶಾಖೆಗಳಿಗೆ , ಸ್ಥಳೀಯ ಹಿತೈಷಿ ಸಮಿತಿಗಳಿಗೆ, ಕಾರ್ಮಿಕ ಸಂಘಟನೆಗಳಿಗೆ ತಲುಪಿಸಿ ಜುಲಾಯಿ 22 ರಂದು ಮೊದಲ ದಿನದ ಮನೆ ಮನೆ ಅಭಿಯಾನ ಆರಂಭಗೊಂಡಿತು. ಅಲ್ಲಿಂದ ತೊಡಗಿ ಆಗಸ್ಟ್ 27ರ ವರೆಗೂ ಹಲವಾರು ತಂಡಗಳು ಮನೆ ಮನೆ ಅಭಿಯಾನ ನಡೆಸಿದೆ. ಪ್ರತಿ ಮನೆಯಲ್ಲೂ ಕನಿಷ್ಟ ರೂ.10 ರಿಂದ ತೊಡಗಿ ಸಾಕಷ್ಟು ದೇಣಿಗೆಯನ್ನು ಹೋರಾಟಕ್ಕೆ ನೀಡಿದ್ದಾರೆ.

ಆಗಸ್ಟ್ 6, 7 ಮತ್ತು 8 ರಂದು ವಾಹನ ಪ್ರಚಾರ ಜಾಥಾ:

ಎಡೆಬಿಡದೆ ಮಳೆ ಸುರಿಯುತ್ತಿದ್ದರೂ ನಗರದ 43 ಕಡೆಗಳಲ್ಲಿ ವಾಹನ ಪಚಾರ ಜಾಥಾಕ್ಕೆ ಜನತೆಯಿಂದ ಉತ್ತಮ ಬೆಂಬಲ ದೊರೆಯಿತು. ನಗರಾಡಳಿತವನ್ನು ವಿಡಂಬಿಸುವ ಹಾಡುಗಳ ಸಿಡಿ ಮೂಲಕ ಹೇಳಬೇಕಾದ ಮಾಹಿತಿಗಳು ಭಾಷಣಕ್ಕೂ ಮುನ್ನವೇ ಜನರನ್ನು ತಲುಪಿ ನಗೆಬುಗ್ಗೆಯನ್ನೆಬ್ಬಿಸುತ್ತಿತ್ತು. ಮಂಗಳೂರು ಸೆಂಟ್ರಲ್ ಮಾರ್ಕೆಟ್‌ನಲ್ಲಿ ಪ್ರಾರಂಭವಾದ ಜಾಥಾ ಕಾವೂರು ಜಂಕ್ಷನ್ನಿನಲ್ಲಿ ಮೂರನೇ ದಿನ ಮುಸ್ಸಂಜೆಗೆ ಕೊನೆಗೊಂಡಾಗ ಜನತೆ ಮಹಾಧರಣಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವುದು ಖಚಿತವಾಯಿತು.

ಆಗಸ್ಟ್ 27– ಮಹಾಧರಣಿ ಒಗ್ಗೂಡಿ ಸಾಗಿದ ಜನಸಾಗರ:

ನಗರದ 5 ಕಡೆಗಳಿಂದ ಹೊರಟ ಜಾಥಾಗಳು 11.30 ಗಂಟೆಯ ವೇಳೆಗೆ ಪಾಲಿಕೆ ಕಚೇರಿ ಎದುರು ಒಗ್ಗೂಡಿದಾಗ ರಸ್ತೆ ಮುಚ್ಚಿ ಹೋಯಿತು. ಪಾಲಿಕೆಯ ಮುಂದಿನಿಂದ ಸಾಗಬೇಕಿದ್ದ ವಾಹನಗಳ ದಿಕ್ಕನ್ನು ಪೋಲೀಸರು ಮುಂದಿನ ಮೂರು ಗಂಟೆಗಳವರೆಗೂ ತಿರುಗಿಸಬೇಕಾಯಿತು. ಕೆಂಪು ಪಡೆಯ ಸ್ವಯಂಸೇವಕರು ಜನರನ್ನು ಕುಳ್ಳಿರಿಸುವ ಕೆಲಸ ಮಾಡಿದರು. ಐದು ಸಾವಿರಕ್ಕೂ ಮಿಕ್ಕಿ ಪ್ರತಿಭಟನಾಕಾರರು ಧರಣಿಯಲ್ಲಿ ಭಾಗವಹಿಸಿದ್ದರು. ಬಾರೀ ಮಳೆಯಲ್ಲವಾಗಿದ್ದರೆ ಪ್ರತಿಭಟನಾಕಾರರ ಸಂಖ್ಯೆ ಇನ್ನಷ್ಟು ಹೆಚ್ಚುತ್ತಿತ್ತು. ಧರಣಿ ಮುಗಿಯುವವರೆಗೂ ಜನ ಜಾಗ ಬಿಟ್ಟು ಕದಲಲಿಲ್ಲ.

ಕೆಂಬಾವುಟ ಮೆರವಣಿಗೆಯುದ್ದಕ್ಕೂ ಕಂಗೊಳಿಸಿತು. ಘೋಷಣೆಗಳು ಮೇರೆ ಹರಿದವು. ಪಾಲಿಕೆ ಹಾಗೂ ರಾಜ್ಯದ ಬಿಜೆಪಿ



ಆಡಳಿತಕ್ಕೆ ಧಿಕ್ಕಾರ ಜೋರು ದನಿಯಲ್ಲಿ ಕೇಳಿ ಬಂದವು. ನಗರದ ಜನ ಅಪೂರ್ವವಾದ ಮೆರವಣಿಗೆಯನ್ನು ದಂಗಾಗಿ ವೀಕ್ಷಿಸಿದರು.

ಒಬ್ಬರನ್ನೊಬ್ಬರು ಮೀರುವಂತೆ ಭಾಷಣಕಾರರು ಸ್ಫೂರ್ತಿಯುತವಾದ ಭಾಷಣ ಮಾಡಿದರು. ಬಿ.ಮಾಧವ ಅವರು ಉದ್ಘಾಟನಾ ಭಾಷಣ ಮಾಡಿದ ಅನಂತರ ಸಿಪಿಐ(ಎಂ) ಜಿಲ್ಲಾ ಮುಖಂಡರಾದ ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್‌ಕುಮಾರ್ ಬಜಾಲ್, ಕೃಷ್ಣಪ್ಪ ಕೊಂಚಾಡಿ, ನಗರ ಪಾಲಿಕೆಯ

ಕಾರ್ಪರೇಟರ್ ಜಯಂತಿ ಬಿ.ಶೆಟ್ಟಿ ಯುವ ನಾಯಕರಾದ ಮುನೀರ್ ಕಾಟಿಪಳ್ಳ, ದಯಾನಂದ ಶೆಟ್ಟಿ ಮಾತನಾಡಿದರು.

ಬಿಜೆಪಿ ಆಡಳಿತವನ್ನು ಪರಿಸಮಾಪ್ತಿಗೊಳಿಸಲು ದೃಢ ಜನಶ್ಚಯ:

ತಮ್ಮ ಆಡಳಿತಾವಧಿಯಲ್ಲಿ ಜನದ್ರೋಹಗೈದ ಬಿಜೆಪಿಯನ್ನು ಮುಂದಿನ ಪಾಲಿಕೆ ಚುನಾವಣೆಗಳಲ್ಲಿ ಸೋಲಿಸಬೇಕೆಂಬ ದೃಢ ನಿಶ್ಚಯ ಮಹಾಧರಣಿಯ ಪ್ರತಿಭಟನಾಕಾರರಲ್ಲಿ ವ್ಯಕ್ತವಾಗಿದೆ. ಮೆರವಣಿಗೆ ಮಹಾಧರಣಿಯನ್ನು ವೀಕ್ಷಿಸಲೆಂದೇ ಉಳ್ಳಾಲ, ಬಂಟ್ವಾಳ, ಗುರುಪುರ, ಮೂಡಬಿದ್ರೆ ವಲಯಗಳ ಪಕ್ಷ ನಾಯಕರೂ, ಕಾರ್ಯಕರ್ತರೂ ಆಗಮಿಸಿದ್ದುದು ಮಂಗಳೂರಿನಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ನಡೆಯುತ್ತಿರುವ ಜನಾಂದೋಲನದ ಬಗ್ಗೆ ಎಲ್ಲ ಪ್ರದೇಶಗಳಲ್ಲೂ ತೀವ್ರ ನಿರೀಕ್ಷೆಗಳಿವೆ ಎಂಬುದನ್ನು ಸೂಚಿಸುತ್ತದೆ.

ಮಹಾಧರಣಿಯ ಕೊನೆಯಲ್ಲಿ ಮಂಗಳೂರು ಪಾಲಿಕೆ ಆಯುಕ್ತರನ್ನು ಕಂಡು. ನಾಗರಿಕರ ಮನವಿಗಳನ್ನು ಸಲ್ಲಿಸಲಾಯಿತು. ಸಿಪಿಐ(ಎಂ) ನಗರ

ಸಮಿತಿ ಹಾಗೂ ಪಕ್ಷ ಶಾಖೆಗಳ ಸದಸ್ಯರು ಮಹಾಧರಣಿಯ ನೇತೃತ್ವ ವಹಿಸಿದ್ದರು.

ಲವನ್ನು ಪಡೆಯಲಾಗಿದೆ. ಭರದಿಂದ ಡೆದಿರುವ ಕಾಂಕ್ರೀಟೀಕರಣ ಕಾಮಗಾರಿಯಲ್ಲಿ ಜೆಪಿ ಮುಂದಾಳುಗಳು, ಕಾರ್ಪರೇಟರ್‌ಗಳು ಂದು ನೀರು ಕುಡಿದಿರುವುದು ಮನೆ ಾತಾಗಿದೆ. ರಸ್ತೆ ಕಾಂಕ್ರೀಟೀಕರಣಗೊಂಡಿದ್ದರೂ ಟ್‌ಪಾತ್ ರಚಿಸಿಲ್ಲ, ಚರಂಡಿಗಳನ್ನು ರಚಿಸಿಲ್ಲ. ಲವು ಮುಖ್ಯ ರಸ್ತೆಗಳಲ್ಲಿಯೇ ಚ್ಚೆಯನ್ನೊಳಗೊಂಡ ಮಳೆನೀರು ಹರಿದು ುಗುತ್ತಿದೆ. ಒಳರಸ್ತೆಗಳನ್ನು ಕೇಳುವವರೇ ಇಲ್ಲ. ೈನೇಜ್ ವ್ಯವಸ್ಥೆಯನ್ನು ಸಂಪೂರ್ಣವಾಗಿ ರ್ಲಕ್ಷಿಸಲಾಗಿದೆ.

ದಲಿತ ಮೀಸಲು ನಿಧಿಯನ್ನು ಕಾರ್ಪರೇಶನ್ ಜೆಟ್ಟಿನಲ್ಲಿ 22.75% ಇರಿಸಬೇಕಿದ್ದರೂ, ಅದನ್ನು ದಿರಿಸುತ್ತಿಲ್ಲ. ಈ ಹಿಂದಿನ ವರ್ಷಗಳಲ್ಲಿ ುರುಪಯೋಗ ಮಾಡಲಾಗಿದೆ. ನೀರಿನ ಟ್ಯಾಕ್ಸ್ ವಿತರಣೆ, ದಲಿತ ವಿದ್ಯಾರ್ಥಿಗಳಿಗೆ ವಾಸದ ಹೆಸರಿನಲ್ಲಿ ದೊಡ್ಡ ಮೊತ್ತವನ್ನು ತರಕರು ವ್ಯವಸ್ಥಾಪಕರು ನುಂಗಿ ಹಾಕಿದ್ದಾರೆ. ನೆ ನಿರ್ಮಾಣದ ಸಹಾಯಧನವನ್ನು ರೂ.1,50,000 ದಿಂದ ರೂ.70,000 ಕ್ಕೆ ಇಳಿಸಲಾಗಿದೆ. ಕೊರಗ ಸಮುದಾಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಹೆದ್ದಾರಿ ಬದಿಯಿಂದ ತೆರವುಗೊಳಿಸಲ್ಪಟ್ಟ 6 ಕೊರಗ ಕುಟುಂಬಗಳಿಗೆ ತಾತ್ಕಾಲಿಕ ವಸತಿಯ ಬಾಡಿಗೆ ನೀಡಲೂ ರಾಷ್ಟ್ರೀಯ ಆದಿವಾಸಿ ಆಯೋಗವೇ ಆದೇಶ ನೀಡಬೇಕಾದ ಪರಿಸ್ಥಿತಿ ಬಂದಿದೆ.

ತ್ಯಾಜ್ಯ ವಿಲೇವಾರಿ ಅಸಮರ್ಪಕತೆ: ಹೆಚ್ಚುತ್ತಿರುವ ಮಲೇರಿಯಾ ಡೆಂಗ್ಯೂ, ಇಲಿಜ್ವರ ಪ್ರಕರಣಗಳು:

ತ್ಯಾಜ್ಯ ವಿಲೇವಾರಿ ಸಂಬಂಧ ತೆರಿಗೆ ಯೊಂದಿಗೆ ರೂ.120 ಶುಲ್ಕ ವಸೂಲು ಮಾಡುತ್ತಿದ್ದರೂ ನಗರದಲ್ಲಿ ತ್ಯಾಜ್ಯ ಅಲ್ಲಲ್ಲಿ ಚೆದರಿದಂತೆ ರಾಶಿ ಬಿದ್ದಿವೆ. ಖಾಸಗಿ ಸಂಸ್ಥೆಗಳಿಗೆ ನಿರ್ವಹಣೆಯನ್ನು ನೀಡಿಯೂ ಹೀಗಾಗಿದೆ. ಇದೀಗ ಮನೆಮನೆಯಿಂದ ತ್ಯಾಜ್ಯ ಸಂಗ್ರಹದ ಹೆಸರಲ್ಲಿ ಪ್ರತಿ ಮನೆಯಿಂದ ತಿಂಗಳಿಗೆ ರೂ.30 ಹೆಚ್ಚುವರಿ ವಸೂಲಿ ಪ್ರಸ್ತಾಪವನ್ನು ಹರಿ ಬಿಡಲಾಗಿತ್ತು. ಸಿಪಿಐ(ಎಂ) ನಗರ ಸಮಿತಿ ಈ ಬಗ್ಗೆ ಪ್ರತಿಭಟನೆ ನಡೆಸಿದ ಅನಂತರ, ಈ ಬಗ್ಗೆ ಪಾಲಿಕೆ ಮಾತನಾಡುತ್ತಿಲ್ಲ. ಸೊಳ್ಳೆಯಿಂದ ಹರಡುವ ರೋಗಗಳಿಗೆ ಮೊದಲೇ ಮಂಗಳೂರು ಹೆಸರಾದುದು. ಪಾಲಿಕೆಯ ನಿರ್ವಹಣೆಯಲ್ಲಿ ತ್ಯಾಜ್ಯ ಅಲ್ಲಲ್ಲಿ ಗಬ್ಬು ನಾರುತ್ತಿದ್ದು ಮಲೇರಿಯಾ, ಡೆಂಗ್ಯೂ, ಇಲಿಜ್ವರ ರೋಗಗಳ ಪ್ರಕರಣಗಳು ಹೆಚ್ಚುತ್ತಿವೆ.

ರೋಗ ನಿಯಂತ್ರಣ ಆರೋಗ್ಯ ಹಾಗೂ ವೈದ್ಯಕೀಯ ಇಲಾಖೆಯ ಜವಾಬ್ದಾರಿಗಳಷ್ಟೆ. ವೆನ್‌ಲಾಕ್ ಜಿಲ್ಲಾಸ್ಪತ್ರೆಯ ಸೇವೆಗಳನ್ನು ಪಿಪಿಪಿ ಹೆಸರಲ್ಲಿ ಕೆಎಂಸಿಯವರಿಗೆ ಹಸ್ತಾಂತರಿಸಿದರೆ, ಉದ್ಯಮಿಯೊಬ್ಬನಿಂದ ಹೊಸ ಕಟ್ಟಡ ನಿರ್ಮಾಣವಾಗುವುದೆಂಬ ಭರವಸೆಯಲ್ಲಿ ಜಿಲ್ಲೆಯಲ್ಲಿ ಇದ್ದ ಒಂದೇ ಹೆರಿಗೆ ಆಸ್ಪತ್ರೆ ಲೇಡಿಗೋಷನ್ ಕಟ್ಟಡಗಳನ್ನು ಕೆಡವಿ ಹಾಕಿ ಬಡ ಕುಟುಂಬಗಳ ಗರ್ಭಿಣಿ ಮಕ್ಕಳಿಗೆ ಜಗಲಿಗಳಲ್ಲಿ ಶುಶ್ರೂಷೆ ನೀಡಲಾಗುತ್ತಿದೆ.

ದುರಾಡಳಿತ, ಭ್ರಷ್ಟಾಚಾರಗಳಿಗೆ ಕಣ್ಣು ಮುಚ್ಚಿಕೊಂಡಿರುವ ಕಾಂಗ್ರೆಸ್ಸಿಗರು:

ನಗರ ಸುಂದರೀಕರಣದ ಹೆಸರಿನಲ್ಲಿ ರಿಕ್ಷಾ ನಿಲ್ದಾಣಗಳ ಎತ್ತಂಗಡಿ ನಡೆಯುತ್ತಿದೆ. ಬೀದಿ ಬದಿ ವ್ಯಾಪಾರಿಗಳನ್ನು 'ಟೈಗರ್' ಎಂಬ ವಾಹನದೊಂದಿಗೆ ನಗರದಲ್ಲಿಡೀ ಅಟ್ಟಾಡಿಸಿ ಕಿರುಕುಳ ನೀಡಲಾಯಿತು. ಸಿಐಟಿಯು ನೇತೃತ್ವದಲ್ಲಿ ಅವರು ಧೀರ ಹೋರಾಟ ನೀಡಿದ ಮೇಲೆ, ಪಾಲಿಕೆಯ ಕಿರುಕುಳ ನಿಂತು ಹೋಗಿದೆ.

ಕಸಾಯಿಖಾನೆ ನಿರ್ವಹಿಸುವವರು ಅಲ್ಪ ಸಂಖ್ಯಾತರು ಎಂಬ ಕಾರಣಕ್ಕಾಗಿ, ಕುದ್ರೋಳಿಯ ಕಸಾಯಿಖಾನೆ ಮುಚ್ಚಿಸಲು ಪ್ರಯತ್ನ ನಡೆಸಿತು. ಬಿಜೆಪಿ ಕೋಮುವಾದಿ ಧೋರಣೆಯನ್ನು ಖಂಡಿಸಿ ಅಲ್ಪಸಂಖ್ಯಾತರೊಂದಿಗೆ ಸಿಪಿಐ(ಎಂ) ಹೋರಾಟ ನಡೆಸಿದ ಫಲವಾಗಿ, ನಗರದ ಮಾಂಸಹಾರಿಗಳ ಆಹಾರದ ಹಕ್ಕನ್ನು ರಕ್ಷಿಸಲು ಸಾಧ್ಯವಾಗಿದೆ.

ನಗರ ಪಾಲಿಕೆಯಲ್ಲಿ ಪ್ರಧಾನ ಪ್ರತಿಪಕ್ಷವಾಗಿರುವ ಕಾಂಗ್ರೆಸು, ಜನತೆ ಬಿಜೆಪಿ ಆಡಳಿತದಲ್ಲಿ ಇಷ್ಟೊಂದು ಹೊಡೆತಗಳನ್ನು ತಿನ್ನುತ್ತಿದ್ದರೂ ಸರಿಯಾದ ಪ್ರತಿರೋಧ ತೋರುತ್ತಿಲ್ಲ. ಗುಳುಂಕರಿಸುವ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಕಾರ್ಪರೇಟರ್‌ಗಳೂ ಪಾಲುದಾರರಾಗಿದ್ದಾರೆ. ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ಕಾಂಗ್ರೆಸ್ ಬಿಜೆಪಿ ದುರಾಡಳಿತಕ್ಕೆ ಕಣ್ಣು ಮುಚ್ಚಿಕೊಂಡಿದ್ದು, ಬಿಜೆಪಿಯು 'ಬಿ' ಟೀಮಿನಂತೆ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕದಲ್ಲಿ ಅಪೌಷ್ಟಿಕತೆ ಆಳುವವರು ಮನಗಾಣದ ಭೀಕರ ಮುಖ

ಎಸ್.ವರಲಕ್ಷ್ಮಿ

ಜಗತ್ತಿನ ಯಾವುದೇ ದೇಶ ಅಭಿವೃದ್ಧಿ ಸಾಧಿಸಬೇಕಾದರೆ, ಸಮಾಜ ಮುಂದೆ ಚಲಿಸಬೇಕಾದರೆ ಅದಕ್ಕೆ ಆಧಾರಭೂತವಾದ ಮುಖ್ಯವಾದ ಸಂಪತ್ತು ಮಾನವ ಸಂಪತ್ತು. ಭಾರತದಂತಹ 'ಅಭಿವೃದ್ಧಿ ಹೊಂದುತ್ತಿರುವ ದೇಶ' ಎನ್ನಲಾದ ದೇಶದಲ್ಲಿಯೇ ಇಂತಹ ಮಾನವ ಸಂಪನ್ಮೂಲಗಳ ಬೆಳವಣಿಗೆಯಲ್ಲಿ ಮೂಲಭೂತ ಸಮಸ್ಯೆಗಳಿವೆ. ಕರ್ನಾಟಕ ರಾಜ್ಯ ಭಾರತದಕ್ಕಿಂತ ಭಿನ್ನವೇನಲ್ಲ.

ರಾಜ್ಯದಲ್ಲಿ 2011 ರ ಜನಗಣತಿಯ ಪ್ರಕಾರ 6 ವರ್ಷದೊಳಗಿನ ಮಕ್ಕಳು 72 ಲಕ್ಷ ಇದ್ದಾರೆ. ಮಗುವಿನ ದೈಹಿಕ ಬೆಳವಣಿಗೆ 40 % ರಷ್ಟು ಮಾನಸಿಕ ಬೆಳವಣಿಗೆ 80 % ರಷ್ಟು 6 ವರ್ಷದೊಳಗೆ ಆಗುವುದು. ಆದರಿಂದ ಈ ವಯಸ್ಸಿನ ಮಕ್ಕಳ ಆರೋಗ್ಯ, ಪೋಷಣೆ ಬಹಳ ಮುಖ್ಯವಾಗುತ್ತದೆ. ಹಾಗಾಗಿಯೇ ರಾಜ್ಯದಲ್ಲಿ ಆರೋಗ್ಯ ಇಲಾಖೆಯ ಅಂದಾಜಿನ ಪ್ರಕಾರ 10 ಲಕ್ಷ ಗರ್ಭಿಣಿ-ಬಾಣಂತಿಯರು ಇದ್ದಾರೆ. ಇಷ್ಟು ಅಪೌಷ್ಟಿಕತೆಗೆ ಕಾರಣ ಏನು ? ಈ ಅಪೌಷ್ಟಿಕತೆಯ ಸ್ವರೂಪವಾದರೂ ಎಂತಹುದು.



ಅಪೌಷ್ಟಿಕತೆಗೊಳಗಾಗಿರುವ ವ್ಯಕ್ತಿ ಅಥವಾ ಮಗು ದೈಹಿಕ ಬೆಳವಣಿಗೆಯಲ್ಲಿ ಕುಂಠಿತಗೊಳ್ಳುವರು ಮತ್ತು ಯಾವುದೇ ಕೆಲಸವನ್ನು ಸಮರ್ಥವಾಗಿ ಮಾಡುವುದಕ್ಕೆ ಆಗುವುದಿಲ್ಲ. ಎಷ್ಟೋ ಪ್ರಕರಣಗಳಲ್ಲಿ ಮಗುವು ನಿರಂತರ ಖಾಯಿಲೆಗಳಿಂದ ಬೇಗನೇ ಸಾವಿಗೀಡಾಗುವುದು. ಇತ್ತೀಚಿಗೆ ಯಾವುದೇ ಪತ್ರಿಕೆಯನ್ನೋ, ಟಿವಿ ಚಾನಲ್‌ಗಳನ್ನೋ ನೋಡಿದರೂ ದೇಶದಲ್ಲಿ ಮತ್ತು ರಾಜ್ಯದಲ್ಲಿ ತೀವ್ರ ವ್ಯಾಪಕವಾಗಿರುವ ಅಪೌಷ್ಟಿಕತೆ ಬಗ್ಗೆ ವರದಿಯಿರುತ್ತದೆ. ರಾಜ್ಯದಲ್ಲಿ ಇದು ದೊಡ್ಡ ಪ್ರಮಾಣದಲ್ಲಿದೆ.

ದಕ್ಷಿಣ ಅಮೆರಿಕಾ ಖಂಡದ ಕೆರೆಬಿಯನ ದ್ವೀಪಗಳು, ಆಫ್ರಿಕಾ ಖಂಡದ ಇಥಿಯೋಪಿಯಾ, ಸೊಮಾಲಿಯಾ ದೇಶಗಳಿಗಿಂತ ರಾಜ್ಯದ ರಾಯಚೂರಿನಲ್ಲಿ ತೀವ್ರ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ ಎಂಬ ವರದಿಗಳು ಬಂದಿವೆ. ದೇಶದ ಪ್ರಧಾನಮಂತ್ರಿಗಳು ಅಪೌಷ್ಟಿಕತೆ ಕುರಿತ "ಮಧ್ಯಂತರ" ವರದಿಯನ್ನು ಬಿಡುಗಡೆ ಮಾಡುತ್ತಾ ದೇಶದಲ್ಲಿ 28% ಗಿಂತಲೂ ಅಪೌಷ್ಟಿಕತೆ ಹೆಚ್ಚಾಗಿದೆ ಎಂಬ ಮಾತುಗಳನ್ನು ಹೇಳಿದ್ದೂ ಸಹ ವರದಿಯಾಗಿದೆ. ಪ್ರಧಾನ ಮಂತ್ರಿಗಳೇ ಇದು ದೇಶಕ್ಕೆ ಅಪಮಾನ ಎಂದು ಹೇಳಿದ್ದಾರೆ.

ಅಪೌಷ್ಟಿಕತೆ ಎಂದರೆ ಏನು ?

ಹುಟ್ಟಿದ ಮಗು, ಬೆಳೆಯುತ್ತಿರುವ ಮಗು ಅಥವಾ ವಯಸ್ಕ ವ್ಯಕ್ತಿ ತನ್ನ ವಯಸ್ಸಿಗೆ ತಕ್ಕ ತೂಕ ಎತ್ತರ ರಕ್ತ ಪ್ರಮಾಣ ಹೊಂದಿರದಿದ್ದರೆ ಅಂತಹ ಮಕ್ಕಳನ್ನು ಅಥವಾ ವ್ಯಕ್ತಿಗಳನ್ನು ಅಪೌಷ್ಟಿಕತೆಯುಳ್ಳಿದ್ದಾರೆ ಎಂದು ಪರಿಗಣಿಸಲಾಗುತ್ತದೆ.

ನಮ್ಮ ಸಮಾಜದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳಲ್ಲಿ ಈ ಅಪೌಷ್ಟಿಕತೆ ತಟ್ಟುವುದು ಮತ್ತು ಪ್ರಾರಂಭವಾಗುವುದು ಹೆಚ್ಚಾಗಿ ಮಹಿಳೆಯರಲ್ಲಿ ಮತ್ತು ಅದರ ಪರಿಣಾಮವಾಗಿ ಮಕ್ಕಳಲ್ಲಿ ಎಂದು ವೈಜ್ಞಾನಿಕವಾಗಿ ಸಾಬೀತಾಗಿದೆ. ಆದರೆ ಈಗ ಎಲ್ಲ ವಯಸ್ಸಿನ ವ್ಯಕ್ತಿಗಳಲ್ಲೂ ಅಪೌಷ್ಟಿಕತೆ ಇದೆ. ಪ್ರಸ್ತುತ ರಾಜ್ಯದಲ್ಲಿ ಒಟ್ಟು 61.8 % ಜನರು ಅನಿಮೀಯಾದಿಂದ (ರಕ್ತಹೀನತೆ) ಬಳಲುತ್ತಿದ್ದಾರೆ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿ 71.5 % ನಗರ ಪ್ರದೇಶದಲ್ಲಿ 63% ಮಕ್ಕಳು ಹಾಗೂ ಮಹಿಳೆಯರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

1 ಲಕ್ಷ ಗರ್ಭಿಣಿ ಬಾಣಂತಿಯರಲ್ಲಿ 125 ಜನರು ಇಂದಿಗೂ ಸಾವನ್ನಪ್ಪುತ್ತಿದ್ದಾರೆ. ಈ ಸಾವುಗಳು ಪ್ರಮುಖವಾಗಿ ಅನಿಮಿಯಾ(ರಕ್ತಹೀನತೆ)ಯಿಂದಾಗಿ ಮತ್ತು ಪ್ರಸವದ ಸಂದರ್ಭದಲ್ಲಿ ತಗಲುವ ಸೋಂಕಿನಿಂದಾಗಿ ಸಂಭವಿಸುತ್ತವೆ. ದೇಶದಲ್ಲಿ ಹುಟ್ಟಿದ 10 ಮಕ್ಕಳಲ್ಲಿ 8 ಮಕ್ಕಳಿಗೆ ಮತ್ತು 10 ಮಹಿಳೆಯರಲ್ಲಿ 6 ಮಹಿಳೆಯರಿಗೆ ರಕ್ತಹೀನತೆ ಇದೆ. 42% ಮಕ್ಕಳು ಅಪೌಷ್ಟಿಕತೆಯಿಂದ ದೇಶದಲ್ಲಿ 1,000 ಮಕ್ಕಳಿಗೆ 69 ಮಕ್ಕಳು ಸಾವು ಪ್ರತಿ ನಿಮಿಷಕ್ಕೆ 4ರಂತೆ ಇಂದು ದೇಶದಲ್ಲಿದೆ. 1000 ಮಕ್ಕಳಲ್ಲಿ 51 ಮಕ್ಕಳು ಮೊದಲ ಹುಟ್ಟುಹಬ್ಬ ಆಚರಿಸುವ ಪೂರ್ವದಲ್ಲೇ ಸಾವನ್ನಪ್ಪುತ್ತಾರೆ.

ಮಕ್ಕಳನ್ನು ಪೋಷಣೆ ವಿಚಾರದಲ್ಲಿ ಕ್ಯೂಬಾ, ಸ್ಪೇನ್, ಜರ್ಮನಿ, ಇಟಲಿ, ಫ್ರಾನ್ಸ್, ಕೆನಡಾ, ಸ್ವಿಜ್ಜರಲ್ಯಾಂಡ್, ಬ್ರಿಟನ್ ಮತ್ತು ನಾರ್ವೆ ಮುಂದೆ ಇರುವ ದೇಶಗಳಾಗಿವೆ. ಅಮೇರಿಕಾ 24 ನೇ ಸ್ಥಾನ, ಆಸ್ಟ್ರೇಲಿಯಾ 16 ನೇ ಸ್ಥಾನ, ಚೀನಾ 29 ನೇ ಸ್ಥಾನ, ಸೋಮಾಲಿಯಾ ಕೊನೆಯ ಸ್ಥಾನ ಪಡೆದಿದ್ದರೆ ಭಾರತ 112 ನೇ ಸ್ಥಾನ ಪಡೆದಿದೆ. ಜಗತ್ತಿನಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವವರಲ್ಲಿ 5 ವರ್ಷ ಕೆಳಗಿನ ಮಕ್ಕಳಲ್ಲಿ 3 ನೇ ಒಂದು ಭಾಗ ಮಕ್ಕಳು ಭಾರತದಲ್ಲಿದ್ದಾರೆ. ಜಗತ್ತಿನಲ್ಲಿ ಹಸಿದವರಲ್ಲಿ 25% ಭಾರತೀಯರು. ಅಪೌಷ್ಟಿಕತೆ ಎಂಬುದು ಒಂದು ರಾಜ್ಯದ ಮತ್ತು ದೇಶದ ಮಾನವ ಅಭಿವೃದ್ಧಿ ಸೂಚ್ಯಂಕದ ಮುಖ್ಯ ಅಳತೆಗೋಲು.

ಇಂತಹ ಭೀಕರ ಸ್ವರೂಪದ ಅಪೌಷ್ಟಿಕತೆಗೆ ಮುಖ್ಯ ಕಾರಣಗಳೇನು?

- ಬಡತನ
- ಲಿಂಗ ತಾರತಮ್ಯ
- ನಿರುದ್ಯೋಗ
- ಕೃಷಿ ಬಿಕಟ್ಟು, ಅಸಂಘಟಿತ ವಲಯ, ಕಡಿಮೆ ಕೂಲಿ.
- ಪ್ರಾದೇಶಿಕ ಅಸಮತೋಲನ
- ಸರ್ಕಾರದ ಉಳ್ಳವರ ಪರವಾದ ನೀತಿಗಳು
- ಉದಾರೀಕರಣ ನೀತಿಗಳು

ಅಪೌಷ್ಟಿಕತೆಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

1) ಸಾಮಾನ್ಯ ಅಪೌಷ್ಟಿಕತೆ
2) ಸಾಧಾರಣ ಅಪೌಷ್ಟಿಕತೆ
3) ತೀವ್ರ ಅಪೌಷ್ಟಿಕತೆ.

ಮಕ್ಕಳು ಮತ್ತು ಬಾಣಂತಿ ಗರ್ಭಿಣಿಯರ ಅಪೌಷ್ಟಿಕತೆಯನ್ನು ಅಂಗನವಾಡಿ ಕೇಂದ್ರಗಳಲ್ಲಿ 1 ತಿಂಗಳ ಮಗುವಿನಿಂದ 5 ವರ್ಷಗಳವರೆಗೆ ಮಕ್ಕಳಿಗೆ ಮತ್ತು ಗರ್ಭಿಣಿ ಬಾಣಂತಿಯರ ತೂಕವನ್ನು ಹಾಕುವ ಮುಖಾಂತರ ಈ ಅಪೌಷ್ಟಿಕತೆಯನ್ನು ಕಂಡು ಹಿಡಿಯಲಾಗುತ್ತದೆ.

ಕರ್ನಾಟಕದಲ್ಲಿ ಸಾಮಾನ್ಯ ಅಪೌಷ್ಟಿಕತೆ	65.17%
ಸಾಧಾರಣ ಅಪೌಷ್ಟಿಕತೆ –	33.06%
ತೀವ್ರ ಅಪೌಷ್ಟಿಕತೆ	1.75%

- ಅಪೌಷ್ಟಿಕತೆಯಿಂದ ಮನುಷ್ಯನಿಗೆ ಟಿ.ಬಿ.ಯಂತಹ ಭಯಾನಕ ಖಾಯಿಲೆಗಳು ಬಂದು ಬೇಗನೇ ಸಾವನ್ನು ತರುತ್ತದೆ.
- ಈ ಅಪೌಷ್ಟಿಕತೆ ಬರುವುದೇ ಪೌಷ್ಟಿಕ ಆಹಾರ ಸರಿಯಾಗಿ ಸೇವಿಸದೇ ಇರುವುದರಿಂದ.

ಒಂದು ಮಗುವಿಗೆ ಕನಿಷ್ಠ 1,200 ರಿಂದ 1,800 ಕ್ಯಾಲೋರಿ ಆಹಾರ ಬೇಕು. ವಯಸ್ಕರಿಗೆ 2,400 ಕ್ಯಾಲೋರಿ ಆಹಾರ ಬೇಕು. ಈ ಆಹಾರದಲ್ಲಿ ಕಬ್ಬಿಣಾಂಶ, ಪ್ರೋಟಿನ್ ಮತ್ತು ಎಲ್ಲ ತರಹದ ವಿಟಮಿನ್‌ಗಳು ಇರುವಂತಹ ಆಹಾರ ಇರಬೇಕು. ಇಂತಹ ಆಹಾರ ಸೇವಿಸದೇ ಇರುವಂತಹ ಮಕ್ಕಳಲ್ಲಿ ಮತ್ತು ವಯಸ್ಕರಲ್ಲಿ ಅಪೌಷ್ಟಿಕತೆ ಬರುತ್ತದೆ.

ರಾಜ್ಯದಲ್ಲಿ ಶಿಶುಮರಣ ಪ್ರತಿ ಸಾವಿರಕ್ಕೆ –	48
ಹೆರಿಗೆ ಸಮಯದಲ್ಲಿ ಮರಣದ ಪ್ರಮಾಣ –	195
ಕಡಿಮೆ ತೂಕ –	41 %
ಕುಠಿತ ಬೆಳವಣಿಗೆ –	38 %
ಕ್ಷೀಣತೆ –	18 %
ರಕ್ತಹೀನತೆ –	51 %

ಮೂಲ ಕಾರಣಗಳು

ಬಡತನ : ದಕ್ಷಿಣ ಭಾರತದಲ್ಲಿ ಅತ್ಯಧಿಕ ಬಡತನ ಇರುವ ರಾಜ್ಯ ಕರ್ನಾಟಕ. 50.87 ಲಕ್ಷ ಗ್ರಾಮೀಣ ಬಡವರು, 50.09 ಲಕ್ಷ ಜನರು ನಗರಗಳಲ್ಲಿ ಕಡು ಬಡತನ ಸಂಕಷ್ಟದಲ್ಲಿದ್ದಾರೆಂದು ಅಧ್ಯಯನಗಳು ಹೇಳುತ್ತವೆ. ಅಂದರೆ ಆರು ಕೋಟಿ ಜನಸಂಖ್ಯೆಯಲ್ಲಿ 1 ಕೋಟಿಗೂ ಹೆಚ್ಚು ಬಡವರಿದ್ದಾರೆ.

ಲಿಂಗತಾರತಮ್ಯ: ರಾಜ್ಯದ ಜನಸಂಖ್ಯೆಯಲ್ಲಿ 1,000 ಪುರುಷರಿಗೆ 948 ಮಹಿಳೆಯರು ಇದ್ದಾರೆ. ಲಿಂಗಾನುಪಾತವು ಚಾಮರಾಜ ನಗರದಲ್ಲಿ ಶೇ. 22ರಷ್ಟು, ದಾವಣಗೆರೆಯಲ್ಲಿ ಶೇ. 15 ರಷ್ಟು, ಹಾಸನದಲ್ಲಿ 12% ವ್ಯತ್ಯಾಸವಿದೆ. ಅಂದರೆ ಹೆಣ್ಣಿನ ಪ್ರಮಾಣ ಗಂಡಿಗಿಂತ ಅಷ್ಟು ಕಡಿಮೆಯಾಗಿದೆ. ಈ ಊಳಿಗ ಮಾನ್ಯ ಸಮಾಜ ಹೆಣ್ಣು ಮಗುವನ್ನು ಬ್ರೂಣದಲ್ಲಿಯೇ ಕೊಲ್ಲುತ್ತಿರುವುದು. ಹೆಣ್ಣುಮಗುವಿಗೆ ಖರ್ಚು ಹೆಚ್ಚು ಎಂಬ ಭಾವನೆ, ಮಹಿಳೆಯರ ಮೇಲಿನ ಹಿಂಸೆಗಳಿಂದಾಗಿ ಹುಟ್ಟಿನಲ್ಲಿ ತಾರತಮ್ಯ ಇರುವುದನ್ನು ಗಮನಿಸಬೇಕಾಗುತ್ತದೆ. ಅವು ಅಲ್ಲದೇ ಹೆಣ್ಣು ಮಗುವಿನ ಬೆಳವಣಿಗೆ ಹಾಗು ಪೋಷಣೆಯಲ್ಲಿ ತಾರತಮ್ಯ ಇದೆ.

ಸರಿಯಾಗಿ ಆಹಾರ ಸಿಗದಿರುವುದು : ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದ ಬಡತನವಿದೆ. ಆದರೆ ಸರ್ಕಾರ ಅದನ್ನು ಬಗೆಹರಿಸುವ ಬದಲು ಹೆಚ್ಚು ಮಾಡಲು

ಪುಟ 15 ರಿಂದ

ಕನ್ನಡ ವಾರಪತ್ರಿಕೆ

ಕೋಮುವಾದಿ ಸಂಚುಗಳನ್ನು ಮೊಳಕೆಯಲ್ಲೇ ಚಿವುಟಬೇಕು

ಉದ್ಯೋಗದ ಹುಡುಕಾಟದಲ್ಲಿ ಒರಿಸ್ಸಾ ಮುಂತಾದ ರಾಜ್ಯಗಳಿಂದ ವಲಸೆ ಬಂದಿದ್ದ ಅಮಾಯಕ ಕೂಲಿಕಾರ ಜನರನ್ನು ಮಂಡ್ಯದಲ್ಲಿ ರೈಲಿನಿಂದ ಇಳಿಸಿ ಅವರು ಅಕ್ರಮ ಬಂಗ್ಲಾದೇಶಿ ವಲಸಿಗರೆಂದು ಆರೋಪಿಸಿ ಹಲ್ಲೆ ನಡೆಸಿದ ಎಬಿವಿಪಿ ಸಂಘಟನೆಯ ಗುಂಡಾಗಿರಿ ಕೃತ್ಯವನ್ನು ನೋಡಿದರೆ ಇಡೀ ದೇಶದಲ್ಲಿ ಕೋಮವಾದಿ ದೃವೀಕರಣವನ್ನು ತರುವ ಕೋಮವಾದಿ ಶಕ್ತಿಗಳ ಸಂಚುಗಳು ವ್ಯಾಪಕಗೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ.

ಸೀತಾರಾಮ ಯೆಚೂರಿ

ಕೆಲ ದಿನಗಳ ಹಿಂದಷ್ಟೇ ನ್ಯಾಯಾಲಯದಿಂದ ಹೊರಬಿದ್ದ ಎರಡು ತೀರ್ಪುಗಳು ದೇಶದ ಜಾತ್ಯತೀತ ಸಮಾಜದಲ್ಲಿ ಅಪಾರ ಮಹತ್ವವನ್ನು ಪಡೆದುಕೊಂಡಿದೆ. ಮುಂಬೈನ 26/11 ದಾಳಿಯ ಆರೋಪಿ ಮೊಹಮ್ಮದ್ ಅಜ್ಮಲ್ ಆಮೀರ್ ಕಸಬ್‌ನ ಮನವಿಯನ್ನು ತಿರಸ್ಕರಿಸಿದ ಸುಪ್ರೀಂ ಕೋರ್ಟ್, ಈ ಘಟನೆಯಲ್ಲಿ ಬದುಕುಳಿದಿರುವ ಏಕೈಕ ಉಗ್ರ ಕಸಬ್‌ನ ಗಲ್ಲು ಶಿಕ್ಷೆಯನ್ನು ಖಾಯಂಗೊಳಿಸಿ ನೀಡಿದ ತೀರ್ಪನ್ನು ಎತ್ತಿ ಹಿಡಿದಿದೆ. ಜನಮಾನಸದಲ್ಲಿ ಇನ್ನೂ ಮರೆಯಾಗದ ದೇಶದ ಅತ್ಯಂತ ಬರ್ಬರ ಕೃತ್ಯವಾಗಿದ್ದ ಈ ದಾಳಿಯಲ್ಲಿ 166 ಮಂದಿ ಮೃತಪಟ್ಟಿದ್ದು, 238 ಮಂದಿ ಗಂಭೀರವಾಗಿ ಗಾಯಗೊಂಡಿದ್ದರು. ದೇಶದ ವಿರುದ್ಧ ಯುದ್ಧ ಸಾರಿದ ಆರೋಪದಲ್ಲಿ ಕಸಬ್‌ನನ್ನು ಅಪರಾಧಿಯನ್ನಾಗಿ ಮಾಡಿದ ತೀರ್ಪನ್ನು ಇಬ್ಬರು ನ್ಯಾಯಾಧೀಶರನ್ನು ಒಳಗೊಂಡ ವಿಭಾಗೀಯ ಪೀಠ ಎತ್ತಿಹಿಡಿಯಿತು.

ಇನ್ನೊಂದು ಪ್ರಕರಣದಲ್ಲಿ, ಗುಜರಾತ್‌ನ ನರೋದ ಪಾಟಿಯಾ ನರಮೇಧ ಪ್ರಕರಣದಲ್ಲಿ 32 ಮಂದಿಯ ವಿರುದ್ಧದ ಆರೋಪದ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯ, ಶಿಕ್ಷೆಯ ತೀರ್ಪನ್ನು ಪ್ರಕಟಿಸಿತು. 2002ರ ಗೋಧ್ರಾ ಕೋಮು ಗಲಭೆಯ ನಂತರ ನಡೆದ ಈ ಭಯಾನಕ ಹತ್ಯಾಕಾಂಡದಲ್ಲಿ ಅಲ್ಪಸಂಖ್ಯಾತ ಸಮುದಾಯದ 97 ಮಂದಿಯನ್ನು ಬರ್ಬರವಾಗಿ ಕೊಲೆ ಮಾಡಲಾಗಿತ್ತು. ಅಪರಾಧಿಕ ಪಿತೂರಿ ಮತ್ತು ಕೊಲೆ ಕೃತ್ಯದ ಮೇಲೆ ಈ ಅಪರಾಧಿಗಳಿಗೆ ಶಿಕ್ಷೆ ಪ್ರಕಟಿಸಿತು. ಈ ಪೈಕಿ, ನರೇಂದ್ರ ಮೋದಿ ಸರ್ಕಾರದ ಸಚಿವರೂ ಹಾಗೂ ನರೋದ ವಿಧಾನಸಭಾ ಕ್ಷೇತ್ರದ ಸದಸ್ಯರೂ ಮತ್ತು ಬಿಜೆಪಿಯ ಪ್ರಮುಖ ಸದಸ್ಯರೂ ಸೇರಿದ್ದಾರೆ. ತೆಹಲ್ಕಾ ನಡೆಸಿದ ಕುಟುಕು ಕಾರ್ಯಾಚರಣೆಯ ಸಂದರ್ಭದಲ್ಲಿ, ಉನ್ಮತ್ತ ಗಲಭೆಕೋರರಿಗೆ ಕೊಲೆ ಮಾಡಲು ಪ್ರೇರಣೆ ನೀಡಿದ ತಮ್ಮ ಪಾತ್ರದ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದ ಬಿಜೆಪಿಯ ಪ್ರಮುಖ ಒಬ್ಬ ನಾಯಕ, ತಮ್ಮನ್ನು ಮಹಾರಾಣಾ ಪ್ರತಾಪನಿಗೆ ಹೋಲಿಸಿಕೊಂಡಿದ್ದ.

ಈ ನರಮೇಧ ನಡೆದ ಒಂದು ದಶಕದ ಬಳಿಕ ನ್ಯಾಯಾಲಯದ ತೀರ್ಪು ಹೊರಬಿದ್ದಿದೆ. ಆದರೂ ನ್ಯಾಯಾಲಯದ ಮೇಲಿನ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವ ಜನರಿಗೆ ಈ ಎರಡು ಮಹತ್ವದ ತೀರ್ಪುಗಳು ಮತ್ತೆ ನ್ಯಾಯಾಲಯದಲ್ಲಿ ಕಿಂಚಿತ್ತಾದರೂ ವಿಶ್ವಾಸ ಮೂಡಿಸಿದೆ.


ಇವೆಲ್ಲದರ ಮಧ್ಯೆ, ದೇಶದ ವಿವಿಧ ಭಾಗದಲ್ಲಿ ನಡೆಯುತ್ತಿರುವ ಇತರ ಬೆಳವಣಿಗೆಗಳು ನಿಜಕ್ಕೂ ಆತಂಕಕಾರಿ ವಿಷಯವಾಗಿದೆ. ಅಸ್ಸಾಂನ ಬೋಡೋಲ್ಯಾಂಡ್‌ಗಾಗಿ ನಡೆಯುತ್ತಿರುವ ಹಿಂಸಾಚಾರ ಕಳವಳಕಾರಿಯಾಗಿದೆ. ಸರ್ಕಾರದ ಅಧಿಕೃತ ಮಾಹಿತಿಗಳ ಪ್ರಕಾರ ಸುಮಾರು ನೂರರಷ್ಟು ಮಂದಿ ಈಗಾಗಲೇ ಈ ಹಿಂಸಾಚಾರಕ್ಕೆ ಬಲಿಯಾಗಿದ್ದಾರೆ. ಎರಡು ಲಕ್ಷಕ್ಕೂ ಹೆಚ್ಚು ಮಂದಿ ನಿರ್ವಸಿತರಾಗಿದ್ದಾರೆ. ಅವರಲ್ಲಿ ಬಹುತೇಕ ಮಂದಿ 224 ಪರಿಹಾರ ಕೇಂದ್ರಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ,



ಸರ್ಕಾರದ ವರದಿಯ ಈ ಅಂಕಿ ಸಂಖ್ಯೆಗಳು ವಾಸ್ತವ ಪರಿಸ್ಥಿತಿಗಿಂತ ತೀರಾ ಕಡಿಮೆಯದ್ದಾಗಿದೆ ಎಂದು ಸಾಮಾಜಿಕ ಸಂಘಟನೆಗಳು, ಕಾರ್ಯಕರ್ತರು ಹೇಳುತ್ತಿದ್ದಾರೆ.

ಕಳೆದ ಕೆಲವು ವಾರಗಳಿಂದೀಚೆಗೆ, ಗಲಭೆ ಕುರಿತ ಮಾಹಿತಿಗಳನ್ನು ಈ ಪತ್ರಿಕೆ ನೀಡುತ್ತಾ ಬಂದಿದೆ. ಸಿಪಿಐ(ಎಂ)ನ ಸಂಸದೀಯ ಮಂಡಳಿಯ ನಿಯೋಗ ಗಲಭೆಪೀಡಿತ ಹಾಗೂ ಸಂತ್ರಸ್ತ ಪ್ರದೇಶಕ್ಕೆ ಭೇಟಿ ನೀಡಿದ ವರದಿಯ ವಿವರವನ್ನೂ ನೀಡಲಾಗಿದೆ.

2003ರಲ್ಲಿ "ಬೋಡೋಲ್ಯಾಂಡ್ ಪ್ರಾದೇಶಿಕ ಸ್ವಾಯತ್ತ ಜಿಲ್ಲೆ"ಗಳನ್ನು ಸ್ಥಾಪಿಸಿದ ಬಳಿಕ ಈ ಪ್ರದೇಶದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣಗೊಳ್ಳುತ್ತಲೇ ಇದೆ. ಈ ಸ್ವಾಯತ್ತ ಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿ ಬೋಡೋ ಜನಸಂಖ್ಯೆ ಮೂರನೇ ಒಂದರಷ್ಟು ಇದೆ. (2003ರಲ್ಲಿ ಅಸ್ಸಾಂನ ಎಂಟು ಜಿಲ್ಲೆಗಳನ್ನು ಹೊರತುಪಡಿಸಿ) ಇದಕ್ಕೂ ಮುನ್ನ, 1993ರಲ್ಲಿ ಪ್ರತ್ಯೇಕ ಬೋಡೋ ರಾಜ್ಯ ರಚನೆಯ ಪ್ರಸ್ತಾಪವನ್ನು ಕೇಂದ್ರದಲ್ಲಿನ ಆಗಿನ ಕಾಂಗ್ರೆಸ್ ಸರ್ಕಾರ ತಿರಸ್ಕರಿಸಿತ್ತು. ಬೋಡೋಗಳು ಅವರ ಪ್ರದೇಶದಲ್ಲಿ ಅಲ್ಪಸಂಖ್ಯಾತರಾಗಿದ್ದು, ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆ ಸಲ್ಲಿಸಿದ್ದಾರೆ ಎಂಬ ಕಾರಣಕ್ಕೆ ಅವರ ಒತ್ತಾಯವನ್ನು ತಿರಸ್ಕರಿಸಲಾಗಿತ್ತು. ಬೋಡೋಗಳಲ್ಲದೆ ಮುಸ್ಲಿಮರು ಮತ್ತು ಆದಿವಾಸಿಗಳು ದೊಡ್ಡ ಪ್ರಮಾಣದಲ್ಲಿ ವಾಸಿಸುತ್ತಿದ್ದರು. ಸ್ವಾಯತ್ತ ಪ್ರದೇಶದ ಆಡಳಿತವನ್ನು ಬೋಡೋಲ್ಯಾಂಡ್ ಪ್ರಾದೇಶಿಕ ಮಂಡಳಿ ನೋಡಿಕೊಳ್ಳುತ್ತಿತ್ತು. ಈ ಮಂಡಳಿಯಲ್ಲಿ ಬೋಡೊ ಮುಖಂಡರು ಪ್ರಾಬಲ್ಯ ಹೊಂದಿರುವುದರಿಂದ ಮುಸ್ಲಿಂ ವಿರೋಧಿ ಹಾಗೂ ಆದಿವಾಸಿ ವಿರೋಧಿ ನಿಲುವನ್ನು ತಳೆಯುತ್ತಿದ್ದರು ಎಂದು ಗ್ರಹಿಸಲಾಗುತ್ತಿತ್ತು. ಇದು ಈ ಪ್ರದೇಶದಲ್ಲಿ ಉದ್ವಿಗ್ನ ಸ್ಥಿತಿ ಹೆಚ್ಚಾಗಲು ಕಾರಣ. 1996ರಿಂದ 1998ರ ಮಧ್ಯೆ ಸರ್ಕಾರಿ ಅಂಕಿ ಸಂಖ್ಯೆಗಳ ಪ್ರಕಾರ 1213 ಮಂದಿ ಬೋಡೋ-ಆದಿವಾಸಿಗಳ ಘರ್ಷಣೆಯಲ್ಲಿ ಸಾವನ್ನಪ್ಪಿದ್ದಾರೆ.



ಈಗಲೂ ಲಕ್ಷಗಟ್ಟಲೆ ಮಂದಿ ಪರಿಹಾರ ಕೇಂದ್ರಗಳಿಗೆ ನೆರವಿಗಾಗಿ ಆಗಮಿಸುತ್ತಿದ್ದಾರೆ.

ಈ ಹಿಂಸಾಚಾರ ಮತ್ತು ಸಾವು-ನೋವುಗಳು ಅತ್ಯಂತ ಅಮಾನವೀಯ ಮತ್ತು ವ್ಯಾಪಕ ಖಂಡನೀಯ. ಸದ್ಯದ ಪರಿಸ್ಥಿತಿಯಲ್ಲಿ ಇಂತಹ ಘಟನೆಗಳನ್ನು ದೇಶಾದ್ಯಂತ ಕೋಮುವಾದಿ ಧ್ರುವೀಕರಣಕ್ಕಾಗಿ ಬಳಕೆ ಮಾಡಲು ಕೆಲವು ಸಮಾಜ ಘಾತಕ ಶಕ್ತಿಗಳು ಪ್ರಯತ್ನಿಸುತ್ತಿವೆ. ಎರಡೂ ಕಡೆಯ ಕೋಮುವಾದಿ ಉಗ್ರಗಾಮಿ ಶಕ್ತಿಗಳು ತಮ್ಮ ಕೋಮುವಾದಿ ಅಜೆಂಡಕ್ಕಾಗಿ ಸಮಾಜವನ್ನು ಒಡೆದು ಹೋರಾಟ ನಡೆಸಲು ಸದಾ ಸನ್ನದ್ಧವಾಗಿವೆ ಎಂಬುದನ್ನು ಇದು ತೋರಿಸುತ್ತದೆ.

ಅತ್ಯಂತ ಅಮಾನವೀಯವಾದ ಈ ಹಿಂಸೆ ಹಾಗೂ ಜೀವಗಳ ನಾಶ ವ್ಯಾಪಕ ಖಂಡನೆಗೆ ಒಳಗಾಗಿದೆ. ಆದರೆ, ಈ ಸಂದರ್ಭವನ್ನು ಕೋಮು ಹಿಂಸೆ ಪ್ರಚೋದನೆಗಾಗಿ ದುರ್ಬಳಕೆ ಮಾಡಿಕೊಳ್ಳುವ ಹುನ್ನಾರ ದೇಶಾದ್ಯಂತ ನಡೆದಿದೆ. ತಮ್ಮ ಕೋಮುವಾದಿ ಅಜೆಂಡಾವನ್ನು ಮುಂದುವರಿಸಲು ಎರಡೂ ಕಡೆಯ ಕೋಮುವಾದಿ ಬಣಗಳ ಉಗ್ರಗಾಮಿಗಳು ಎಂತಹ ಸಂದರ್ಭವನ್ನೂ ಬಳಸಲು ಹೇಸುವುದಿಲ್ಲ ಮತ್ತು ಸದಾ ಕದನದಾಹಿಗಳಾಗಿರುತ್ತಾರೆ ಎಂಬುದನ್ನು ಇದು ತೋರಿಸುತ್ತದೆ.

ಸಂಸತ್ತಿನಲ್ಲಿ ಎಲ್ಲಾ ರಾಜಕೀಯ ಬಣಗಳೂ ಒಟ್ಟಾಗಿ ಅಪರೂಪದ ಏಕತೆಯನ್ನು ಪ್ರದರ್ಶಿಸಿ ಆ ಹಿಂಸೆಯನ್ನು ಒಕ್ಕೊರಲಿನಿಂದ ಖಂಡಿಸಿ ಶಾಂತಿ ಕಾಪಾಡಲು ಮನವಿ ಮಾಡಿದ್ದರೆ, ಬಿಜೆಪಿ ಮಾತ್ರ ಬಾಂಗ್ಲಾದೇಶಿಗಳ ಕಾನೂನುಬಾಹಿರ ವಲಸೆಯೇ ಈ ವಿಷಮ ಪರಿಸ್ಥಿತಿಗೆ ಕಾರಣ ಎಂಬ ಕೊಂಕು ಮಾತನಾಡಿದೆ. ಅತ್ತ ಮುಂಬಯಿಯಲ್ಲಿ ರಜಾ ಅಕಾಡೆಮಿ ಎಂಬ ಗುಂಪು ಅಸ್ಸಾಮಿನಲ್ಲಿ ಮುಸ್ಲಿಮರ ಮೇಲೆ ದಾಳಿ ನಡೆಯುತ್ತಿದೆ ಎಂಬ ಗುಲ್ಲೆಬ್ಬಿಸಿ ಪ್ರತಿಭಟನೆ ಸಂಘಟಿಸಿ ಪೋಲಿಸರೊಂದಿಗೆ ಹಿಂಸಾತ್ಮಕ ಘರ್ಷಣೆಗೆ ಇಳಿದಿದೆ. ಕಾಡ್ಗಿಚ್ಚಿನಂತೆ ಹರಡಿ ದೇಶದ ಅನೇಕ ಕಡೆಗಳಲ್ಲಿ ಈಶಾನ್ಯ ಭಾರತದ ಜನರಲ್ಲಿ ಭಯ ಭೀತಿ ಉಂಟುಮಾಡಲಾಗಿದೆ. ಕರ್ನಾಟಕದಲ್ಲಿ ಎಂಥಾ ರೀತಿಯ ಹೆದರಿಕೆ ಹುಟ್ಟಿಸಲಾಗಿತ್ತೆಂದರೆ ಈಶಾನ್ಯ ಭಾರತದ ಜನರು ಗುಳೆ ಎದ್ದು ಹೋಗುವಂತಾಯಿತು. ನಿಗೂಢ ಸಂಗತಿಯೆಂದರೆ, ಗುಳೆ ಹೋಗಲು ವಿಶೇಷ ರೈಲುಗಳನ್ನು ಏರ್ಪಡಿಸಿದ ರೀತಿ ಕರ್ನಾಟಕದ ಬಿಜೆಪಿ ಸರ್ಕಾರ ನಿರುಮ್ಮಳತೆ ಬಗ್ಗೆ ಅನುಮಾನ ಹುಟ್ಟಿಸುತ್ತದೆ. ಶ್ರೀರಾಮ ಸೇನೆಯಂತಹ ಆರ್.ಎಸ್.ಎಸ್. ಪರಿವಾರಗಳು ಕರ್ನಾಟಕದಲ್ಲಿ ಕೋಮು ವಿಷ ಬೀಜ ಬಿತ್ತುವ ಕೃತ್ಯವನ್ನು ವ್ಯವಸ್ಥಿತವಾಗಿ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ಮಾಡುತ್ತಲೇ ಇವೆ.

ಬಾಂಗ್ಲಾದೇಶದ ಮುಸ್ಲಿಮರ ಕಾನೂನುಬಾಹಿರ ವಲಸೆಯು ಅಲ್ಲಿಯ ಜನರ ಉದ್ಯೋಗ ಮತ್ತು ಆಸ್ತಿಯನ್ನು ಕಸಿಯುತ್ತಿದೆಯೆಂಬ ವ್ಯವಸ್ಥಿತ ಪ್ರಚಾರವನ್ನು

ಪುಟ 10ಕ್ಕೆ

ಕೋಮುವಾದಿ ಸಂಚು ಚಿವುಟಬೇಕು

ಪುಟ 9 ರಿಂದ

ಆರ್.ಎಸ್.ಎಸ್./ಬಿಜೆಪಿ ಮತ್ತು ಅವುಗಳ ಕೋಮುವಾದಿ ಬಣಗಳು ನಿರಂತರವಾಗಿ ಮಾಡುತ್ತಲೇ ಇವೆ. ವಾಸ್ತವವಾಗಿ, ಗಡಿಗಳಲ್ಲಿ ಬೇಲಿ ಹಾಕುವ ಮೂಲಕ ಕಾನೂನು ಬಾಹಿರ ವಲಸೆಯನ್ನು ತಡೆಗಟ್ಟಬೇಕೆಂದು ಸಿಪಿಐ(ಎಂ) ಬಹಳ ಕಾಲದಿಂದ ಒತ್ತಾಯಿಸುತ್ತಲೇ ಬಂದಿದೆ. ನಿಜ ಸಂಗತಿಯೇನೆಂದರೆ, 2011 ರ ತಾತ್ಕಾಲಿಕ ಜನಗಣತಿ ಪ್ರಕಾರ 1991 ಮತ್ತು 2001 ರ ನಡುವೆ ಈಗ ಹಿಂಸೆಯ ತಾಣವಾಗಿರುವ ಕೋಕ್ರಝಾರ್‌ನಲ್ಲಿ ದಶಕದ ಜನಸಂಖ್ಯೆಯ ಬೆಳವಣಿಗೆಯು ಶೇಕಡಾ 14.49 ಇದ್ದು ಇದು ಅಸ್ಸಾಮ್‌ನ ಬೆಳವಣಿಗೆ 18.92 ಹಾಗೂ ಭಾರತದ ಒಟ್ಟಾರೆ ಬೆಳವಣಿಗೆ ಶೇಕಡಾ 21.54 ಗಿಂತ ಕಡಿಮೆಯೇ ಇದೆ. 2001 ಮತ್ತು 2011 ರ ದಶಕದ ಜನಸಂಖ್ಯಾ ಬೆಳವಣಿಗೆಯನ್ನು ಗಮನಿಸಿದರೆ ಕೋಕ್ರಝಾರ್‌ನಲ್ಲಿ ಅದು ಶೇಕಡಾ 14.49 ನಿಂದ ಶೇಕಡಾ 5.19 ಕ್ಕೆ ಇಳಿದಿರುವುದು ಮುಸ್ಲಿಮ್ ವಲಸೆ ಎಂಬ ಬಿಜೆಪಿ/ಆರ್.ಎಸ್.ಎಸ್.ನ ಕೋಮುವಾದಿ ಪ್ರಚಾರ ಎಷ್ಟು ಹಸಿಸುಳ್ಳು ಎಂಬುದು ಸ್ಪಷ್ಟವಾಗುತ್ತದೆ. ಇದು ವಾಸ್ತವ ಸ್ಥಿತಿ.

ಈ ಒಟ್ಟು ಭಿತ್ತಿಯಲ್ಲಿ ಮತ್ತೊಂದು ಕಡೆ, ಶೋಷಣೆಗೆ ಒಳಗಾಗಿರುವವರ ಒಳಿತಿಗಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿಕೊಳ್ಳುವ ಆಲ್ ಇಂಡಿಯಾ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್(ಎಐಯುಡಿಎಫ್) ಅಸ್ಸಾಂ ವಿಧಾನಸಭೆಯಲ್ಲಿ ಎರಡನೇ ದೊಡ್ಡ ಪಕ್ಷವಾಗಿದ್ದು 'ಮುಸ್ಲಿಮರ ಹಕ್ಕಿಗಾಗಿ ಮುಸ್ಲಿಮರು' ಎಂಬ ನೀತಿಯನ್ನು ಪ್ರತಿಪಾದಿಸುತ್ತಿದೆ. 2006ರ ವಿಧಾನಸಭೆ ಚುನಾವಣೆ ನಂತರ ಕಾಂಗ್ರೆಸ್‌ಗೆ ಬಹುಮತ ಕೊರತೆಯಾಯಿತು. ಆಗ ಕಾಂಗ್ರೆಸ್ ಹತ್ತು ಶಾಸಕರಿದ್ದ ಎಐಯುಡಿಎಫ್ ಬದಲಿಗೆ ಹನ್ನೊಂದು ಬೋಡೋ ಶಾಸಕರ ಬೆಂಬಲ ಪಡೆಯಿತು. ರಾಜ್ಯ ಸರ್ಕಾರ ಮುಸ್ಲಿಮರ ಬಗ್ಗೆ ಸಹಾನುಭೂತಿ ಹೊಂದಿಲ್ಲ ಎಂಬ ಗ್ರಹಿಕೆಗೆ ಇದು ಪುಷ್ಠಿ ನೀಡಿತು. ರಾಜ್ಯ ಸರ್ಕಾರ ಕೈಗೊಂಡ ಇದಕ್ಕಿಂತಲೂ ಅಪಾಯಕಾರಿಯಾದ ಮತ್ತೊಂದು ಕ್ರಮ ಎಂದರೆ ಬಾಂಗ್ಲಾದೇಶದಿಂದ ಬರುವ ಹಿಂದೂಗಳಿಗೆ ನಿರಾಶ್ರಿತರ ಮಾನ್ಯತೆ ನೀಡಿತು. ಅದೇ ಸಂದರ್ಭದಲ್ಲಿ ಬಾಂಗ್ಲಾದಿಂದ ಬರುವ ಮುಸ್ಲಿಮರನ್ನು ನೋಡುವ ಡಿ-ವೋಟರ್ (ಅನುಮಾನಾಸ್ಪದ ಮತದಾರ) ವಿಷಯದ ಕುರಿತು ನುಣುಚಿಕೊಂಡಿತು. ಆಸ್ಸಾಂನಲ್ಲಿ ಕೇವಲ 1.5 ಲಕ್ಷ ಡಿ-ವೋಟರ್‌ಗಳಿದ್ದಾರೆ ಎಂದು ಚುನಾವಣಾ ಆಯೋಗ ಈಗಾಗಲೇ ಲೆಕ್ಕ ಹಾಕಿದೆ. ಈ ರೀತಿಯ ಕೋಮು ವಿಭಜನೆ ಕಾಂಗ್ರೆಸ್‌ಗೆ ಅಭೂತಪೂರ್ವ ಬಹುಮತ ತಂದುಕೊಟ್ಟಿತು. ವಿಧಾನಸಭೆಯ 126 ಸ್ಥಾನಗಳ ಪೈಕಿ 76 ಸ್ಥಾನಗಳನ್ನು ತಂದುಕೊಟ್ಟಿತು. ಮತ್ತೊಂದು ಕಡೆ ಎಐಯುಡಿಎಫ್‌ಗೆ ಹತ್ತು ಸ್ಥಾನಗಳಿದ್ದುದು 18 ಸ್ಥಾನಗಳಿಗೆ ಏರುವು ದರೊಂದಿಗೆ ಎರಡನೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು.

ಅಸ್ಸಾಂ ಪರಿಸ್ಥಿತಿಯನ್ನು ತುಂಬಾ ಮುತುವರ್ಜಿಯಿಂದ ನೋಡಬೇಕಾದ ಅಗತ್ಯವಿತ್ತು. ಆದರೆ ಗುಪ್ತಚರ ಇಲಾಖೆ ನೀಡಿದ ಎಚ್ಚರಿಕೆಯನ್ನು ರಾಜ್ಯ ಸರ್ಕಾರ ನಿರ್ಲಕ್ಷಿಸಿದೆ ಎಂದು ಹೇಳಿಕೆ ನೀಡಿದ ಕೇಂದ್ರ ಸರ್ಕಾರ ಅಸ್ಸಾಂನಲ್ಲಿನ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ಎಲ್ಲ ಸಮುದಾಯಗಳ ಪ್ರಾಣ ಮತ್ತು ಸ್ವಾತಂತ್ರ್ಯ ರಕ್ಷಣೆಗೆ ಮುಂದಾಗುವ ಅಗತ್ಯವಿದೆ. ಮತ್ತೊಂದು ಕಳವಳಕಾರಿ ವಿಷಯ ಎಂದರೆ ಇಲ್ಲಿನ ಕೋಮುಹಿಂಸೆ ದೇಶದ ಇತರ ಭಾಗಗಳಿಗೂ ಹಬ್ಬುವ ಭೀತಿ ಎದುರಾಗಿರುವುದು.

ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಒತ್ತಾಯಿಸುತ್ತಿರುವ ಬಿಜೆಪಿಯ ಸಂಸತ್ ಕಲಾಪಗಳಿಗೆ ತಡೆ ಮಾಡುವ ಕಾರ್ಯತಂತ್ರ ಕಾಂಗ್ರೆಸ್‌ಗೆ ಒಳ್ಳೆಯದೇ ಆಗಿದೆ. ಏಕೆಂದರೆ ಇದರಿಂದ ಅಸ್ಸಾಂ ಹಿಂಸಾಚಾರ ಕುರಿತಂತೆ ಮತ್ತಷ್ಟು ರಚನಾತ್ಮಕ ಚರ್ಚೆಗಳು ನಡೆದು ಕಾಂಗ್ರೆಸ್ ಸರ್ಕಾರ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳದಂತೆ ಮಾಡುವ ಅವಕಾಶ ಕೈ ತಪ್ಪಿದಂತಾಗಿದೆ. ಬಿಜೆಪಿಯ ತಂತ್ರಗಾರಿಕೆ ಏನನ್ನು ತೋರಿಸುತ್ತದೆ ಎಂದರೆ ಕೋಮುಹಿಂಸಾಚಾರ ದೇಶಾದ್ಯಂತ ಹಬ್ಬಿ, ಇದೇ ಸಂದರ್ಭದಲ್ಲಿ ಅವಧಿಗೆ ಮೊದಲೇ ಚುನಾವಣೆಯಾದರೆ ಕೋಮುವಾದದ ನೆಲೆಯಲ್ಲಿ ಚುನಾವಣೆ ಲಾಭ ಪಡೆಯಬಹುದು ಎಂಬುದಾಗಿದೆ. ಇದೇ ಸಂದರ್ಭದಲ್ಲಿ ಅವಧಿಗೆ ಮೊದಲೇ ಚುನಾವಣೆ ಆದರೆ ತಮಗೆ ಲಾಭವಾಗಲಿದೆ ಎಂಬ ಆಸೆ ಇಟ್ಟುಕೊಂಡಿರುವ ಪ್ರಾದೇಶಿಕ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಒತ್ತಾಸೆಯನ್ನೂ ಬಿಜೆಪಿ ಹೊಂದಿದೆ

ದೇಶದ ಜಾತ್ಯಾತೀತ ಪ್ರಜಾಪ್ರಭುತ್ವ ಒಕ್ಕೂಟದ ಕೋಢೀಕರಣಕ್ಕೆ ಅಪಾಯ ಎದುರಾಗುತ್ತಿದೆ. ಇಂತಹ ಬೆಳವಣಿಗೆಗಳನ್ನು ಆರಂಭದಲ್ಲೇ ಚಿವುಟಿಹಾಕುವ ಅಗತ್ಯವಿದೆ. ಚುನಾವಣೆ ಲಾಭಕ್ಕಾಗಿ ಹುಟ್ಟು ಹಾಕುವ ಇಂತಹ ಕೋಮುವಾದಿ ಪ್ರಕ್ರಿಯೆಗಳು ಯಶಸ್ವಿಯಾಗಲ್ಲು ಅವಕಾಶ ಕೊಡಬಾರದು. ಇದನ್ನು ನಿರ್ಣಾಯಕವಾಗಿ ತಿರಸ್ಕರಿಸಬೇಕು. ಅಮಾಯಕ ಜನರ ಹತ್ಯೆಗಳನ್ನು ನಿಲ್ಲಿಸಬೇಕು. ಭಾರತದ ಶ್ರೀಮಂತವಾದ ಬಹುಸಂಸ್ಕೃತಿಗೆ ಧಕ್ಕೆಯುಂಟು ಮಾಡುವ ಇಂತಹ ಶಕ್ತಿಗಳನ್ನು ಕಿತ್ತೆಸೆಯಬೇಕು.

('ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಆಗಸ್ಟ್ 30 ರ ಸಂಚಿಕೆಯ ಸಂಪಾದಕೀಯ)

ಅರಿವಿಗಾಗಿ ತಹತಹ ಮತ್ತು ಸಂಘರ್ಷ...

ಪುಟ 16 ರಿಂದ

ನಗರದ ಶಾಲೆಗೆ ಬಂದ ಹಳ್ಳಿ ಗಮಾರ

ತಾವು ಹಳ್ಳಿಯಲ್ಲಿ ತೊಡುತ್ತಿದ್ದ ಬಟ್ಟೆಗಳನ್ನು ತೊಟ್ಟು, ನಮ್ಮ ದೇಶದ ಮುರುಗನ , ಶ್ರೀಶೈಲದ ಭಕ್ತರು ಹೊತ್ತುಕೊಂಡು ಹೋಗುವ ಕಾವಡಿಗಳಂತಹ ಒಂದು ಗಳದಲ್ಲಿ ಒಂದು ಕಡೆ ತಮ್ಮ ಬಟ್ಟೆ ಬರೆಗಳನ್ನು ಮತ್ತೊಂದು ಕಡೆ ತಮಗೆ ಪ್ರಿಯವಾದ ಪುಸ್ತಕಗಳನ್ನು ತುಂಬಿಕೊಂಡು ಒಬ್ಬರೇ ನಡೆದುಕೊಂಡು 25 ಕಿಮೀ ದೂರದ ಆ ಶಿಯಾಂಗ್ ಶಿಯಾಂಗ್ ಎಂಬ ಪಟ್ಟಣಕ್ಕೆ ಹೊರಟರು.

ತುಂಗ್ ಶಾನ್ ಹಿರಿಯ ಪ್ರಾಥಮಿಕ ಶಾಲೆ ಎಂಬ ಈಶಾಲೆ ಪಟ್ಟಣದ ಹೊರಗೆ ಒಂದು ಗುಡ್ಡದ ಮೇಲಿತ್ತು. ಹೊಲ ಗದ್ದೆಗಳ ನಡುವೆ ಹೊಳೆಯೊಂದನ್ನು ದಾಟಿ ಶಾಲೆಗೆ ಬಂದರು. ಆ ಶಾಲೆಯ ಒಂದು ದೊಡ್ಡ ಕೋಟೆ. ಸುತ್ತ ಒಂದು ಅಗಳು (ನೀರು ತುಂಬಿದ ಆಳವಾದ ಕಾಲುವೆ). ಅಗಳನ್ನು ದಾಟಿದರೆ ದೊಡ್ಡ ದಿಡ್ಡಿ ಬಾಗಿಲುಗಳು. ಅವುಗಳ ಮುಂದೆ ಎರಡೂ ಮಗ್ಗಲುಗಳಲ್ಲಿ ಬೃಹದಾಕಾರದ ಸಿಂಹಗಳ ಪ್ರತಿಮೆ. ಸಾಮಾನ್ಯರಿಗೆ ಹೆದರಿಕೆಯನ್ನು ಹುಟ್ಟಿಸಲೆಂದೇ ಸೃಷ್ಟಿಸಿದ ವಾತಾವರಣ.

ಮಾವೋ ಅಗಳನ್ನು ದಾಟಲು ಕಟ್ಟಿದ್ದ ಸೇತುವೆಯನ್ನ ದಾಟಿ ಒಳ ಬಂದರೆ ಅಲ್ಲಿ ಆಡುತ್ತಿದ್ದ ಹುಡುಗರು ಇವರನ್ನು ದಿಟ್ಟಿಸಿ ನೋಡಿದರು. ಯಾರಿವನು ? ಜೊತೆಗೊಬ್ಬ ಸೇವಕನಿಲ್ಲದೇ ತನ್ನ ಹೊರೆಯನ್ನು ತಾನೇ ಹೊತ್ತು ಬರುತ್ತಿರುವ ಹಳ್ಳಿಗ . ಅವರು ಒಬ್ಬೊಬ್ಬರೂ ಎಂಟು ಹತ್ತು ಸಾವಿರ ಎಕರೆ ಜಮೀನಿನ ಒಡೆಯರ, ದೊಡ್ಡ ನಗರಗಳಲ್ಲಿರುವ ದೊಡ್ಡ ಕೈಗಾರಿಕೆಗಳ ಒಡೆಯರ ಮಕ್ಕಳು. ಅಂದಿನ ಪಾಳೆಯಗಾರೀ ಸಮಾಜದಲ್ಲಿ ಈ ಕೀಳ್ಗಳೆಯುವ ನೋಟ ಸಹಜ ತಾನೆ.

ಆ ಶಾಲೆಯ ಕಾವಲುಗಾರನಿಗೂ ಅದೇ ಪ್ರಶ್ನೆ. ಅವನು ಮಾವೋರನ್ನು ಒಳಬಿಡಲು ನಿರಾಕರಿಸಿದ. ಅವನ ಜೊತೆ ಮಾವೋ ವಾಗ್ವಾದಕ್ಕೆ ಇಳಿಯಬೇಕಾಯಿತು. ಆಗ ಶಾಲೆಯ ಮುಖ್ಯೋಪಾಧ್ಯಾಯರು ಹೊರ ಬಂದರು. ಮಾವೋರವರನ್ನು ಒಳಗೆ ಕರೆದು ಅವರ ಬರವಿನ ಕಾರಣವನ್ನು ಕೇಳಿದರು. ಈ ಶಾಲೆ ನಿಮ್ಮಂತಹವರಿಗಲ್ಲ ಎಂದು ಮುಖಕ್ಕೆ ಹೊಡೆದಂತೆ ಹೇಳಿ ಕಳುಹಿಸಲು ಅವರು ಹೊರಟ ಸಮಯದಲ್ಲಿಯೇ ಅಲ್ಲಿಗೆ ಆ ಶಾಲೆಯ ಒಬ್ಬ ಶಿಕ್ಷಕರ ಆಗಮನವಾಯಿತು. ಅವರು ಮುಖ್ಯೋಪಾಧ್ಯಾಯರ ಮುಂದೆ ಒಂದು ವಾದವನ್ನಿಟ್ಟರು. ' ಚೀನಾದ ಚರಿತ್ರೆಯಲ್ಲಿ ಹೀಗೆ ಶಾಲೆಗಳ ಬಾಗಿಲಿಗೆ ಬಂದು ಪ್ರವೇಶ ಕೇಳಿದ ಅನೇಕ ಬಡ ಮಕ್ಕಳೇ ಅಲ್ಲವೇ ಮುಂದೆ ಆ ಶಾಲೆಗೆ ಹೆಸರು ತಂದ ವಿಖ್ಯಾತ ವಿದ್ವಾಂಸರಾಗಿ ಬೆಳಗಿದ್ದು.' ಜೊತೆಗೆ ಈ ವಿದ್ಯಾರ್ಥಿ ಗೆ ವಿಶೇಷ ಪಾಠಗಳನ್ನು ಹೇಳಿಕೊಟ್ಟು ಇತರ ವಿದ್ಯಾರ್ಥಿ ಗಳ ಸಮಕ್ಕೆ ತರುವ ಭರವಸೆಯನ್ನೂ ಕೊಟ್ಟರು ಹೀಗೆ ಮಾವೋ ಈ ಅತಿ ಶ್ರೀಮಂತರ ಶಾಲೆಗೆ ಪ್ರವೇಶ ದೊರಕಿಸಿಕೊಂಡರು.

ಶ್ರೀಮಂತರ ಶಾಲೆಯಲ್ಲಿ ಬಡ ವಿದ್ಯಾರ್ಥಿ

ಕೇವಲ ಒಂದೆರಡು ಜೊತೆ ಹತ್ತಿಯ ಬಟ್ಟೆ ತೊಡುವ ತನ್ನ ಪುಸ್ತಕಗಳನ್ನು ತಾನೇ ಹೊರುವ ಈ ಬಡ ವಿದ್ಯಾರ್ಥಿ ತನ್ನ ಸಹಪಾಠಿಗಳ ತಿರಸ್ಕಾರಕ್ಕೆ ತುತ್ತಾಗಿದ್ದು,ಅವರ ವ್ಯಂಗ್ಯ,ತಮಾಷೆಗಳಿಗೆ ಗುರಿಯಾದದ್ದು ಒಂದು ದೊಡ್ಡ ಕಥೆ. ಜೊತೆಗೆ ಮಾವೋ ಆ ಶಾಲೆಗೆ ಸೇರುವ ವೇಳೆಗೆ ಅವರಿಗೆ ಆ ಶಾಲೆಯ ವಯಸ್ಸು ಮೀರಿತ್ತು. ಅವರು ಎಲ್ಲರಿಗಿಂತ ಮೂರು ವರ್ಷ ದೊಡ್ಡವರು. ಉಳಿದವರಿಗಿಂತ ಬಹಳ ಎತ್ತರ ಕೂಡ.


ಆದರೆ ವಿದ್ಯೆಯಲ್ಲಿ ಉಳಿದೆಲ್ಲರನ್ನೂ ಮೀರಿಸಿದರು. ಶಿಕ್ಷಕರಿಗೆ ಅಚ್ಚು ಮೆಚ್ಚಾದರು. ಅವರಿಗೆ ಈಗಾಗಲೇ ದೊರೆತಿದ್ದ ಶಾಸ್ತ್ರ ಗ್ರಂಥಗಳ ಓದು ಅವರ ಪ್ರಬಂಧಗಳನ್ನು ಮಾಸ್ತರರು ಮೆಚ್ಚಿಕೊಳ್ಳುವಂತೆ ಮಾಡಿತು.

ಈ ಶಾಲೆಯಲ್ಲಿ ಅವರು ವಿಜ್ಞಾನವನ್ನು, ಇತರ ಹೊಸ ವಿಷಯಗಳನ್ನು ಕಲಿತರು. ಅನೇಕ ಹೊಸ ಪುಸ್ತಕಗಳನ್ನು ಓದಿದರು. ಅಂದು ಚೀನಾದಲ್ಲಿ ಸುಧಾರಣೆಯ ಪ್ರತಿಪಾದಕರ ಎರಡು ಪುಸ್ತಕಗಳು ಅವರಿಗೆ ಬಹಳ ಇಷ್ಟವಾದವು. ಅದರಲ್ಲಿ "ಹೊಸ ಜನರ ಚಿಂತನೆ" ಎಂಬುದೂ ಒಂದು. ಈ ಪುಸ್ತಕಗಳನ್ನು ಅವರು ಎಷ್ಟು ಬಾರಿ ಓದಿದರೆಂದರೆ ಅವರಿಗೆ ಈ ಪುಸ್ತಕಗಳು ಬಾಯಿ ಪಾಠವಾಗಿ ಬಿಟ್ಟಿತ್ತು. ಚೀನಾದ ಚರಿತ್ರೆಯ ಬಗ್ಗೆ, ಅದರ ಸಾಮ್ರಾಟರ ಬಗ್ಗೆ ಕೂಡ ಅನೇಕ ಪುಸ್ತಕಗಳನ್ನು ಅಧ್ಯಯನ ಮಾಡಿದರು. ವಿದೇಶಗಳ ಚರಿತ್ರೆ ,ಅಮೇರಿಕದ ಸ್ವಾತಂತ್ರ್ಯದ ಹೋರಾಟ, ಲಿಂಕನ್, ನೆಪೋಲಿಯನ್, ವೆಲ್ಲಿಂಗ್ ಟನ್, ರಷ್ಯಾದ ಚಕ್ರವರ್ತಿ ಪೀಟರ್ ದಿ ಗ್ರೇಟ್, ರೂಸೋ ಮೊದಲಾದವರ ವಿಚಾರಗಳ ಬಗ್ಗೆ ಅಧ್ಯಯನ ಮಾಡಿದರು.

ಹೀಗೆ ಹದಿನಾರು ವರ್ಷದವರಾಗಿ ಈ ಶಾಲೆಗೆ ಸೇರಿದ್ದ ಅವರು ಐದು ವರ್ಷಗಳ ಕಾಲ ಅಲ್ಲಿ ಅಭ್ಯಾಸ ಮಾಡಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಿಜೆಪಿ ದರ್ಬಾರ್



ಆರ್. ರಾಮಕೃಷ್ಣ

ರೈತ ಕೂಲಿಕಾರರು ಹಳ್ಳಿಯಿಂದ ಗುಳೆ ಹೊರಟ ಮೇಲೆ ಹಳ್ಳಿಗಾಡಿಗೆ ಗುಳೆ ಎದ್ದಿರುವ ಬಿಜೆಪಿ ನಾಯಕರು

...ಟಕ ರಾಜ್ಯದ ಲಕ್ಷಾಂತರ ರೈತರು ...ಕಾರರು, ಬಡಜನರ ಬದುಕು ಭೀಕರ ... ಬೆಂಕಿಯಲ್ಲಿ ಸುಟ್ಟು ಹೋಗಿದೆ. ದಕ್ಷಿಣದ ...ಡ್ಯ, ಮೈಸೂರು, ಚಾಮರಾಜನಗರ.... ...ರಾಬಾದ್ ಕರ್ನಾಟಕದ ಕೊಪ್ಪಳ ...ಚೂರು, ಉತ್ತರ ಭಾಗದ ಧಾರವಾಡ ...ೇರಿ ಗದಗ್ ಎಂಬ ಭೇಧವೇನಿಲ್ಲ. ಎಲ್ಲ ...ೂ ಜನರ ಪಾಡು ಒಂದೇ. ಈ ಎಷ್ಟೋ ...ಳ ಕಂಗೆಟ್ಟ ಜನರು ಬದುಕುವ ದಾರಿ ...ದೇ ಪರಿತಪಿಸುತ್ತಿದ್ದಾರೆ. ಅವರಲ್ಲಿ ಎಷ್ಟೋ ...ು ಗಂಜಿಯ ಆಸರೆ ಹುಡುಕುತ್ತಾ ಹಳ್ಳಿ...ಗಳನ್ನು ಬಿಟ್ಟು ಗುಳೆ ಎದ್ದು ಹೋಗಿದ್ದಾರೆ. ...ನ್ಯೆ ರಾಜ್ಯದ ಜನರು ಆತಂಕದಿಂದ ...ಗಳೂರು ಬಿಟ್ಟು ಗುಳೆ ಹೊರಟಾಗ ...ರಡಬೇಡಿರೆಂದು ಮನವಿ ಮಾಡಲು ...ದ ಗೃಹ ಮಂತ್ರಿ, ಬಿಜೆಪಿ ನಾಯಕರು, ... ಪರಿವಾರದ ದೊಣ್ಣೆ ನಾಯಕರು ಎಲ್ಲರೂ ...ರಿದ್ದು ಪರಿಪರಿಯಾಗಿ ...ತಪಿಸಿದರು. ಏಕೆಂದರೆ ಆ ...ಯದಲ್ಲಿ 'ಜನಾಂಗ ದ್ವೇಷ'ವೆಂಬ ...ದ ಕಾರ್ಯಸೂಚಿಯನ್ನು ಜನರ ...ವೆ ಹರಡಲು ಹುಲುಸಾದ ...ಶವಿತ್ತು.

...ಜ್ಯದ ಜನರು ಪಟ್ಟಣ ನಗರಗಳಿಗೆ ... ಹೊರಟು ನಿಂತಿರುವಾಗ, ಇತ್ತ ರಾಜ್ಯ ...ಿ ನಾಯಕತ್ವದ ಬಣಗಳು ಹಳ್ಳಿಗಳ ... ಗುಂಪು, ಗುಂಪುಗಳಾಗಿ ಗುಳೆ ... ನಿಂತಿವೆ. ಚುನಾವಣೆ ಎಂಬ ...ಳೆ ಅಕಾಲಿಕವಾಗಿ ದಿಡೀರೆಂದು ...ುಕೊಂಡು ಬಿಡಬಹುದು. ...ಾದ ಕಾಲಕ್ಕೆ ಬಂದರೂ ಅದೂ ...ವಾಗುತ್ತಿದೆಯಲ್ಲ.

...ಜ್ಯ ಮುಖಂಡರನ್ನು ಬಿಡಿ. ಬರ ಪೀಡಿತ ...ಗಳ ಚುನಾಯಿತ ಪ್ರತಿನಿಧಿಗಳು, ಅದರಲ್ಲೂ ...ಳಿತ ಪಕ್ಷದವಾಗಿರುವವರು ಏನು ...ುತ್ತಿದ್ದಾರೆ...?? ಅವರ ಹೊಣೆಗೇಡಿತನಕ್ಕೆ ...ಯೇ ಇಲ್ಲವಾಗಿದೆ.

...ಕ ಸಚಿವರಿಂದ ವಿದೇಶಕ್ಕೆ ಗುಳೆ

...ಜ್ಯದಲ್ಲಿ ಭೀಕರ ಬರವಿದೆ, ವಿದೇಶ ...ಸಕ್ಕೆ ಹೋಗಬೇಡಿ ಎಂದು ಬಿಜೆಪಿ ರಾಜ್ಯದ ...ಪ್ರಂ ಕಮಾಂಡ್ ಡಾ. ಬಿಎಸ್. ...ಯೂರಪ್ಪನವರೇ 'ಗುಟುರು' ಹಾಕಿದರೂ ...ಶ ಪ್ರವಾಸಕ್ಕೆ ಹೊರಟು ನಿಂತವರು 'ಕ್ಯಾರೇ' ...ಲ್ಲ. ಕಳೆದ ವಾರ ವಿದೇಶ ಪ್ರವಾಸ ...ಗಿದೆ ಎಂದಿದ್ದ ಸುದ್ದಿ ಮತ್ತೆ ಈಗ ವಿದೇಶ ...ಸದ ದಿಬ್ಬಣ ಎದ್ದು ನಿಂತಿದೆ ಎಂದಾಗಿದೆ. ...ಡಿಯೂರಪ್ಪ ಬಣದ ಮುಂಚೂಣಿ ...ಯಕರೇ ವಿದೇಶ ಪ್ರವಾಸದ ಓಲಗ ...ದುತ್ತಾ ಓಲಾಡುತ್ತಾ ಉಳಿದವರನ್ನು ಹುರಿದುಂಬಿಸಿ ಹೊರಡಿಸುತ್ತಿದ್ದಾರೆ. ಇದು ಒಂದು ರೀತಿಯ ಗುಳೆ. ವಿದೇಶಕ್ಕೆ ಗುಳೆ. ಬಡವರ ಬದುಕು 'ಉತ್ತಮ ಪಡಿಸಲು' ಅಧ್ಯಯನ ಮಾಡಲಿಕ್ಕಾಗಿ ವಿದೇಶಕ್ಕೆ ಗುಳೆ.

ಕಳೆದ ವಾರದ ಬಿಜೆಪಿ ಸಚಿವರಾದ ಸನ್ಮಾನ್ಯ ಉಮೇಶ ಕತ್ತಿಯವರು ಬರ ಬಂದಿದೆ ಎಂದು ಜನ ಮದುವೆಯಾಗುವುದು ನಿಂತಿವೆಯೇ ? ಎಂದು ಕೇಳಿದ ಅಮೋಘ ಸಮಾಚಾರವನ್ನು ಇದೇ ಅಂಕಣದಲ್ಲಿ ತಾವು ಓದಿದ್ದೀರಿ. ಈ ಸಂಬಂಧ ನಾವು ಅಪೂರ್ಣ ವರದಿಗಾಗಿ ಕ್ಷಮೆ ಯಾಚಿಸ ಬೇಕಾಗಿದೆ. ಏಕೆಂದರೆ ಸನ್ಮಾನ್ಯ ಸಚಿವರು ಬರವಿದ್ದರೂ ರಾಜ್ಯದಲ್ಲಿ ಮದುವೆಗಳಾಗುತ್ತಿವೆ ಎಂದಿದ್ದಷ್ಟೇ ಅಲ್ಲದೆ ಬರವಿದ್ದರೂ ಮಕ್ಕಳೂ ಆಗುತ್ತಿವೆ... ಎಂದು ಹೇಳಿದ್ದರಂತೆ. ಆಹಾ ! ಏನು ಗ್ನಾನ. ಏನು ಸಂಶೋಧನೆ !! ಏನು ಸಂಸ್ಕಾರ !!!

ನಿಜ, ಬರಗಾಲದಲ್ಲಿಯೂ ಮಕ್ಕಳಾಗುತ್ತವೆ. ಸದ್ಯಕ್ಕೆ ನಮ್ಮ ಶಾಸಕರು, ಅಧಿಕಾರಿಗಳು ವಿದೇಶ ಪ್ರವಾಸ ಕಾಲದಲ್ಲಿರುವಾಗ ತಮಗೆ ವೈವಾಹಿಕ ಸಂಬಂಧ ಅಥವಾ ಕೌಟುಂಬಿಕ ಬಾಂಧವ್ಯ-ಬದ್ಧತೆ ಇಲ್ಲದ ಯಾರ್ಯಾರಿಗೋ 'ಮಕ್ಕಳ ಭಾಗ್ಯ' ಕರುಣಿಸದಿರಲಿ ಎಂದು ಆ 'ಭಗವಂತ'ನಲ್ಲಿ ನಾವು ಬೇಡಿಕೊಳ್ಳಬೇಕಿದೆ. ಇರಲಿ. ಈಗ ರಾಜ್ಯದಲ್ಲಿ ನೂತನ ಸಾರಥಿ ಜಗದೀಶ್ ಶೆಟ್ಟರ್ ನೇತೃತ್ವದ ಬಿಜೆಪಿ ದರ್ಬಾರ್‌ನಲ್ಲಿ ರಾಜ್ಯದ ರೈತರ ಜೀವನ, ಜನರ ಜೀವನ ಹೇಗಿದೆಯೋ ಸ್ವಲ್ಪ ನೋಡೋಣ. ಈ ಕೆಲವು ದೃಶ್ಯಾವಳಿಗಳನ್ನು ನೋಡಿ 'ಬಿಜೆಪಿ ದರ್ಬಾರಿ'ನ ಸೊಗಸನ್ನು ಸವಿಯೋಣ.



ದೃಶ್ಯ-1

ನೀರಿಲ್ಲ...ಮೇವಿಲ್ಲ...,

ರಾಜ್ಯದ ಬರ ಪರಿಸ್ಥಿತಿಯ ಅಧ್ಯಯನಕ್ಕೆಂದು ಮೊನ್ನೆ ಕೇಂದ್ರ ತಂಡ ಚಾಮರಾಜನಗರದ ಬದನಗುಪ್ಪೆಗೆ ಬಂದಿದೆ. ಊರಿನ ರೈತ ಮಹದೇವ ಸ್ವಾಮಿ ತಂಡದ ಮುಂದೆ ತಮ್ಮ ನೋವು ತೋಡಿಕೊಳ್ಳುತ್ತಾರೆ. ಕುಡಿಯುವ ನೀರಿಲ್ಲ...ದನಕರುಗಳಿಗೆ ಮೇವಿಲ್ಲ...ಹೀಗೆ. ಸುಂಕದವರ ಮುಂದೆ ಸುಖ ದುಃಖ ಹೇಳಿದಂತೆ. ಏನು ಫಲ ? ಪಾಪ, ಅಧಿಕಾರಿಗಳಾದರೂ ಏನು ಮಾಡಿಯಾರು..!! ನಿಮ್ಮ ರಾಜ್ಯದ ಮುಖ್ಯಂತ್ರಿಯ ಕಿವಿ ಹಿಂಡಿ ಎಂದು ಅವರಿಗೆ ಹೇಳಲು ಸಾಧ್ಯವೇ ? ಈಗಾಗಲೇ ಇಂತಹ ಸರ್ವೇಗಳು ಹಲವು ಆಗಿ ಹೋಗಿವೆಯಲ್ಲ ಇನ್ನೂ ಎಷ್ಟು ಸರ್ವೇ ಅಂತ ? ಪ್ರಧಾನಿಗಳಿಗೆ ಕೇಳಲು ಸಾಧ್ಯವೇ ?

ದೃಶ್ಯ-2

ಅಂದು..ಕೂಲಿಕಾರರನು ಅಟ್ಟಿಕೊಂಡು ಬಂದು

ಆ ಊರಿನ ಹೆಸರು ಹೆಗ್ಗೋತಾರ ಅಂತ. ಕೇಂದ್ರ ತಂಡ ಅಲ್ಲಿಗೆ ಬಂದಾಗ ಊರಿನ ಕೆರೆಯ ಹೂಳು ತೆಗೆಯುವ ಕೆಲಸ ನಡೆಯುತ್ತಿದೆ. ಕೂಲಿಕಾರರು ಕೆಲಸ ಮಾಡುತ್ತಿದ್ದಾರೆ. ಆಹಾ !! ಬರದ ನಾಡಲ್ಲಿ ಕೂಲಿಕಾರರಿಗೆ ಕೂಲಿ ಕೆಲಸವಾದರೂ ಸಿಕ್ಕಿದೆ. ಸಂತಸವಾಯಿತೆ. ಹೌದು ಸಂತಸವಾಗಿಯೆ ಅಗುತ್ತದೆ. ನಿನ್ನೆಯವರೆಗೂ ದೈತ್ಯ ಯಂತ್ರಗಳ ಮೂಲಕ ಕೆರೆ ಹೂಳೆತ್ತುವ ಕೆಲಸ ಮಾಡಿಸಿ, ಇವತ್ತು ಅಧ್ಯಯನ ತಂಡ ಬರುತ್ತದೆಂದು ತಿಳಿದು ಕೂಲಿಕಾರರನ್ನು ಅಟ್ಟಿಕೊಂಡು ಬಂದು ಕೆಲಸ ಮಾಡಿಸುತ್ತಿರುವ ಕಂತ್ರಾಟದಾರನೆಂಬ ಗುತ್ತಿಗೆದಾರನಿಗೆ. ಅಲ್ಲವೇ ?

ದೃಶ್ಯ -3

ರಸ ಗೊಬ್ಬರ:

ಅದೇ ಕಾಳಸಂತೆಕೋರರ ಮೆರೆದಾಟ

ಕೆಲವು ಜಿಲ್ಲೆಗಳಲ್ಲಿ ತಡವಾಗಿ ಮಳೆ ಬಂದಿದೆ. ಮುಂಗಾರು ಬೆಳೆಯಂತೂ ಹೋಯಿತು. ಹಿಂಗಾರು ಬೆಳೆಗಾದರೂ ರಸ ಗೊಬ್ಬರ ಬೇಕಲ್ಲ. ರೈತರು ಗೊಬ್ಬರದಂಗಡಿಗಳ ಮುಂದೆ ಬಂದು ನಿಲ್ಲುತ್ತಾರೆ. ಈ ಕರುನಾಡೆಂಬ ನಾಡು ರಸಗೊಬ್ಬರದ ವಿಷಯದಲ್ಲಿ ಕಾಳಸಂತೆಕೋರರ ಸ್ವರ್ಗಸೀಮೆ. ಈ ಬಿಜೆಪಿ ಸರ್ಕಾರದ 'ರೈತರ ಕಲ್ಯಾಣ'ದ ಯೋಜನೆಗಳ ಉದ್ಘಾಟನೆಯಾಗಿದ್ದೇ ಹಾವೇರಿ ಗೋಲಿಬಾರ್‌ನಲ್ಲಿ ಇಬ್ಬರು ರೈತರು ಹೆಣ ಕೆಡವುವ ಮೂಲಕ ಅಲ್ಲವೇ ? ಈ ಪರಂಪರೆಗೆ ಯಾಕೆ ಚ್ಯುತಿ ಬರಬೇಕು. ಪರಂಪರೆ ಮುಂದುವರಿದಿದೆ. ರಸ ಗೊಬ್ಬರದ ಬೆಲೆಗಳು ಆಕಾಶ ಮುಖಿಯಾಗಿವೆ. ರಾಯಚೂರು ಜಿಲ್ಲೆಯಲ್ಲಿ ಯೂರಿಯಾ ಗೊಬ್ಬರದ ಬೆಲೆ 50 ಕೆ.ಜಿ. ಚೀಲಕ್ಕೆ 282 ರೂಪಾಯಿ ಇರಬೇಕಾದದ್ದು 350-400 ಆಗಿದೆ. ಡಿಎಪಿ ಗೊಬ್ಬರ 1050 ರೂ. ಇರಬೇಕಾದದ್ದು 1250 ರವರೆಗೆ ಓಡುತ್ತಿದೆ. ಈ ಕಡೆ ಉತ್ತರ ಕನ್ನಡದಲ್ಲಿ ಕಾಂಪ್ಲೆಕ್ಸ್ ಗೊಬ್ಬರ 750 ರೂಪಾಯಿ ಇರಬೇಕಾದದ್ದು 1,170 ರೂಪಾಯಿ ಆಗಿದೆ ಅಂತ ವರದಿ ಇದೆ. ಹೀಗೆ ಬೇರೆ ಬೇರೆ ಗೊಬ್ಬರದ ಕತೆ, ಬೇರೆ ಬೇರೆ ಜಿಲ್ಲೆಗಳಲ್ಲಿ. ಮೇಲಿನವು ಕೆಲವು ಉದಾಹರಣೆಗಳಷ್ಟೆ.

ದೃಶ್ಯ-4

ಗೊಬ್ಬರ ಕೊಡಲಿಲ್ಲ...

ಇನ್ನೊಂದು ಹೆಣ ಕೆಡವಿದರು

ಅಲ್ಲಿ ಗೊಬ್ಬರಕ್ಕಾಗಿ ಜನ ಕಾದಿದ್ದಾರೆ. ಏಕೆಂದರೆ ಗೊಬ್ಬರಕ್ಕಾಗಿ ಎಲ್ಲೆಡೆ ಹಾಹಾಕಾರವಿದೆ. ನಿಜ ಇಲ್ಲಿ ಜನ ಕಾದಿರುವುದು ರಸ ಗೊಬ್ಬರಕ್ಕಾಗಿ ಅಲ್ಲ. ಸಾವಯವ ಗೊಬ್ಬರಕ್ಕಾಗಿ. ಗೊಬ್ಬರದ ವಾಹನ ಬಂತು. ಆದರೆ ವಿತರಣೆಗೆ ಸರಿಯಾದ ವ್ಯವಸ್ಥೆ ಇಲ್ಲ. ಸಂಬಂಧಿಸಿದ ಅಧಿಕಾರಿಗಳು ಗೊಬ್ಬರದೊಂದಿಗೆ ಬರಬೇಕಿತ್ತು, ಬಂದಿಲ್ಲ. ಸರ್ಕಾರ, ಅಧಿಕಾರಿಗಳು ಇತಿಹಾಸದಿಂದ ಯಾವ ಪಾಠವನ್ನೂ ಕಲಿತಿಲ್ಲ. ರೈತರ ನಡುವೆ ಪೈಪೋಟಿ.. ತಳ್ಳಾಟ, ಕಾಲ್ತುಳಿತ... 41 ವರ್ಷದ ರೈತ ಕೃಷ್ಣೇಗೌಡರ ಪ್ರಾಣ ಪಕ್ಷಿ ಈ ಗೊಬ್ಬರದ ಈ ಗದ್ದಲದಲ್ಲಿ ಹಾರಿಯೇ ಹೋಯಿತು. ಹೆಗ್ಗಡದೇವನ ಕೋಟೆ ತಾಲ್ಲೂಕಿನ ಹಂಪಾಪುರ ಹೋಬಳಿಯ ಹಳ್ಳದಮನುಗನಹಳ್ಳಿಯ ಅಮಯಾಯಕ ಗೊಬ್ಬರದ ಮೂಟೆ ಬಿದ್ದು ಹೆಣವಾಗಿ ಹೋದರು. ....ಸಿದ್ದಪ್ಪ ಚೂರಿಯವರ ಸಾಲಿಗೆ ಸೇರಿ ಹೋದರು. ಬಿಜೆಪಿ ಸಚಿವರ ದಂಡು, ಶಾಸಕರ ಹಿಂಡು ಕಲೆತು ಕೃಷ್ಣೇ ಗೌಡ ರೈತನೇ ಅಲ್ಲ... ಆತ ವ್ಯವಸಾಯ ಮಾಡುವವನೇ ಅಲ್ಲ ಎಂದು ಯಾಕೆ ಇನ್ನೂ ಘೋಷಣೆ ಮಾಡಿಲ್ಲ ಅಂತ ಮಾತ್ರ ನಮಗೆ ನಿಜವಾಗಿಯೂ ಗೊತ್ತಿಲ್ಲ. ಅದಕ್ಕಾಗಿ ಕ್ಷಮೆ ಇರಲಿ.

ದೃಶ್ಯ -6

'ಅಂತ್ಯ'ವಿಲ್ಲದ ಅನ್ನದಾತರ ಅಂತಿಮ ಯಾತ್ರೆಗಳು


ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಇಪ್ಪಾಡಿ ಗ್ರಾಮದ ರೈತ, ಅದೂ ಯುವ ರೈತ- ಕೇವಲ 38 ವರ್ಷದ ರವಿ ಸಹಕಾರ ಬ್ಯಾಂಕಿನ 75.000 ರೂ. ಹಾಗೂ ಖಾಸಗಿ ಲೇವಾದೇವಿಗಾರರಿಂದ ಪಡೆದ 6 ಲಕ್ಷ ಸಾಲವನ್ನು ತೀರಿಸಲಾಗದೇ ತಮ್ಮ ಅಮೂಲ್ಯವಾದ ಪ್ರಾಣವನ್ನು ಕಳೆದುಕೊಂಡು ಹೆಣವಾಗಿ ಹೋದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನಕಪುರ

ಪುಟ 13 ಕ್ಕೆ

ಡಿ.ವೈ.ಎಫ್.ಐ ವಿಚಾರ ಸಂಕಿರಣ

ಕೊಡಗು ಸಿದ್ದಾಪುರ ಜುಲೈ 13 ಸೆಪ್ಟಂಬರ್ 11 ರಿಂದ 15ರ ವರಗೆ 9ನೇ ಅಖಿಲಾ ಭಾರತ ಸಮ್ಮೇಳನದ ಅಂಗವಾಗಿ ಡಿ.ವೈ.ಎಫ್.ಐ ಸಂಘಟನೆ ನೇಲ್ಯುಹುದಿಕೇರಿ ಗ್ರಾಮ ಪಂಚಾಯಿತಿಯಲ್ಲಿ ಇಂದು ವಿಚಾರ ಸಂಕಿರಣ ಏರ್ಪಾಡಿಸಲಾಗಿತ್ತು ಬಾಲ್ಯ ವಿವಾಹ ಮತ್ತು ವರದಕ್ಷಿಣೆ ನಿರ್ಮೂಲನೆ ಕುರಿತು ಯುವ ಜನರ ಪಾತ್ರ ಕಾರ್ಯಕ್ರಮದಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್ ಲಕ್ಷ್ಮೀ ಮಾತಾನಾಡಿ ಬಾಲ್ಯ ವಿವಾಹ ಪದ್ಧತಿಯನ್ನು ನಿರ್ಮೂಲನೆ ಗೊಳಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಶೇ 45 ರಷ್ಟು ಬಾಲ್ಯ ವಿವಾಹ ನಡೆಯುತ್ತಿರುವುದಾಗಿ ಸರ್ಕಾರ ರಚನೆ ಮಾಡಿದ ಕೋರ್ ಕಮೀಟಿ ವರದಿ ನೀಡಿದೆ ಅದರೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ರಾಯಚೂರು ಬಳ್ಳಾರಿ ಕೊಪ್ಪಳ ಗುಲ್ಬರ್ಗ





ಕಡೆಗಳಲ್ಲಿ ಇಂದಿಗೂ ನಡೆಯುತ್ತಿದೆ 2006 ರಿಂದ 2012ರ ವರೆಗೆ ಭಾಗ್ಯಲಕ್ಷ್ಮೀ ಯೋಜನೆ ಇನ್ನೂ ಜನರಿಗೆ ತಲುಪಿಲ್ಲ ಎಂದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ ಮುಖಂಡ ಪಿ.ಆರ್. ಭರತ್ ವಹಿಸಿದ್ದರು ಈ ಸಂದರ್ಭ ಗ್ರಾಮ ಪಂಚಾಯಿತಿ ಅದ್ಯಕ್ಷೆ ಸುಹಾದ ಅಶ್ರಪ್ ಠಾಣಾಧಿಕಾರಿ ರಾಮರೆಡ್ಡಿ ವೈದ್ಯಾಧಿಕಾ[illegible] ದಿವಾಕರ್ ಮಹಿಳಾ ಸಂಘಟನೆಯ[illegible] ಜೋಯ್ಸಿಮೆನೆಜಿಸ್ ಮತ್ತಿತರರು ಉಪಸ್ಥಿತರಿದ್ದರು.

ಬಳಲುತ್ತಿರುವ ದಲಿತ ಯುವಜನ

ಪುಟ 5 ಕ್ಕೆ

ಸಾಮಾಜಿಕವಾಗಿ ಸಂಕಷ್ಟವನ್ನು ಅನುಭವಿಸುವಂತಾಗಿದೆ. ಹೀಗಾಗಿ ಯುವಜರಲ್ಲಿ ಇರುವ ವಿಶಿಷ್ಟ ಮನಸ್ಥಿತಿ ಮತ್ತು ಮಾನಸಿಕ ಸ್ಥೈರ್ಯವನ್ನು ಕುಂದಿಸುವಂತಹ ಪರಿಸ್ಥಿತಿಯನ್ನು ತಂದೊಡ್ಡಲಾಗಿದೆ. ಬದಲಾಗಿ ಇವರ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಅವರನ್ನು ಸಂಘಟಿಸುವ ಪ್ರಜಾಸತಾತ್ಮಕ ಶಕ್ತಿಗಳು ಇವರ ಮಧ್ಯ ಬಹಳ ವಿರಳವೆಂದೇ ಹೇಳಬೇಕಿದೆ. ಇದರಿಂದಾಗಿ ಸ್ವಹಿತಾಸಕ್ತಿಯ ಆಧಾರದಲ್ಲಿ ಕೆಲವು ಸಂಘಟನೆಗಳು ವಕ್ರ ವಕ್ರವಾಗಿ ಬೆಳೆಯುತ್ತಿವೆ. ಇಂಥವುಗಳನ್ನು ಪುಡಿಗಾಸು ನೀಡಿ ವ್ಯವಸ್ಥೆ ಪೋಷಿಸುತ್ತಿದೆ. ಸಮಾಜದಲ್ಲಿ ವಿದ್ಯಾವಂತರೆನಿಸಿ ಕೊಂಡ, ಬುದ್ದಿವಂತರೆನಿಸಿ ಕೊಂಡ ವಿಭಾಗದ ಜನರು ಕೂಡ ಈ ಸಮಸ್ಯೆಯ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸದೇ ವಿಚಾರವನ್ನು ಸರಳೀಕರಿಸಿ ಏಕಮುಖವಾಗಿ ದಲಿತರನ್ನು ದಲಿತ ಯುವಜನರನ್ನು ನಿಂದಿಸುವುದನ್ನು ನೋಡುತ್ತೇವೆ. ದಲಿತ ಯುವಜನರ ಕೆಲವು ತಪ್ಪುಗಳನ್ನೇ ನೆಪ ಮಾಡಿಕೊಂಡು ಇವರು ವಕ್ರವಾಗಿ ಬೆಳೆಯುತ್ತಿದ್ದಾರೆಂದು ಮೂದಲಿಸಿಕೊಂಡು ಅವರ ನೆರವಿಗೆ ಬರದೆ ಅವರನ್ನು ಹಾಗೆ ಬೆಳೆಯಲು ಬಿಡುವ ಪರಿಪಾಠವಿದೆ. ಒಟ್ಟಾರೆ ದಲಿತ ಸಮುದಾಯ ಎಲ್ಲಾ ವಿಧದಿಂದಲೂ ಬಲಿಪಶುವಾಗುತ್ತಿದೆ. ಇಂಥ ಪರಿಸ್ಥಿತಿಯಿಂದ ಹೊರಬರಬೇಕಾದರೆ ವಿಶಾಲವಾದ ಪ್ರಜಾಸತ್ತಾತ್ಮಕ ವೇದಿಕೆಯಡಿ ಯುವ ದಲಿತ ಮತ್ತು ದಲಿತೇತರ ಯುವಜನತೆ ಒಂದಾಗಿ ಎಲ್ಲಾರೂ ಎದುರಿಸುವ ಸಾಮಾನ್ಯ ಸಂಕಷ್ಟಗಳ ವಿರುದ್ಧ ಹೋರಾಡುವ ಜೊತೆ ಜೊತೆಗೆ ದಲಿತರ ಮೇಲಿನ ಅಮಾನವೀಯ ಕ್ರೌರ್ಯ ದಲಿತರು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧವೂ ಜನಾಂದೋಲನ ರೂಪಿಸುವ ಅಗತ್ಯವನ್ನು ಪ್ರಜ್ಞಾವಂತರೆಲ್ಲರೂ ಮನಗಾಣಬೇಕಿದೆ.

ಬಿಜೆಪಿ ದರ್ಬಾರ್

ಪುಟ 11ರಿಂದ

ತಾಲ್ಲೂಕಿನ ಸಾತನೂರು ಸಮೀಪದ ಸೂರನಹಳ್ಳಿಯ 55 ವರ್ಷದ ರೈತ ಸಿದ್ದೇಗೌಡ ಕೃಷಿ ಬಿಕ್ಕಟ್ಟಿನ ಸುಳಿಗೆ ಸಿಲುಕಿ ತಾವೇ ತಮ್ಮ ಜೀವನವನ್ನು ಕೊನೆಗೊಳಿಸಿಕೊಂಡು ಬಿಟ್ಟರು. ಈಗ ಅವರಿಗೆ ಸಾಲ ಬಾಧೆ ಕಾಡಲಾರದು. ಆದರೆ ಬದುಕಿ ಉಳಿದ ಕುಟುಂಬದವರ ಪಾಡು ಏನೆಂದು ಬರಿ ಮಾತುಗಳಲ್ಲಿ ಹೇಳಲಾಗದು.

ದೃಶ್ಯ–7

ದಿನಾಂಕ ಆಗಸ್ಟ್ 29, 2012. ರಾಜ್ಯ ಬಿಜೆಪಿ ಸರ್ಕಾರದ ಒಬ್ಬ ಪ್ರಮುಖ ಮುಖಂಡರು. ಸಚಿವ ಸತೀಶ್ ಜಾರಕಿಹೊಳಿ ಘೋಷಿಸುತ್ತಾರೆ " ರಾಜ್ಯ ಸರ್ಕಾರದ ಖಾತೆ ಹಂಚಿಕೆ ಬಗೆಗೆ ನಮಗೆ ಸಮಾಧಾನವಿಲ್ಲ. ಈ ಬಗೆಗೆ ಬಿಜೆಪಿ ಹೈಕಮಾಂಡ್‌ಗೆ ದೂರು ಕೊಟ್ಟರೂ ಪ್ರಯೋಜನವಾಗಿಲ್ಲ. ಮುಂದೆ ಈ ಬಗೆಗೆ ಏನು ಮಾಡಬೇಕೆಂದು ಮುಂದಿನ ಶನಿವಾರ ಸಮಾನ ಮನಸ್ಕರು ಸಭೆ ಸೇರಿ ಚರ್ಚಿಸುತ್ತೇವೆ". ಅಂದರೆ ಕುರ್ಚಿ ಎಳೆದಾಟ ಶುರು ಅಂತ ಅಲ್ಲವೇ ಅರ್ಥ.

ತಮಗೆ ಕೊಟ್ಟ ಭರವಸೆಯನ್ನು ಬಿಜೆಪಿ ರಾಜ್ಯದ ನಾಯಕತ್ವ ಮತ್ತು ಹೈಕಮಾಂಡ್ ಈಡೆರಿಸಿಲ್ಲ ಅಂತ ಪಾಪ ಬಿಜೆಪಿ ಸಚಿವರ ದು:ಖ. ಅಯ್ಯೋ !! ಜನತೆಗೆ ಕೊಟ್ಟ ಭರವಸೆ ಈಡೇರಿಸಿಲ್ಲ ಎಂದು ದು:ಖಿಸುವವನಾರನೂ ಕಾಣೆನೇ ಗುಹೇಶ್ವರ ಈ ಬಿಜೆಪಿ ಸರ್ಕಾರದಲ್ಲಿ.

ಬಾಲಂಗೋಚಿ: ಒಡಿ ಮಗ ಒಡಿ

ಜನತೆಗೆ ಕೊಟ್ಟ ಮಾತು ಈಡೇರಿಸಿದರೂ ಆಯ್ತು. ಈಡೇರಿಸದಿದ್ದರೂ ಆಯ್ತು. ಚುನಾವಣೆಗೆ ಮುಂಚೆ ಕೇಳುವವರು ಯಾರು. ಆದರೆ ವಾಸ್ತು ತಜ್ಞರು ಮತ್ತು ಜ್ಯೋತಿಷಿಗಳಿಗೆ ಕೊಟ್ಟ ಮಾತು ಮಾತ್ರ ಈಡೇರಿಸಲೇಬೇಕು.

ಅಗೋ. ವಿಧಾನಸೌಧದ ಮೂರನೇ ಮಹಡಿಯ ಲ್ಲಿ ಕೊಠಡಿ 304–305ರ ನಡುವಿನ ಗೋಡೆ ಪುಡಿ ಪುಡಿ. ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಗಳಿಂದಲೇ ಸಾಂಗವಾಗಿ ಧ್ವಂಸ ಕಾರ್ಯ ನೆರವೇರಿದೆ. ಅವರೀಗ ಅದಕ್ಕೆ ನಾನು ಹೊಣೆಯಲ್ಲ.. ಅಧಿಕಾರಿಗಳು ಅಂತಿದ್ದಾರೆ. ಅದೆಲ್ಲಾ ಹಾಳಾಗಿ ಹೋಗಲಿ. ಇಂಥಾ 'ದುಷ್ಟ ದರ್ಬಾರ್' ಕರ್ನಾಟಕ ರಾಜ್ಯಕ್ಕೆ ಬಂದು ತಗುಲಿಕೊಳ್ಳಲು ಯಾರು ಹೊಣೆ ? ಸ್ವಲ್ಪ ಯೋಚಿಸೋಣ ಅಲ್ಲವೇ ?

ವಿಕಿಲೀಕ್ಸ್ ಹೀರೋ ಅಸ್ಸಾಂಜ್ ....

ಪುಟ 2 ರಿಂದ

ಜಂಟಿ ಕಾರ್ಯಾಚರಣೆಗಳನ್ನು ಇ–ಮೇಲ್‌ಗ[illegible] ಬಯಲಿಗೆಳೆದಿವೆ. ಅಲ್ಲದೆ ಗೋಲ್ಡ್‌ಮ[illegible] ಸ್ಯಾಕ್ಸ್‌ನಂತಹ ಬಹುರಾಷ್ಟ್ರೀಯ ಕಂಪನಿಗ[illegible] ಲಾಭಗಳಿಸುವ ದಂಧೆಗೆ ಪೂರಕವಾ[illegible] ಮಾಹಿತಿಯನ್ನು ಈ ಕಂಪನಿ ಹೇಗೆ ನೀಡುತ್ತಿ[illegible] ಭೋಪಾಲ್ ವಿಷಾನಿಲ ದುರಂತ[illegible] ಸಂಬಂಧಿಸಿದಂತೆ ಸಂತ್ರಸ್ತರಿಗೆ ಪರಿಹಾ[illegible] ಒದಗಿಸುವ ನಿಟ್ಟಿನಲ್ಲಿ ಹೋರಾಡುತ್ತಿರು[illegible] ಹೋರಾಟಗಾರರ ಮೇಲೆ ನಿಗಾಯಿಡು[illegible] ಆಮೂಲಕ ತನ್ನ ಸೇವೆಗೆ ಹಣ ಪಡೆಯುವುದ[illegible] ಅಮೇರಿಕಾದ ಕಡುವಿರೋಧಿ ವೆನಿಜುವೆಲಾ[illegible] ಅಧ್ಯಕ್ಷ ಹ್ಯೂಗೋ ಚಾವೇಜ್‌ರವರ ಆರೋ[illegible] ಕುರಿತು ರಹಸ್ಯ ಮಾಹಿತಿ ಪಡೆದು ಇಸ್ರೇ[illegible] ಬೇಹುಗಾರಿಕೆ ಸಂಸ್ಥೆಗೆ ರವಾನಿಸುವುದ[illegible] ಇತ್ಯಾದಿಯಂತಹ ಸ್ಟ್ರಾಟ್‌ಫಾರ್ ಕಂಪನಿ[illegible] ಕಾಯಕಗಳನ್ನು ವಿಕಿಲೀಕ್ಸ್ ಪ್ರಕಟಿಸುತ್ತಿ[illegible] ಆದ್ದರಿಂದ ಅಮೇರಿಕಾದ ಆಳುವವರ್ಗ[illegible] ಭಾಗವೇ ಆಗಿರುವ ಬಹುರಾಷ್ಟ್ರೀಯ ಕಂಪನಿ[illegible] ಕೆಂಗಣ್ಣು ಸಹಜವಾಗಿ ವಿಕಿಲೀಕ್ಸ್ ಮೇಲೆ ಬಿದ್ದಿ[illegible] ಈ ಹಿನ್ನೆಲೆಯಲ್ಲಿ ಜೂಲಿಯನ್ ಅಸ್ಸಾಂಜ್‌[illegible] ಒಂದಿಲ್ಲ ಒಂದು ನೆಪವೊಡ್ಡಿ ಬಂಧಿಸುವ ಯ[illegible] ನಡೆಯುತ್ತಲೇ ಸಾಗಿದೆ. ಅದೇ ವೇಳೆ ಕಳೆದ[illegible] ವರ್ಷಗಳಿಂದ ಅಸ್ಸಾಂಜ್ ಕೂಡ ಚಳ್ಳೆಹ[illegible] ತಿನ್ನಿಸುತ್ತಲೇ ಬಂದಿದ್ದಾರೆ. ಅಸ್ಸಾಂಜ್ ಮ[illegible] ವಿಕಿಲೀಕ್ಸ್ ತಂಡಕ್ಕೆ ಬೆಂಬಲವಾಗಿ ತಂತ್ರಜ್ಞ[illegible] ಬುದ್ಧಿಜೀವಿಗಳು, ಎಲ್ಲ ಸ್ವಾತಂತ್ರ್ಯಪ್ರೇಮಿ[illegible] ಜಗತ್ತಿನೆಲ್ಲೆಡೆ ಮುಮದೆ ಬಂದಿದ್ದಾರೆ.

ಕೆಲಸಕ್ಕಿಲ್ಲ ಬರ ; ವಲಸೆ ತಡೆದಿದೆ 'ಖಾತ್ರಿ'

ಬೆಳವಣಿಕಿ ಗ್ರಾಮದಲ್ಲಿ ಸಾವಿರಾರು ಕೂಲಿಕಾರರಿಗೆ ಕೆಲಸ

ಉದ್ಯೋಗ ಖಾತ್ರಿ ಎಂದಾಕ್ಷಣ ಕೂಲಿ ಹಣ ವತಿ ವಿಳಂಬ, ಗುತ್ತಿಗೆದಾರರ ಕೈಚಳಕ, ವ್ಯವಹಾರ, ಅನುದಾನ ದುರ್ಬಳಕೆ, ಹೀಗೆ ಕಷ್ಟು ಆರೋಪಗಳು ಕೇಳಿ ಬರುತ್ತಿರುತ್ತವೆ. ಾತ್ರಿ' ಯೋಜನೆಯ ಅಡಿಯಲ್ಲಿ ಕೆಲಸವೂ ತ್ರಿ ಇಲ್ಲ. ಕೂಲಿಯೂ ಖಾತ್ರಿ ಇಲ್ಲ ಎಂದು ನ ಗುಳೆ ಹೋದ ಪ್ರಸಂಗಗಳೇ ಹೆಚ್ಚು. ವರೆ ಗದಗ ಜಿಲ್ಲೆ , ರೋಣ ತಾಲ್ಲೂಕಿನ ಳವಣಿಕಿ ಗ್ರಾಮ ಪಂಚಾಯತಿ ್ಯಾವುದಕ್ಕೂ ಅವಕಾಶ ಕೊಡದೆ ಎಲ್ಲಾ ಮ ಪಂಚಾಯತಿಗಳಿಗೆ ಮಾದರಿಯಾಗಿದೆ. ರು ಗದಗ ಜಿಲ್ಲೆಯಲ್ಲಿ ಇರುವ ಸಿಪಿಐ(ಎಂ) ತೃತ್ವದ ಏಕೈಕ ಗ್ರಾಮ ಪಂಚಾಯತಿಯಾಗಿದೆ. ಸತತ ಬರಗಾಲದಿಂದ ಕಂಗೆಟ್ಟಿದ್ದ ರೈತರು, ಲಿಕಾರರು ವಲಸೆ ಹೋಗುವುದನ್ನು ೆಯುವ ನಿಟ್ಟಿನಲ್ಲಿ ಬೆಳವಣಿಕಿ ಗ್ರಾಮ ಂಚಾಯತಿ ಉದ್ಯೋಗ ಖಾತ್ರಿ ೋಜನೆಯ ಸದ್ಬಳಿಕೆ ಮೂಲಕ ಅವರ ರವಿಗೆ ಧಾವಿಸಿದೆ. ಯಾವುದೇ ಮಗಾರಿಗೂ ಯಂತ್ರ ಬಳಸದೆ, ತ್ತಿಗೆದಾರರಿಗೂ ಮಣಿಯದೇ ನೇರವಾಗಿ ಮ್ಮ ಪಂಚಾಯತಿಯೇ ನಾನಾ ಅಭಿವೃದ್ಧಿ ಮಗಾರಿ ಹಮ್ಮಿಕೊಂಡು ಬರಗಾಲದಲ್ಲಿ ೀಯರಿಗೆ ಉದ್ಯೋಗ ಕಲ್ಪಿಸಿ ಬಡವರ ರವಕ್ಕೆ ಪಾತ್ರವಾಗಿದೆ,

ಲಕ್ಷ ರೂ ಅನುದಾನ:

2012–13 ನೇ ಸಾಲಿನ ಕ್ರಿಯಾ ಯೋಜನೆ ಾರ, ಗ್ರಾಮ ಪಂಚಾಯತಿಗೆ 42 ಲಕ್ಷ . ಅನುದಾನ ದೊರೆತಿದೆ. ಇದರಲ್ಲಿ ಳವಣಿಕಿ ಮತ್ತು ಕೌಜಗೇರಿ ಗ್ರಾಮಗಳಲ್ಲಿ ಿಧ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಾನಯನ ಇಲಾಖೆ ಮೂಲಕ ಬೆಳವಣಿಕಿ ಗ್ರಾಮದ 80 ಮತ್ತು ಕೌಜಗೇರಿ ಗ್ರಾಮದ 103 ರೈತರ ಹೊಲಗಳಲ್ಲಿ ಬದು ನಿರ್ಮಾಣಕ್ಕೆ 10 ಲಕ್ಷ ರೂ ಅನುದಾನ ವೆಚ್ಚ ಮಾಡಲಾಗಿದೆ. ಯಾವಗಲ್ –ಬೆಳವಣಿಕಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಯಲ್ಲಿ ಮೂರು ದಿನಗಳ ಕಾಲ 1,900 ಜನರಿಗೆ ಉದ್ಯೋಗ ನೀಡಲಾಗಿದ್ದು 5.50 ಲಕ್ಷ ರೂ ಅನುದಾನ ಬಳಕೆ ಮಾಡಲಾಗಿದೆ.







ಗ್ರಾಮದ ಕುಡಿಯುವ ನೀರಿನ ಕೆರೆಯ ಹೂಳು ತೆಗೆಯಲು 6 ಲಕ್ಷ ರೂ. ಸ್ಮಶಾನ ಅಭಿವೃದ್ಧಿಗೆ 1ಲಕ್ಷ ರೂ. ಹಾಗೂ ಕೌಜಗೇರಿ ಗ್ರಾಮಕ್ಕೆ 3 ಲಕ್ಷರೂ ಅನುದಾನ ನೀಡಲಾಗಿದೆ. ಕೌಜಗೇರಿ ಗ್ರಾಮದ ಸುಮಾರು 700ರಿಂದ 800 ಜನರಿಗೆ ಕೆಲಸ ನೀಡಲಾಗುತ್ತಿದೆ. ಈ ಗ್ರಾಮದ ಸ್ಮಶಾನ ಅಭಿವೃದ್ಧಿಗೆ 50,000 ರೂ ನೀಡಲಾಗಿದೆ.

ಈ ಗ್ರಾಮಗಳಲ್ಲಿ ಕೂಲಿಕಾರರ ಸಂಖ್ಯೆ ಹೆಚ್ಚಿದೆ. ಅಸಮರ್ಪಕ ಮಳೆ ಹಾಗೂ ನೀರಾವರಿ ಸೌಲಭ್ಯದ ಕೊರತೆಯಿಂದಾಗಿ ಕೃಷಿ ರಂಗದಲ್ಲಿ ಕೂಲಿಕಾರರಿಗೆ ಸಿಗುವ ಕೆಲಸ ಏನೇನು ಸಾಲದಾಗಿದೆ. ಬೆಳವಣಿಕಿ ಗ್ರಾಮ ಪಂಚಾಯತಿ ಮುತುವರ್ಜಿ ಹೆಚ್ಚುವರಿಯಾಗಿ 80 ಲಕ್ಷ ರೂ ಕ್ರಿಯಾ ಯೋಜನೆಯನ್ನು ರೂಪಿಸಿದೆ. ಇದರಿಂದ ರೈತರಿಗೂ ಹೆಚ್ಚು ಉಪಯುಕ್ತ ಆಗುವಂತಹ ಬದು ನಿರ್ಮಾಣ ಕಾರ್ಯಕ್ಕೆ ಒತ್ತು ನೀಡಲಾಗಿದೆ ಎನ್ನುತ್ತಾರೆ ಗ್ರಾಪಂ ಸದಸ್ಯರಾದ ಕೃಷ್ಣಪ್ಪ ಮಾಡೊಳ್ಳಿ ಮತ್ತು ಮಾರುತಿ ಮಾದರ. ಯಾರ. ಒತ್ತಡಕ್ಕೂ ಮಣಿಯದೆ ಜನರಿಗೆ ನೇರವಾಗಿ ಕೆಲಸ ನೀಡಿದ್ದೇವೆ ಎನ್ನುತ್ತಾರೆ ಗ್ರಾಮ ಪಂಚಾಯತಿಯ ಇತರ ಸದಸ್ಯರಾದ ಮಹೇಶ್ ಹಿರೇಮಠ, ಹನುಮಂತ ತಾಳಿ ಮತ್ತು ಜ್ಯೋತಿ ಗಡಾದ.

'ಭ್ರಷ್ಟಾಚಾರಕ್ಕಿಲ್ಲ ಆಸ್ಪದವಿಲ್ಲ'

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಪ್ರತಿದಿನ ಸಾವಿರ ಜನರಿಗೆ ಉದ್ಯೋಗ ಕೊಡಲು ಅವಕಾಶವಿದೆ. ಪ್ರತಿ 40 ಜನ ಕೂಲಿ ಕಾರ್ಮಿಕರಿಗೆ ಒಬ್ಬರಂತೆ 'ಉದ್ಯೋಗ ಮಿತ್ರ'ರನ್ನು ನೇಮಿಸಲಾಗುತ್ತದೆ. ಅದರಂತೆ ಬೆಳವಣಿಕಿ ಗ್ರಾಮ ಪಂಚಾಯತಿಯಲ್ಲಿ ಉತ್ತಮ ಕಾರ್ಯ ನಡೆದಿದೆ. ಇಲ್ಲಿ ಯಾವುದೇ ರೀತಿಯ ಭ್ರಷ್ಟಾಚಾರಕ್ಕೆ ಆಸ್ಪದವಾಗದೆ ಪಾರದರ್ಶಕವಾಗಿ ಖಾತ್ರಿ ಕಾಮಗಾರಿಗಳು ನಡೆದಿವೆ. ಬರಗಾಲದ ಈ ದಿನಗಳಲ್ಲಿ ಜನರು ಗುಳೆ ಹೋಗುವುದನ್ನು ತಡೆಯಲಾಗಿದೆ.

–ಎಂ.ಪಿ.ರುದ್ರಸ್ವಾಮಿ. ತಾ.ಪಂ.ಇ.ಓ.

★

ಕೂಲಿಕಾರರ ಸಂಖ್ಯೆ ಸಾವಿರ ದಾಟಿದೆ

"ಈಗಾಗಲೇ ಕೂಲಿಕಾರರ ಸಂಖ್ಯೆ ಸಾವಿರ ಗಡಿ ದಾಟಿದೆ. ಇನ್ನೂ ಜನ ಬಂದರೆ ಅವರಿಗೂ ಕೆಲಸ ನೀಡಲಾಗುತ್ತದೆ. ಯಾವುದೇ ಕಾರಣಕ್ಕೂ ಗುತ್ತಿಗೆದಾರರ ಒತ್ತಡಕ್ಕೆ ಮಣಿಯುವುದಿಲ್ಲ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಪ್ರೋತ್ಸಾಹಿಸುತ್ತಿದ್ದಾರೆ. ಹೀಗಾಗಿ ಹೆಚ್ಚು ಕಾಮಗಾರಿ ಕೈಗೊಂಡು ಬರಗಾಲದಲ್ಲಿ ಕೆಲಸ ಕೊಟ್ಟು ರೈತರ, ಕೂಲಿಕಾರರ ಕೈ ಹಿಡಿಯಲು ಸಾಧ್ಯವಾಗಿದೆ."

– ಮಾಹಾಗುಂಡಪ್ಪ. ಅಂಗಡಿ. ಗ್ರಾ.ಪ. ಅಧ್ಯಕ್ಷ ಬೆಳವಣಕಿ

★

"ನಮಗ ಉದ್ಯೋಗ ಖಾತ್ರಿ ಕೆಲ್ಸ ಸಿಕ್ಕು ಬರಗಾಲ್ದಾಗ ಗುಳೆ ಹೋಗೋದು ತಪ್ಪೈತಿ. ಕೂಲಿ ಹಣ ಲಗೂ ಸಿಕ್ರ ಪಾಡ ಆಗ್ತೈತಿ'

– ಮೈಲಾರೆಪ್ಪ ಮಾದರ. ಕೂಲಿ ಕಾರ್ಮಿಕ

★

"ನಮ್ಮೂರಾಗ ಉದ್ಯೋಗ ಖಾತ್ರಿ ಶುರು ಮಾಡಿದ್ದು ಹೆಣ್ಣು ಮಕ್ಕಳಿಗೆ ತುಂಬಾ ಅನುಕೂಲ ಆಗೈತಿ. ಹೆಣ್ಣು ಮಕ್ಳೇ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಕ್ಕೆ ಬರ್ತಾರ"

–ಸುವರ್ಣಾ ಶೆಗಣಿ ಗ್ರಾ.ಪಂ.ಸದಸ್ಯೆ

★

"ಸರ್ಕಾರದ ನಿಯಮದಂತೆ ಪಾರದರ್ಶಕವಾಗಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಕೂಲಿ ಪಾವತಿಯಲ್ಲಿ ಮಾತ್ರ ಸ್ವಲ್ಪ ವಿಳಂಬವಾಗುತ್ತಿದೆ. ಆದರೂ ದಿನದಿಂದ ದಿನಕ್ಕೆ ಕೂಲಿಕಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ."

–ರಮೇಶ ಹುಲಕುಂದ. ಗ್ರಾ.ಪಂ.ಪಿ.ಡಿ.ಓ.

★

"ಪಂಚಾಯ್ತಿ ವ್ಯಾಪ್ತಿಗೆ ಸೇರಿರುವ ಬೆಳವಣಿಕಿ ಮತ್ತು ಕೌಜಗೇರಿ ಗ್ರಾಮಗಳಲ್ಲಿ ಒಟ್ಟು 1,548 ಜಾಬ್ ಕಾರ್ಡ್‌ಗಳಿವೆ. ಎಲ್ಲರೂ ಕೆಲಸಕ್ಕೆ ಬರಬಹುದು. 48,82,500 ರೂ ಕ್ರಿಯಾ ಯೋಜನೆ ರೂಪಿಸಲಾಗಿದೆ."

– ಬಸವರಾಜ ಮಂತೂರ. ಗ್ರಾ.ಪಂ. ಸದಸ್ಯ

ಜಗದಗಲ

ಶರತ್‌ಚಂದ್ರ

ಅರಾಫತ್‌ಗೆ ವಿಷ ಉಣಿಸಿ ಕೊಲೆ ಮಾಡಲಾಯಿತೇ?

ಈ ಪ್ರಶ್ನೆಯನ್ನು ಹಲವು ವರ್ಷಗಳಿಂದ ಹಲವರು ಕೇಳುತ್ತಿದ್ದರು. ಎಂಟು ವರ್ಷಗಳ ಹಿಂದೆ ಸಂಭವಿಸಿದ ಅರಾಫತ್ ಸಾವು ಸ್ವಾಭಾವಿಕವೇ ಎಂಬ ಬಗ್ಗೆ ಮೊದಲಿನಿಂದಲೇ ತೀವ್ರ ಗುಮಾನಿಗಳಿದ್ದವು. ಅವರ ಖಾಸಗಿ ಡಾಕ್ಟರ್ ಅವರನ್ನು ವಿಷ ಉಣಿಸಿ ಕೊಲೆ ಮಾಡಲಾಗಿದೆ ಎಂದು ಹೇಳಿದ್ದರು. ಅವರು ಕೊನೆಯ ದಿನಗಳನ್ನು ಕಳೆದ ಫ್ರೆಂಚ್ ಮಿಲಿಟರಿ ಆಸ್ಪತ್ರೆ ಅವರ ಸಾವಿನ ಕಾರಣಗಳ ಬಗ್ಗೆ ಮೊದಲಿಂದಲೂ ದಿವ್ಯ ಮೌನ ವಹಿಸಿದೆ. ಫ್ರೆಂಚ್ ಅಧಿಕಾರಿಗಳೂ ಅವರ ಸಾವಿಗೆ ಕಾರಣವಾದ ಕಾಯಿಲೆ ಬಗ್ಗೆ 'ಖಾಸಗಿ ಮಾಹಿತಿ' ಎಂಬ ಕಾರಣ ಕೊಟ್ಟು ಏನನ್ನೂ ಹೇಳಲು ನಿರಾಕರಿಸಿವೆ. ಆದರೆ ಈಗ ಅಲ್ ಜಜೀರಾ ವರದಿಯೊಂದರ ಪ್ರಕಾರ ಕಳೆದ ಒಂಬತ್ತು ತಿಂಗಳ ತನಿಖೆಯಿಂದ ಅವರನ್ನು ಪೊಲೊನಿಯಂ 210 ಎಂಬ ವಿಷ ಉಣಿಸಿ ಕೊಲೆ ಮಾಡಿರುವುದು ಹೆಚ್ಚು ಕಡಿಮೆ ಖಚಿತವಾಗಿದೆ.

ವಿಕಿರಣ ಭೌತಶಾಸ್ತ್ರದ ಸ್ವಿಸ್ ಇನ್ಸ್‌ಸ್ಟಿಟ್ಯೂಟ್ ಅರಾಫತ್ ಅವರ ಬಟ್ಟೆ ಮತ್ತು ಟೂತ್ ಬ್ರಶ್ಶಿನಲ್ಲಿ 'ಆಶ್ಚರ್ಯಕರ ರೀತಿಯಲ್ಲಿ ಹೆಚ್ಚಿನ ಮಟ್ಟದ' ಪೊಲೊನಿಯಂ 210 ಕಂಡು ಬಂದಿದೆ ಎಂದು ಹೇಳಿದೆ. ಪೊಲೊನಿಯಂ ಬಹಳ ಅಪರೂಪದ ಮತ್ತು ಅತ್ಯಂತ ವಿಷಕಾರಿ ವಿಕಿರಣಕಾರಿ ವಸ್ತು. ಒಬ್ಬ ಮನುಷ್ಯನನ್ನು ಕೊಲ್ಲಲಿಕ್ಕೆ ಒಂದು ಗ್ರಾಂ ಪೊಲೊನಿಯಂ 210 ಸಾಕು. ಅದು ನಿಧಾನವಾಗಿ ಆದರೆ ಬಹಳ ನೋವುಣಿಸುವ



ಖಚಿತ ಸಾವು ಕೊಡುತ್ತದೆ. ನವಂಬರ್ 2006 ರಲ್ಲಿ ಲಿಟ್ವಿನೆಂಕೊ ಎಂಬ ರಶ್ಯನ್ ಡಬಲ್ ಬೇಹುಗಾರ ಏಜೆಂಟನನ್ನು ಲಂಡನಿನ ರೆಸ್ಟೋರೆಂಟ್ ಒಂದರಲ್ಲಿ ಆತನ ಚಹ ಕಪ್ಪಿನಲ್ಲಿ ಪೊಲೊನಿಯಂ ಹಾಕಿ ಕೊಂದಾಗ ಇದು ಬೆಳಕಿಗೆ ಬಂದಿತ್ತು. ವಿಕಿರಣ ಭೌತಶಾಸ್ತ್ರದ ಸ್ವಿಸ್ ಇನ್ಸ್‌ಸ್ಟಿಟ್ಯೂಟ್ ಅವರ ಶವದ ಆಮೂಲಾಗ್ರ ಪರೀಕ್ಷೆಯಿಂದ ಈ ಬಗ್ಗೆ ಖಚಿತಪಡಿಸಿಕೊಳ್ಳಬಹುದು ಎಂದು ಹೇಳಿದೆ.

ಫ್ರಾನ್ಸಿನಲ್ಲಿ ನೆಲೆಸಿರುವ ಅರಾಫತ್ ಅವರ ಪತ್ನಿ ಸುಹಾ, ಫ್ರೆಂಚ್ ಅಧಿಕಾರಿಗಳು ಅರಾಫತ್ ಸಾವಿನ ಕಾರಣಗಳ ಬಗ್ಗೆ ತನಿಖೆ ಮಾಡುವಂತೆ ಕೋರ್ಟಿಗೆ ಕೇಸು ದಾಖಲು ಮಾಡಲಿದ್ದಾರೆ. ಪ್ಯಾಲೆಸ್ತೈನ್ ಪ್ರಾಧಿಕಾರದ ಅಧ್ಯಕ್ಷ ಅಬ್ಬಾಸ್ ಹೊಸ ಫ್ರೆಂಚ್ ಅಧ್ಯಕ್ಷರನ್ನು ಭೇಟಿ ಮಾಡಿದಾಗ, ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಸುಪರ್ದಿನಲ್ಲಿ ಅರಾಫತ್ ಸಾವಿನ ಕಾರಣಗಳ ಬಗ್ಗೆ ತನಿಖೆ ಮಾಡಲು ಒಂದು ಅಂತರಾಷ್ಟ್ರೀಯ ಸಮಿತಿ ನೇಮಿಸುವ ಬಗ್ಗೆ ಚರ್ಚೆ ನಡೆಸಿದ್ದಾರೆ. ಇದಕ್ಕಾಗಿ ಅರಾಫತ್ ಅವರ ಶವವನ್ನು ಹೂತ ಜಾಗದಿಂದ ಹೊರ ತೆಗೆಯಲು ಅನುಮತಿ ನೀಡಿದ್ದಾರೆ.

ಅರಾಫತ್ ಅವರನ್ನು ಪೊಲೊನಿಯಂ ವಿಷ ಉಣಿಸುವ ಮೂಲಕವೇ ಕೊಲೆ ಮಾಡಲಾಗಿದ್ದರೆ ಇದನ್ನು ಮಾಡಿದವರು ಯಾರು? ಹಲವು ಮಾಹಿತಿಗಳ ಪರಿಶೀಲನೆ ಇಸ್ರೇಲಿ ಸರ್ಕಾರದತ್ತ ಬೊಟ್ಟು ಮಾಡುತ್ತಿವೆ. ಪೊಲೊನಿಯಂ ಅಪರೂಪದ ವಿಕಿರಣ ವಸ್ತು. ವಿಜ್ಞಾನ ಮತ್ತು ಅಣು ತಂತ್ರಜ್ಞಾನದಲ್ಲಿ ಅಭಿವೃದ್ಧ ದೇಶಗಳ ಸರ್ಕಾರಗಳಿಗೆ ಮಾತ್ರ ಇದು ಸಿಗಬಹುದು. ಇಂತಹ ದೇಶ ಈ ಪ್ರದೇಶದಲ್ಲಿ ಇಸ್ರೇಲ್ ಮಾತ್ರ. ಇಸ್ರೇಲಿನ ದಿಮೊನಾ ಎಂಬಲ್ಲಿನ ಅಣು ರಿಯಾಕ್ಟರ್ ಪೊಲೊನಿಯಂ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಮಾತ್ರವಲ್ಲ ಅರಾಫತ್ ಸತ್ತ ಹಿಂದಿನ ಮೂರು ವರ್ಷಗಳ ಕಾಲ ರಮಲ್ಲಾದಲ್ಲಿರುವ ಅವರ ನಿವಾಸವನ್ನು ನಾಶ ಮಾಡಲಾಗಿತ್ತು. ಅವರ ನಿವಾಸವನ್ನು ಇಸ್ರೇಲಿ ಸೈನ್ಯ ಸುತ್ತುವರೆದಿದ್ದು, ಅರಾಫತ್ ಹೆಚ್ಚು ಕಡಿಮೆ ಅವರ ಬಂಧಿಯಾಗಿದ್ದರು. ಇಸ್ರೇಲಿ ಬೇಹುಗಾರಿಕೆ ಪಡೆಗಳು ತನ್ನ ವಿರೋಧಿಗಳ ಈ ರೀತಿಯ ರಹಸ್ಯ ಕೊಲೆಗಳನ್ನು ನಿಗೂಢ ರೀತಿಯ[ಲ್ಲಿ] ಮಾಡುವುದರಲ್ಲಿ ಪರಿಣತರು ಎಂಬ ಬಗ್ಗೆ ಹಲ[ವು] ಉದಾಹರಣೆಗಳಿವೆ.


ಹಲವು ವರ್ಷಗಳಿಂದ ಇಸ್ರೇಲು ಶಾಂ[ತಿ] ಮಾತುಕತೆಗೆ ಒತ್ತಡ ತರಬಲ್ಲ ಪ್ರಭಾವಿ ಅರಾಫ[ತ್] ಅವರನ್ನು 'ಮುಗಿಸಿ ಬಿಡಲು' ನಿರ್ಧರಿಸಿ[...] ಎಂದು ಹೇಳಲಾಗಿದೆ. ಈ ಅವಧಿಯಲ್ಲಿ ಒ[...] ಆಗ ಇಸ್ರೇಲಿ ಪ್ರಧಾನಿಯಾಗಿದ್ದ ಶರೋ[ನ್] ಅರಾಫತ್‌ಗೆ 'ಇನ್ಶ್ಯೂರೆನ್ಸ್ ಇಲ್ಲ' ಎಂ[ದು] ಮಾರ್ಮಿಕವಾಗಿ ಹೇಳಿದ್ದರು. ಅರಾಫ[ತ್] ಸಾವಿನ ನಂತರ ಸಂದರ್ಶನ ಒಂದರಲ್ಲಿ[...] ಆಕಸ್ಮಿಕ ಸಾವಿನಲ್ಲಿ ಇಸ್ರೇಲಿ ಕೈವಾಡ ಇಲ್ಲ ಎಂ[ದು] ಹೇಳಲು ನಿರಾಕರಿಸಿದ್ದರು. ಇಸ್ರೇ[ಲಿ] ಪಾರ್ಲಿಮೆಂಟ್ ಸದಸ್ಯ, ಪತ್ರಿಕಾ ಅಂಕಣಕಾ[ರ] ಶಾಂತಿ ಕಾರ್ಯಕರ್ತ ಉರಿ ಅವನೆರಿ ಶರೋ[ನ್] ಅಮೆರಿಕನ್ ಅಧ್ಯಕ್ಷ ಬುಶ್ ಅನುಮತಿ ಪಡೆ[ದು] ಈ 'ಕೊಲೆ' ನಡೆಸಿದ್ದಾರೆ ಎಂದು ಹೇಳಿದ್ದಾ[ರೆ].

ಅಮೆರಿಕ ಮತ್ತು ಇತರ ಪಾಶ್ಚಿಮಾ[ತ್ಯ] ದೇಶಗಳು ಅರಾಫತ್ ಸಾವಿನ ಕಾರಣಗಳ [...] ತನಿಖೆ ನಡೆಯದಂತೆ ಒತ್ತಡ ಹಾಕುತ್ತಿವೆ ಎಂ[ದು] ಪ್ಯಾಲೆಸ್ತೈನ್ ಪ್ರಾಧಿಕಾರದ ವಕ್ತಾರ ಹೇಳಿದ್ದಾ[ರೆ]. ತನಿಖೆಗೆ ಒತ್ತಾಯಿಸಿದರೆ 'ಶಾಂತಿ ಪ್ರಕ್ರಿಯ[ೆ] ಭಂಗ ಬರಬಹುದು' ಎಂದು ಅಮೆರಿ[ಕ] ಸರ್ಕಾರ ಪ್ಯಾಲೆಸ್ತೈನ್ ಪ್ರಾಧಿಕಾರಕ್ಕೆ ಎಚ್ಚ[ರಿಕೆ] ನೀಡಿದೆ. ಪ್ಯಾಲೆಸ್ತೈನ್ ಪ್ರಾಧಿಕಾರಕ್ಕೆ ಈ ಒತ್ತ[ಡ] ಮಣಿಯುವುದೇ ಎಂದು ಕಾ[ದು] ನೋಡಬೇಕಾಗಿದೆ.

ಮಾಲ್ವಿನಾಸ್ : ಕೊನೆಯ ವಸಾಹತು ಬಿಡಲು ಬ್ರಿಟನ್ ತಯಾರಿ[...]

ಇಪ್ಪತ್ತನೇ ಶತಮಾನದ ಮೊದಲರ್ಧದಲ್ಲಿ ಜಗತ್ತಿನ ತುಂಬಾ ಹರಡಿದ ಬ್ರಿಟಿಷ್ ಸಾಮ್ರಾಜ್ಯವನ್ನು 'ಸೂರ್ಯ ಮುಳುಗದ' ಸಾಮ್ರಾಜ್ಯ ಎಂದು ಕರೆಯಲಾಗುತ್ತಿತ್ತು. ಈಗಲೂ ಬ್ರಿಟನ್ ತನ್ನ ಕೊನೆಯ ವಸಾಹತುವಾದ ಮಾಲ್ವಿನಾಸ್ ಬಿಟ್ಟು ಕೊಡಲು ತಯಾರಿಲ್ಲ. ಮಾಲ್ವಿನಾಸ್ ದಕ್ಷಿಣ ಅಮೆರಿಕಾದ ಅರ್ಜೆಂಟಿನಾ ಕರಾವಳಿ ಬಳಿ ಇರುವ ಮತ್ತು ಅದರ ಭಾಗವಾಗಿದ್ದ ದ್ವೀಪ ಸಮೂಹ. ಅದನ್ನು ಬ್ರಿಟಿಷರು ಫಾಕ್‌ಲ್ಯಾಂಡ್ಸ್ ಎಂದು ಕರೆಯುತ್ತಾರೆ. 1982ರಲ್ಲಿ ಈ ದ್ವೀಪ ಸಮೂಹದ ಒಡೆತನದ ಬಗ್ಗೆ ಅರ್ಜೆಂಟಿನಾ ಮತ್ತು ಬ್ರಿಟನ್ ನಡುವೆ ಆದ 74 ದಿನಗಳ ಯುದ್ಧದ ನಂತರ ಅದು ಕುಖ್ಯಾತವಾಗಿತ್ತು. ಈ ಯುದ್ಧದಲ್ಲಿ 649 ಅರ್ಜೆಂಟಿನಾ ಸೈನಿಕರು, 255 ಬ್ರಿಟಿಷ್ ಸೈನಿಕರು ಮತ್ತು 4 ನಾಗರಿಕರು ಸತ್ತಿದ್ದರು. ಅಲ್ಲಿರುವ ಒಟ್ಟು ನಾಗರಿಕರ ಸಂಖ್ಯೆ ಮೂರು ಸಾವಿರ! ಸತ್ತ ಅರ್ಜೆಂಟಿನಾ ಸೈನಿಕರಲ್ಲಿ ಹೆಚ್ಚಿನವರು (323) ಸತ್ತಿದ್ದು ಅರ್ಜೆಂಟಿನಾದ 'ಜನರಲ್ ಬೆಲ್‌ಗ್ರಾನೊ' ಎಂಬ ಯುದ್ಧ ಹಡಗನ್ನು ಬ್ರಿಟಿಷ್ ನೌಸೈನ್ಯ ಮುಳುಗಿಸಿದಾಗ. ಅಂತರಾಷ್ಟ್ರೀಯ ಸಮುದ್ರದಲ್ಲಿ ಇದ್ದಾಗ ಮುಳುಗಿಸಿದ್ದರಿಂದ ಈ ದುಷ್ಕೃತ್ಯವನ್ನು ಯುದ್ಧ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಈ ಯುದ್ಧದ ನಂತರ ಮಾಲ್ವಿನಾಸ್ ಒಡೆತನದ ವಿವಾದ ನೆನೆಗುದಿಗೆ ಬಿದ್ದಿತ್ತು.

ಬ್ರಿಟನ್ ಇತರ ಹಲವು ದೇಶಗಳು ಮತ್ತು ದ್ವೀಪ ಸಮೂಹಗಳಲ್ಲಿ ಮಾಡಿದಂತೆ, ಮಾಲ್ವಿನಾಸ್‌ನಲ್ಲೂ 1833ರಲ್ಲಿ ಮಿಲಿಟರಿ ಬಲ ಬಳಸಿ ಸ್ಥಳೀಯರನ್ನು ಓಡಿಸಿದ್ದರು. ಬ್ರಿಟಿಷ್ ನಾಗರಿಕರನ್ನು ಕರೆಸಿ ನೆಲೆಸಿದ್ದರು. ಮೂಲ ನಿವಾಸಿಗಳು ಹಿಂತಿರುಗದಂತೆ ಮಿಲಿಟರಿ ಬಲ ಸ್ಥಾಪಿಸಿದ್ದರು. ಒಂದೇ ಶಬ್ದದಲ್ಲಿ ಹೇಳುವುದಾದರೆ ಮಾಲ್ವಿನಾಸನ್ನು ಒಂದು ವಸಾಹತು ಮಾಡಿಕೊಂಡಿದ್ದರು. 1950 ಮತ್ತು 60ರ ದಶಕಗಳ ನಿರ್ವಸಾಹತೀಕರಣದ ಭಾಗವಾಗಿಯೂ ಮಾಲ್ವಿನಾಸ್‌ನಿಂದ ಕಾಲ್ತೆಗೆಯಲು ತಯಾರಿರಲಿಲ್ಲ. ಯಾವುದೇ ಮೂಲ ನಿವಾಸಿಗಳು ಇಲ್ಲದಿರುವುದು ಈ ವಸಾಹತಿನ ವಿಶೇಷ. ಅದನ್ನೇ



(ಅದು ಇನ್ನೂ ದೊಡ್ಡ ಅಪರಾಧವಾದರೂ) ನೆಪ ಮಾಡಿಕೊಂಡು ಮಾಲ್ವಿನಾಸ್ ವಸಾಹತುವೇ ಅಲ್ಲ; ಆದ್ದರಿಂದ ನಿರ್ವಸಾಹತೀಕರಣದ ವಿಶ್ವಸಂಸ್ಥೆಯ ಪ್ರಸಿದ್ಧ ನಿರ್ಣಯ 1514 ಮಾಲ್ವಿನಾಸ್‌ಗೆ ಅನ್ವಯವಾಗುವುದಿಲ್ಲ. ಅ[...] ನಾಗರಿಕರ (ಬ್ರಿಟನ್ ಸ್ವತಃ ನೆಲೆ ಮಾಡಿದ್ದ[...] ಜನಮತಸಂಗ್ರಹದ ಮೂಲಕ ಒ[...] ವಿವಾದ ಬಗೆ ಹರಿಸಬಹುದು. ಜನ[...] 'ಸ್ವಯಂ-ನಿರ್ಧಾರದ' ನೀತಿ ಇಲ್ಲಿ ಅ[...] ಮಾಡಬೇಕು ಎಂದು ಬ್ರಿಟಿಷ್ ಸ[ರ್ಕಾರ] ವಾದಿಸಿದೆ. ಮಾಲ್ವಿನಾಸ್ ವಸಾಹತಿನ [...] ವಿಶೇಷ ಸನ್ನಿವೇಶ. 'ಸ್ವಯಂ-ನಿರ್ಧಾ[ರ] ನೀತಿ ಇಲ್ಲಿ ಅನ್ವಯ ಆಗುವು[ದಿಲ್ಲ] ವಿಶ್ವಸಂಸ್ಥೆಯ ಸಾಮಾನ್ಯ ಸಭೆ 1965 [...] 1985ರಲ್ಲಿ ಭಾರೀ ಬಹುಮ[ತದ] ನಿರ್ಣಯಗಳ ಮೂಲಕ ಈ ನಿಲು[ವು] ಸ್ಪಷ್ಟ ಪಡಿಸಿದೆ. ಆದರೂ ಬ್ರಿ[ಟನ್] ಜನಮತಸಂಗ್ರಹ ಮಾಡಲು ಮುಂದಾ[...]

1982ರಲ್ಲಿ ಅರ್ಜೆಂಟಿನಾ ಮಿಲಿಟರಿ ಸ[...] ಜನರ ಗಮನವನ್ನು ತನ್ನ ದಮ[ನ...]

ಜನಶಕ್ತಿ
ಕನ್ನಡ ವಾರಪತ್ರಿಕೆ

ಕರ್ನಾಟಕದಲ್ಲಿ ಅಪೌಷ್ಟಿಕತೆ .....

ಪುಟ 8 ರಿಂದ

ಬೇಕಾದ ಕ್ರಮಗಳನ್ನು ಅನುಸರಿಸುತ್ತಿದೆ.

ರಾಜ್ಯದಲ್ಲಿ 6 ಕೋಟಿ ಜನಸಂಖ್ಯೆಯಲ್ಲಿ ಅತಿ ಸಣ್ಣ ಭೂಮಿ ಹೊಂದಿರುವವರು 36,55,882 ಜನ (48.22) ಅಂದರೆ 1 ಎಕರೆಯಿಂದ 1,1/2 ಎಕರೆಯ ಜಮೀನು ಹೊಂದಿರುವವರು, ಭೂರಹಿತ ಕುಟುಂಬಗಳು 34,71,045 ಕುಟುಂಬಗಳು. ಅಂದರೆ 33.37% ಕುಟುಂಬಗಳು ಭೂರಹಿತ ಕುಟುಂಬಗಳು. ರಾಜ್ಯದಲ್ಲಿ 46% ಕಾರ್ಮಿಕ ರಂಗದ ವಿವಿಧ ಭಾಗಗಳಲ್ಲಿ ಜನ ದುಡಿಯುತ್ತಿದ್ದಾರೆ. ಈ ರಂಗದಲ್ಲಿ ಒಟ್ಟು ಕೆಲಸಗಾರರಲ್ಲಿ ಮಹಿಳೆಯರ ದೊಡ್ಡ ಪ್ರಮಾಣದಲ್ಲಿ ಇಳಿಕೆಯಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ 4.5% ಇಳಿಮುಖ, ಪುರುಷರು 3.9% ಇಳಿಮುಖ, ನಗರದಲ್ಲಿ 6% ಮಹಿಳೆಯರು, ಪುರುಷರು 4.4% ಇಳಿಮುಖವಾಗಿದೆ.

ಖಾಯಂ ಉದ್ಯೋಗದ ಬದಲಿಗೆ ಸ್ವಯಂ ಉದ್ಯೋಗ ಮಾಡುವವರು 50%, ಹಂಗಾಮಿ ಕೆಲಸ ಮಾಡುವವರ ಪ್ರಮಾಣ 40% ಇದೆ. ಸರ್ಕಾರದ ಖಾಸಗೀಕರಣ ನೀತಿಗಳ ಭಾಗವಾಗಿ ಸಂಘಟಿತ ವಲಯ ಅಸಂಘಟಿತ ವಲಯವಾಗಿ ಮಾರ್ಪಾಡಾಗಿದೆ. ಈ ಅಸಂಘಟಿತ ವಲಯದಲ್ಲಿ ನಗರ ಮತ್ತು ಗ್ರಾಮಾಂತರ ಜನತೆ ಸೇರಿದಂತೆ ಬಹುದೊಡ್ಡ ಪ್ರಮಾಣದಲ್ಲಿ ಗುತ್ತಿಗೆಯಾಧಾರದಲ್ಲಿ ಮತ್ತು ಹಂಗಾಮಿ (ಅಂದರೆ ಕೆಲಸವಿದ್ದಾಗ ಮಾತ್ರ) ಯಾಗಿ ಅತ್ಯಂತ ಕಡಿಮೆ ಕೂಲಿಗೆ ದುಡಿಯುತ್ತಿದ್ದಾರೆ. ಹಂಗಾಮಿ ಕೆಲಸಗಾರರಲ್ಲಿ ಗ್ರಾಮೀಣ ಮಹಿಳೆಯರ ಪ್ರಮಾಣ 51.6% ರಷ್ಟು ಇದೆ. "ಕರ್ನಾಟಕದ ಆರ್ಥಿಕ ಸಮೀಕ್ಷೆಯ ವರದಿಯ ಪ್ರಕಾರವೇ ಗ್ರಾಮೀಣ ಭಾಗದ ಖಾಯಂ ಉದ್ಯೋಗಿಗಳು ಪಡೆಯುತ್ತಿರುವ ಸರಾಸರಿ ಕೂಲಿಯು ಭಾರತದ ಗ್ರಾಮೀಣ ಕೂಲಿಯ ಸರಾಸರಿಗಿಂತ 37% ಕಡಿಮೆ ಕೂಲಿ ಕರ್ನಾಟಕದಲ್ಲಿದೆ." ಮಹಿಳೆಯರ ಕೂಲಿಗಿಂತ ಸುಮಾರು 9.5% ಪ್ರತಿಶತದಷ್ಟು ಕಡಿಮೆಯಾಗಿರುತ್ತದೆ. ನಗರಗಳಲ್ಲಿ ಕೂಲಿಯ ದರ ಮಹಿಳೆಯರಿಗೆ 84.50 ರೂ ಪುರುಷರಿಗೆ 108.64 ರೂ ಗ್ರಾಮಾಂತರ ಪ್ರದೇಶದಲ್ಲಿ ಕೂಲಿಯದರ 62.77% ಪುರುಷರಿಗೆ 96.91 ರೂ. ಕೂಲಿಯು ಕೂಡಾ ವರ್ಷದ 12 ತಿಂಗಳು ಸಿಗುವುದಿಲ್ಲ ಎಂಬುದನ್ನು ನೋಡಬೇಕಾಗುತ್ತದೆ. (ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ ಐಎಲ್‌ಓ) ಕೂಡಾ ಜಗತ್ತಿನಲ್ಲಿ ಭಾರತದಲ್ಲಿಯೇ ಅತ್ಯಂತ ಕಡಿಮೆ ಕೂಲಿ ಎಂಬುದನ್ನು ಪ್ರತಿಪಾದಿಸಿದೆ.

ಕೆಲಸಕ್ಕಾಗಿ ವಲಸೆ ಹೋಗುವ ಜನರಲ್ಲಿಯೂ ಕೂಡಾ ಮಹಿಳೆಯರ ಸಂಖ್ಯೆ ಇತ್ತೀಚಿಗೆ ಹೆಚ್ಚಾಗುತ್ತಿದೆ. ಈ ಉದ್ಯೋಗಗಳಲ್ಲಿರುವ ಜನರಲ್ಲಿ 52.4% ಅನಕ್ಷರಸ್ಥರು ಮತ್ತು ಪ್ರಾಥಮಿಕ ಶಿಕ್ಷಣ ಪಡೆದವರು, 31.5% ಜನರಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣ ಹೊಂದಿರುವವರು. ದೊಡ್ಡ ಪ್ರಮಾಣದ ಅನಕ್ಷರಸ್ಥರು ಇರುವ, ಅತ್ಯಂತ ಕಡಿಮೆ ಕೂಲಿ ದುಡಿಯುವ ಈ ಭಾಗದ ಮತ್ತು ರಾಜ್ಯದ 36,55,882 ಕುಟುಂಬ 1.1/4 ಎಕರೆ ಭೂಮಿ, 34,71,045 ಕುಟುಂಬಗಳು ಭೂರಹಿತ ಕುಟುಂಬಗಳು ರಾಜ್ಯದಲ್ಲಿವೆ. ಈ ರಾಜ್ಯದ ಅಸಮಾನ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಪ್ರತಿಫಲವಾಗಿಯೇ ಇಷ್ಟು ದೊಡ್ಡ ಪ್ರಮಾಣದ ಅಪೌಷ್ಟಿಕತೆ ನಮ್ಮಲ್ಲಿ ತಾಂಡವವಾಡಲು ಕಾರಣ ಎಂಬುದು ಸತ್ಯವಾಗಿದೆ.

ಸರ್ಕಾರದ ಉಳವರ ಪರವಾದ ನೀತಿಗಳು:

ಇಷ್ಟು ದೊಡ್ಡ ಪ್ರಮಾಣದ ಬಡತನವನ್ನು



ಹೋಗಲಾಡಿಸುವ ಅಥವಾ ಸುಧಾರಿಸುವ ದಿಕ್ಕಿನಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಯಾವುದೇ ಬೆಲೆ ಕೊಡುವ ಬದಲಿಗೆ ಕೃಷಿಗೆ ಉಪಯೋಗ ಮಾಡುವ ಕೃಷಿ ಲಾಗುವಾಡುಗಳ ವೆಚ್ಚ, ಸರ್ಕಾರವೇ ಕಡಿಮೆ ಬೆಲೆಗೆ ಕೊಡುತ್ತಿದ್ದ ರಸಗೊಬ್ಬರ, ಬಿತ್ತನೆ ಬೀಜಗಳನ್ನು ಸಕಾಲದಲ್ಲಿ ಸಾಕಾಗುವಷ್ಟು ಪೂರೈಕೆ ಮಾಡದಿರುವುದು, ಬೆಳೆಗಳನ್ನು ಬೆಳೆಯಲು ಬೇಕಾದ ಬ್ಯಾಂಕಿನಿಂದ ಬಡ್ಡಿ ರಹಿತ ಸಾಲಗಳನ್ನು ನೀಡದಿರುವುದು. ಸಾಲ ತೆಗೆದುಕೊಂಡು ಬೆಳೆದ ಫಸಲಿಗೆ ಸರಿಯಾದ ಬೆಲೆ ಸಿಗಲಾರದೇ ಸಾಲವನ್ನು ತೀರಿಸಲಾಗದೇ ರಾಜ್ಯದಲ್ಲಿ ಸಾವಿರಾರು ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ. ವಾಣಿಜ್ಯ ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ದೊಡ್ಡ ಭೂಮಾಲಿಕರಿಗೆ ಸರ್ಕಾರದ ಎಲ್ಲ ಸೌಲಭ್ಯಗಳು ಹರಿದು ಹೋಗುತ್ತಿರುವುದನ್ನು ನೋಡಬಹುದಾಗಿದೆ. ಬೇಸಾಯ ಮಳೆಯ ನೀರಿನ ಮೇಲೆ ಹೆಚ್ಚು ಅವಲಂಬಿತವಾಗಿ ನೀರಿನ ಶೇಖರಣೆ ಇಲ್ಲದೆ, ನೀರಾವರಿ ಯೋಜನೆಗಳಿಗೆ ಹೆಚ್ಚಿನ ಒತ್ತನ್ನು ಕೊಡದೆ ಆಹಾರ ಧಾನ್ಯಗಳು ಕಡಿಮೆ ಬೆಳೆಯಲು ಕಾರಣವಾಗಿದೆ.

ಪಡಿತರ ವ್ಯವಸ್ಥೆ: ದಕ್ಷಿಣ ಭಾರತದಲ್ಲಿ ಬೇರೆ ರಾಜ್ಯಗಳಲ್ಲಿ ಕುಟುಂಬಗಳಿಗೆ 1 ಅಥವಾ 2 ರೂ ಗೆ 35 ಕೆಜಿ ಅಕ್ಕಿಯನ್ನು ಪಡಿತರ ವ್ಯವಸ್ಥೆಯ ಮುಖಾಂತರ ನೀಡಲಾಗುತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ 89,11,568 ಕುಟುಂಬಗಳು ಬಿಪಿಎಲ್ ಕಾರ್ಡಗಳನ್ನು, 11,99,700 ಕುಟುಂಬಗಳು ಅಂತ್ಯೋದಯ ಕಾರ್ಡುಗಳನ್ನು ಹೊಂದಿವೆ.

ಈ ಕಾರ್ಡದಾರರಿಗೆ 35ಕೆಜಿ ಅಕ್ಕಿ ಕೊಡುವ ಬದಲು ಗುರಿಯಾಧಾರಿತ ಪದ್ಧತಿ ಅಂದರೆ ಒಂದು ಕುಟುಂಬದಲ್ಲಿ 4 ಜನರಿದ್ದರೆ 20 ಕೆಜಿ., 7–8 ಜನರಿದ್ದರು 20 ಕೆ.ಜಿ. ಅಕ್ಕಿಯನ್ನು ನೀಡಲಾಗುತ್ತಿದೆ. ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡಗಳಿಗೆ ಒಂದು ಕೆ.ಜಿ. ಅಕ್ಕಿಗೆ 3 ರೂಗಳಿಗೆ ಕೊಡುತ್ತಿದೆ.

ಅಂತ್ಯೋದಯ ಕಾರ್ಡಗಳಿಗೆ 29 ಕೆ.ಜಿ. ಅಕ್ಕಿ, 2ರೂ ನಂತೆ 6 ಕೆ.ಜಿ. ಗೋಧಿಯನ್ನು ಕೊಡುತ್ತಿದೆ. ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದ ಅಪೌಷ್ಟಿಕತೆ, ಬಡತನ, ಇರುವಾಗ ಕೂಲಿಯ ದರಗಳು ಕಡಿಮೆಯಿದ್ದಾಗಲೂ ಸರ್ಕಾರ 1 ಕೆಜಿ ಅಕ್ಕಿಗೆ 3 ರೂ ತೆಗೆದುಕೊಂಡರೆ ಅಂಗಡಿಗಳಲ್ಲಿ ಇದರ ಬೆಲೆ ಎಷ್ಟಿದೆ ಎಂದು ಅಂದಾಜಿಸಬಹುದಾಗಿದೆ.

ಬಿಪಿಎಲ್ ಕಾರ್ಡಗಳನ್ನು ಅರ್ಹತೆ ಇಲ್ಲದಿರುವ ಕುಟುಂಬಗಳು ಹೊಂದಿವೆ ಎಂದು ರಾಜ್ಯ ಸರ್ಕಾರ ವಿಶೇಷ ಸಮೀಕ್ಷೆಯನ್ನು ನಡೆಸಿ ನಗರ ಪ್ರದೇಶದ 12 ಲಕ್ಷ, ಗ್ರಾಮಾಂತರ ಪ್ರದೇಶದ 26 ಲಕ್ಷ ಬಿಪಿಎಲ್ ಕಾರ್ಡಗಳನ್ನು ಅನರ್ಹ ಎಂದು ಘೋಷಿಸಲು ಮುಂದಾಗಿದೆ.

ರಾಜ್ಯದಲ್ಲಿ ಮುಂದಾಲೋಚನೆಯಿಲ್ಲದ ಹೊಣೆಗೇಡಿ ನೀತಿಗಳ ಫಲವಾಗಿ 2010–11 ರಲ್ಲಿ ಲೆವಿ ಅಕ್ಕಿ ಸಂಗ್ರಹಣ ಪ್ರಮಾಣ 153 ಸಾವಿರದ 5 ಮೆಟ್ರಿಕ್ ಟನ್ ಅಕ್ಕಿ ನಷ್ಟವಾಗಿದೆ.

ಬಿಪಿಎಲ್ ಕಾರ್ಡಗಳನ್ನು ಅನರ್ಹ ಎಂದು ಹೇಗೆ ಪರಿಗಣಿಸಲಾಗುತ್ತದೆ ?

40 ವರ್ಷಗಳ ಹಿಂದೆ ಯೋಜನಾ ಆಯೋಗವು " ಒಬ್ಬ ವ್ಯಕ್ತಿಗೆ ಊಟ ಮಾಡಲು ಸಾಕಷ್ಟು ಆಹಾರವಿದ್ದು ಇತರ ಆಹಾರೇತರ ಅವಶ್ಯಕತೆಗಳನ್ನು ಸಹ ಪೂರೈಸಿಕೊಳ್ಳುವ ಸಾಮರ್ಥ್ಯ ಇದ್ದರೆ ಆತನು ಬಡವನಲ್ಲ ಎಂದು ತೀರ್ಮಾನಿಸುವ ಆಧಾರದಲ್ಲಿ ಬಡತನವನ್ನು ವ್ಯಾಖ್ಯಾನಿಸಿತ್ತು.

1973–74 ನೇ ವರ್ಷದಲ್ಲಿ ಮೊಟ್ಟ ಮೊದಲ ಸರಿಯಾದ ಬಡತನದ ಅಂದಾಜು ಮಾಡಲಾಗಿದ್ದು ಗ್ರಾಮೀಣ ನಗರ ಮಾಸಿಕ ಬಡತನ ರೇಖೆಗಳು ದಿನಕ್ಕೆ 2200/2100 ಕ್ಯಾಲೋರಿ ಆಹಾರ ಸೇವನೆಗೆ ಅವಕಾಶ ಕಲ್ಪಿಸುವ ರೂ 49/56.6 ಎಂದಾಗಿತ್ತು. ಇದರ ಕೆಳಗೆ ಇರುವವರು ಬಡವರು ಎಂದು ಗುರ್ತಿಸಲಾಗಿತ್ತು.

ಆದರೆ ಇದರ ನಂತರ ಅದೇ ವ್ಯಾಖ್ಯಾನವನ್ನು ಬಳಸಲೇ ಇಲ್ಲ. ಮತ್ತು ಮೂಲ ಬಡತನ ರೇಖೆಗಳನ್ನು ಬೆಲೆ ಸೂಚ್ಯಂಕದ ಆಧಾರದಲ್ಲಿ ಕೇವಲ ಸಮಕಾಲೀನಗೊಳಿಸುತ್ತ ಬರಲಾಯಿತು. ದೀರ್ಘಾವಧಿಗಳಿಗೆ ಬಳಸಲಾದ ಬೆಲೆ ಸೂಚ್ಯಂಕಗಳು ಜೀವನ ವೆಚ್ಚಗಳ ಏರಿಕೆಯನ್ನು ಸರಿಯಾಗಿ ಅಳೆಯಲಿಲ್ಲ. ಪ್ರತಿಯೊಂದು ಹೊಸ ಅಧಿಕೃತ ಬಡತನ ರೇಖೆಯು ಅದರ ಹಿಂದಿನ ರೇಖೆಗಿಂತ ಹೆಚ್ಚೆಚ್ಚು ಕಡಿಮೆ ಅಂದಾಜು ಮಾಡಲ್ಪಡುತ್ತಾ ಶಕ್ತಿ ಹಾಗೂ ಪ್ರೋಟೀನ್ ಸೇವನೆಯನ್ನು ಕಡಿಮೆ ಮಾಡಲು ಅವಕಾಶ ನೀಡಿತು.

(ಮುಂದುವರಿಯುವುದು)

→

ಸರ್ವಾಧಿಕಾರಿ ನೀತಿಗಳಿಂದ ಬೇರೆಡೆಗೆ ತಿರುಗಿಸಲು ಮಾಡಿದ ಮಿಲಿಟರಿ ದುಸ್ಸಾಹಸದಿಂದ ಈ ವಿವಾದದ ಪರಿಹಾರಕ್ಕೆ ಇನ್ನಷ್ಟು ತೊಡಕಾಗಿದೆ. ಆಗ ಆಯಕಟ್ಟಿನ ಮಿಲಿಟರಿ ನೆಲೆಯಾದ್ದರಿಂದ ಬ್ರಿಟಿಷ್ ಸರ್ಕಾರಕ್ಕೆ ಅಮೆರಿನ್ ಸರ್ಕಾರ ಸಹ ಕುಮ್ಮಕ್ಕು ನೀಡಿತ್ತು. ಅಮೆರಿನ್ ಸರ್ಕಾರದ ಬೆಂಬಲಿಗರಾದ ಹಲವು ಲ್ಯಾಟಿನ್ ಅಮೆರಿಕ ಸರ್ಕಾರಗಳು 1982ರ ಯುದ್ಧದ ಸಮಯದಲ್ಲಿ ಮತ್ತು ಮೊದಲು ಬ್ರಿಟಿಷ್ ನಿಲುವನ್ನು ಖಂಡಿಸಲಿಲ್ಲ. ಆದರೆ ಈಗ ಲ್ಯಾಟಿನ್ ಅಮೆರಿಕದ ಸನ್ನಿವೇಶ ಪೂರ್ತಿ ಬದಲಾಗಿದೆ. ಈಗಿನ ಮತ್ತು ಕಳೆದ ಅರ್ಜೆಂಟಿನಾ ಸರ್ಕಾರ ಈ ವಿವಾದವನ್ನು ಮಾತುಕತೆ ಮೂಲಕ ಮತ್ತು ನೀತಿಬದ್ಧ ತಳಹದಿ ಮೇಲೆ ಬಗೆಹರಿಸಲು ಮುಂದಾಗಿವೆ. ಇದೇ ಜೂನಿನಲ್ಲಿ ನಡೆದ ವಿಶ್ವಸಂಸ್ಥೆಯ ನಿರ್ವಸಾಹತೀಕರಣ ಸಮಿತಿಯಲ್ಲಿ ಅರ್ಜೆಂಟಿನಾ ಮಾಲ್ವಿನಾಸ್ ವಿವಾದವನ್ನು ಗಂಭೀರವಾಗಿ ಎತ್ತಿದೆ.

ಇದಕ್ಕೆ ಈಗಿನ ಲ್ಯಾಟಿನ್ ಅಮೆರಿಕದ ದೇಶಗಳ ಕೂಟಗಳ ಭಾರೀ ಬೆಂಬಲ ಇದೆ. ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಬ್ರಿಟನನ್ನು ಮಾತುಕತೆಗೆ ಬರಲು ಒಪ್ಪಿಸಬೇಕೆಂದು ಒತ್ತಾಯಿಸಿದೆ. ಅವರು ಈ ನಿಟ್ಟಿನಲ್ಲಿ ಪ್ರಯತ್ನ ಮಾಡುವುದಾಗಿ ಹೇಳಿದ್ದಾರೆ. ಇವ್ಯಾವುದಕ್ಕೂ ಬಗ್ಗದಿದ್ದರೆ ಲ್ಯಾಟಿನ್ ಅಮೆರಿಕದ ದೇಶಗಳ ಕೂಟ ಬ್ರಿಟಿಷ್ ನೌಕೆಗಳಿಗೆ ಬಂದರು ಮತ್ತಿತರ ಸವಲತ್ತುಗಳನ್ನು ನಿರಾಕರಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕಾದೀತು ಎಂದು ಎಚ್ಚರಿಸಿವೆ. ಅಗತ್ಯಬಿದ್ದರೆ ಬ್ರಿಟಿಷ್ ಸರಕುಗಳ ಬಹಿಷ್ಕಾರ ಸಹ ಮಾಡಬೇಕಾದೀತು ಎಂದು ಈ ಪ್ರದೇಶದ ಅತಿ ದೊಡ್ಡ ಆರ್ಥಿಕವಾದ ಬ್ರೆಜಿಲ್ ಹೇಳಿದೆ. ಆದರೂ ಬ್ರಿಟಿಷ್ ಸರ್ಕಾರ ಹಟಮಾರಿತನ ಮುಂದುವರೆದಿದೆ. ಬ್ರಿಟಿಷ್ ಪ್ರಧಾನಿ ಅರ್ಜೆಂಟಿನಾ 'ವಸಾಹತು ಧೋರಣೆ' ತೋರಿಸುತ್ತಿದೆ ಎಂದು ಆಪಾದನೆ ಮಾಡಿದ್ದಾರೆ! ತೈಲ ನಿಕ್ಷೇಪಗಳು ಇರುವ ಸಾಧ್ಯತೆ ಮತ್ತು ಮಿಲಿಟರಿ ನೆಲೆ ಬಿಟ್ಟು ಕೊಡದಂತೆ ಅಮೆರಿಕನ್ ಸರ್ಕಾರದ ಒತ್ತಡ ಈ ಹಟಮಾರಿತನಕ್ಕೆ ಕಾರಣ. ●

JANASHAKTHI KANNADA VARA PATRIKE SEP 09, 2012 Price : Rs. 5/- RNI No. KARKAN /2006/17926 Posted on every Saturday
Postal Reg. No. RNP/KA/BGS/2078/2010-12 Posted at MBC Bangalore GPO

ಮರೆತೇನೆಂದರ ಮರೆಯಲಿ ಹ್ಯಾಂಗ ಮಾವೋ ತ್ಸೇ ತುಂಗ

ಅರಿವಿಗಾಗಿ ತಹತಹ ಮತ್ತು ಸಂಘರ್ಷ

ಜಿ.ಎನ್. ನಾಗರಾಜ್

ಚೇಲವೋಶಿದರಲ್ಲಿ ಒಂದಿಷ್ಟು ಅಕ್ಕಿಯನ್ನು ಹಿಡಿದುಕೊಂಡು ಮನೆ ಬಿಟ್ಟ ಮಾವೋರವರು ತಮ್ಮ ಊರ ಬಳಿಯ ಪಟ್ಟಣಕ್ಕೆ ನಡೆದೇ ಹೋದರು. ಅಲ್ಲಿ ಕಾನೂನು ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಯೊಬ್ಬನ ಜೊತೆ ತಂಗಿದರು. ಅಲ್ಲಿ ಸಿಗುವ ಹೊಸ ಪುಸ್ತಕಗಳನ್ನು ಪಡೆದು ಆತುರದಿಂದ ಓದಿದರು. ಒಬ್ಬ ಶಿಕ್ಷಕನ ಬಳಿ ಶಾಸ್ತ್ರೀಯ ಗ್ರಂಥಗಳ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಅಲ್ಲಿ ಭೇಟಿಯಾದ ಅನೇಕರ ಜೊತೆ ಚರ್ಚಿಸಿದರು. ಹೀಗೆ ಆರು ತಿಂಗಳ ಕಾಲ ಅವರು ಪಡೆದ ತಿಳುವಳಿಕೆಯೂ ಅರಿವಿನ ಗಳಿಕೆಯ ವಿಶಿಷ್ಟ ಮಾರ್ಗವೇ. ತಮ್ಮ ಜೀವನದಲ್ಲಿ ಅನೇಕ ಬಾರಿ ಮಾವೋ ಈ ರೀತಿಯ ಮುಕ್ತ ಜ್ಞಾನಾರ್ಜನೆಯ ಮಾರ್ಗವನ್ನು ಹಿಡಿದಿದ್ದಾರೆ.

ಈ ಸಮಯದಲ್ಲಿ ಅವರು ಒಬ್ಬ ವಿಚಾರವಾದೀಯಾದ ಪ್ರಾಥಮಿಕ ಶಾಲಾ ಶಿಕ್ಷಕನೊಬ್ಬನ ಪರಿಚಯವಾಯಿತು. ಅಂದಿನ (1909–10 ರ ಸಮಯ) ಆ ಕಾಲದಲ್ಲಿ ಬುದ್ಧ ಧರ್ಮವನ್ನು ವಿರೋಧಿಸುತ್ತಿದ್ದ , ಎಲ್ಲ ದೇವರುಗಳನ್ನೂ ತೊಡೆದುಹಾಕಬೇಕು ಎಂದು ಪ್ರತಿಪಾದಿಸುತ್ತಿದ್ದ, ದೇವಾಲಯಗಳನ್ನೆಲ್ಲ ಶಾಲೆಗಳನ್ನಾಗಿ ಪರಿವರ್ತಿಸಬೇಕೆಂದು

ಮಾವೋ ಬಾಲ್ಯದ ಮನೆ : ವಿವರ ಉಪಕರಣಗಳು



ಮಾವೋರವರ ವಿಚಾರ–ವ್ಯಕ್ತಿತ್ವ ರೂಪುಗೊಂಡ ಬಗೆಯನ್ನು ಅರಿಯಲು ಓದಿ ಮಾವೋರವರ ಬಾಲ್ಯದ ಶಿಕ್ಷಣ, ಪ್ರಭಾವ ಬೀರಿದ ಅಂಶಗಳ ಕುರಿತು




ತರುಣ ಮಾವೋ

ಜನರನ್ನು ಒತ್ತಾಯಿಸುತ್ತಿದ್ದ ಈ ಶಿಕ್ಷಕನ ಪ್ರಭಾವಕ್ಕೆ ಮಾವೋ ಒಳಗಾದರು. ಇದೇ ಸಮಯದಲ್ಲಿ ಅವರು " ಚೀನಾ ಪರಾಧೀನವಾಗುತ್ತದೆ " ಎಂಬ ಒಂದು ಕಿರು ಪುಸ್ತಿಕೆಯ ನ್ನು ಓದಿದರು .ಜಪಾನ್ ಈಗಾಗಲೇ ಕೊರಿಯಾ, ಫಾರ್ಮೊಸಾವನ್ನು ಆಕ್ರಮಿಸಿದೆ, ಇಂಡೋಚೀನಾ, ಬರ್ಮಾ ಮೊದಲಾದ ದೇಶಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿವೆ. ಚೀನಾ ಕೂಡ ತುಂಡಾಗಲಿದೆ ಎಂದು ಆ ಪುಸ್ತಿಕೆಯಲ್ಲಿ ವಿವರಿಸಲಾಗಿತ್ತು. ಇದು ಮಾವೋರವರನ್ನು ತಮ್ಮ ದೇಶದ ಭವಿಷ್ಯದ ಬಗ್ಗೆ ಚಿಂತೆಗೆ ಹಚ್ಚಿತು. ಚೀನಾವನ್ನು ಉಳಿಸುವುದು ಎಲ್ಲರ ಕರ್ತವ್ಯವೆಂದು ಅವರು ಯೋಚಿಸಿದರು. ಹೀಗೆ ಅವರಲ್ಲಿ ರಾಜಕೀಯ ಪ್ರಜ್ಞೆಯೂ ಚಿಗುರೊಡೆಯಲು ಪ್ರಾರಂಭವಾಯಿತು. ಈ ಆರು ತಿಂಗಳಲ್ಲಿ ಅವರು ಯಾವ ಶಾಲೆಯೂ ಕಲಿಸದ ಅನೇಕ ವಿಷಯಗಳನ್ನು ಅವರು ಶಾಲೆಯ ಹೊರಗೆ ಕಲಿತರು.

ತಮ್ಮ ಮಗ ಕೈ ತಪ್ಪಿ ಹೋಗುತ್ತಾನೆಂದು ಹೆದರಿದ ಮಾವೋರವರ ತಂದೆ ಅವನನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಒಂದು ಉಪಾಯವನ್ನು ಹುಡುಕಿದರು. ಆ ಪಟ್ಟಣದಲ್ಲಿಯೇ ಇದ್ದ ತಮ್ಮ ಅಕ್ಕಿ ವ್ಯಾಪಾರದ ಒಬ್ಬ ಸಹಚರನ ಅಂಗಡಿಯಲ್ಲಿ ಸೇರಿಕೊಂಡು ವ್ಯಾಪಾರವನ್ನು ಕಲಿಯಲು ಸೂಚಿಸಿದರು. ಬೆಳಗ್ಗೆ ಅಂಗಡಿಯಲ್ಲಿ ಕೆಲಸ ಮಾಡುತ್ತಾ ರಾತ್ರಿ ತಮಗೆ ಬೇಕಾದ ಪುಸ್ತಕಗಳನ್ನು ಪಡೆದು ಓದಿಕೊಳ್ಳಲು ಇದರಿಂದ ಸಹಾಯಕವಾಗುತ್ತದೆಂದು ಮಾವೋ ಕೂಡ ಯೋಚಿಸ ಲಾರಂಭಿಸಿದರು. ಆದರೆ ಅಷ್ಟರಲ್ಲಿ ಅವರಿಗೆ ತಮ್ಮತಾಯಿಯ ಕಡೆಯ ಬಂಧುವೊಬ್ಬನಿಂದ ಆಧುನಿಕ ಶಾಲೆಗಳ ಬಗ್ಗೆ ತಿಳಿಯಿತು. ಅವನು ಅಂತಹ ಶಾಲೆಯೊಂದರಲ್ಲಿ ಓದುತ್ತಿದ್ದ. ಆ ಶಾಲೆಯಲ್ಲಿ ಹೊಸ ವಿಷಯಗಳ ಬಗ್ಗೆ ಹೊಸ ವಿಧಾನದಲ್ಲಿ ಪಾಠ ಮಾಡುತ್ತಿರುವ ಬಗ್ಗೆ ಮಾವೋರವರಿಗೆ ವಿವರಿಸಿದ. ಇದು ಅವರಿಗೆ ಬಹಳ ಹಿಡಿಸಿತು. ಅಂತಹ ಶಾಲೆಗೇ ಸೇರುತ್ತೇನೆಂದು ಹಠ ಹಿಡಿದರು. ಮಾವೋ ತಂದೆಯ ಮಿತ್ರರು ಆಧುನಿಕ ಶಿಕ್ಷಣ ಪಡೆದರೆ ಇನ್ನೂ ಹೆಚ್ಚು ಸಂಪಾದನೆ ಮಾಡಲು ಅನುವಾಗುತ್ತದೆಂದು ಅವರ ಮನವೊಲಿಸಿದರು.

ಆಧುನಿಕ ಶಿಕ್ಷಣ

ಅಂದಿನ ಚೀನಾದಲ್ಲಿ ಹಳೆಯ ಕಾಲದ ಶಿಕ್ಷಣವೇ ವ್ಯಾಪಕವಾಗಿತ್ತು. ಆದರೆ ವಿದೇಶದ ಸಂಪರ್ಕಕ್ಕೆ ಬಂದ ವ್ಯಾಪಾರಿಗಳು ತಮ್ಮ ಮಕ್ಕಳಿಗೆ ಆಧುನಿಕ ಶಿಕ್ಷಣವಿಲ್ಲದಿದ್ದರೆ ಪೆಟ್ಟು ತಿನ್ನಬೇಕಾಗುತ್ತದೆಂದು ಮನಗಂಡು ಕೆಲವೇ ನಗರಗಳಲ್ಲಿ ಆಧುನಿಕ ಶಿಕ್ಷಣ ನೀಡುವ ಶಾಲೆಗಳನ್ನು ತೆರೆದರು. ಅಂತಹುದೊಂದು ಶಾಲೆ ಮಾವೋರವರ ಊರು ಶಾವೋಶಾನ್ ಗೆ ಇಪ್ಪತ್ತೈದು ಕಿ.ಮೀ ದೂರದಲ್ಲಿ ಆರಂಭವಾಗಿತ್ತು.



ಅಡುಗೆ ಮನೆ ಯೊಳಗಿನ ಚಿತ್ರಣ

ಪುಟ 10ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 5600
Editor : S.Y.GURUSHANTH